# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಮಂಗಳವಾರ, ಜನವರಿ 28, 2025

ಸಂಪುಟ : 51 ಸಂಚಿಕೆ : 256 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಅರ್ಜಿದಾರ ರೈತರ ಒಕ್ಕಲೆಬ್ಬಿಸದಂತೆ ಆಗ್ರಹ

**ಅರಣ್ಯ ಭೂಮಿ ಸಾಗುವಳಿದಾರರ ಮೇಲೆ ದೌರ್ಜನ್ಯ ನಡೆಸಿದ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಒತ್ತಾಯ**

**ರೈತ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ಸತ್ಯಾಗ್ರಹ**

ದಾವಣಗೆರೆ, ಜ. 27- ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆ ಅಡಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಲೇವಾರಿಯಾಗದ ಹೊರತು ಅರ್ಜಿದಾರರನ್ನು ಒಕ್ಕಲೆಬ್ಬಿಸಬಾರದು ಎಂಬಿತರೇ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ್ ಬಣ) ವತಿಯಿಂದ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಧರಣಿ ಸತ್ಯಗ್ರಹ ನಡೆಸಲಾಯಿತು.

ಗಾಂಧಿ ವೃತ್ತದಿಂದ ಬೈಕ್ ರ್‍ಯಾಲಿ ಮೂಲಕ ತೆರಳಿದ ಪ್ರತಿಭಟನಾಕಾರರು ದಾರಿಯುದ್ದಕ್ಕೂ ಘೋಷಣೆಗಳನ್ನು ಕೂಗುತ್ತಾ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು.

ಇದೇ ವೇಳೆ ಸಂಘದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ಜಗಳೂರು ತಾಲ್ಲೂಕು ಗೌಡಗೊಂಡನಹಳ್ಳಿ ಗ್ರಾಮದಲ್ಲಿ ಅರಣ್ಯ ಭೂಮಿ ಸಾಗುವಳಿದಾರರ ಮೇಲೆ ದೌರ್ಜನ್ಯ ನಡೆಸಿದ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಗ್ರಾಮದ ಅರಣ್ಯ ಭೂಮಿ ಸಾಗುವಳಿದಾರರ ಅರ್ಜಿಗಳು ವಿಲೇವಾರಿ ಆಗುವವರೆಗೂ ಜಮೀನು ಬಿಡಿಸುವ ಪ್ರಯತ್ನ ಮಾಡಬಾರದೆಂದು ಒತ್ತಾಯಿಸಿದರು.

ಚನ್ನಗಿರಿ ತಾಲ್ಲೂಕಿನಲ್ಲಿ 9 ಸಾವಿರ, ಜಗಳೂರು ತಾಲ್ಲೂಕಿನಲ್ಲಿ 6 ಸಾವಿರ, ದಾವಣಗೆರೆ ತಾಲ್ಲೂಕಿನಲ್ಲಿ 7 ಸಾವಿರಕ್ಕೂ ಅಧಿಕ ಬಗರ್ ಹುಕ್ಕುಂ ಸಾಗುವಳಿದಾರರು ಫಾರ ನಂ. 53 ಮತ್ತು 57 ರಲ್ಲಿ ಅರ್ಜಿ ಸಲ್ಲಿಸಿದ್ದು, ಈ ಎಲ್ಲಾ ಅರ್ಜಿಗಳನ್ನು ಮಾನ್ಯ ಮಾಡಬೇಕು. ಈ ಹಿಂದೆ ಚನ್ನಗಿರಿ ತಾಲ್ಲೂಕಿನ ನಲ್ಲೂರು ಗ್ರಾಮದಿಂದ ಸುಡು (4ನೇ ಪುಟಕ್ಕೆ)

## ತಿದ್ದುಪಡಿ ಪ್ರಸ್ತಾಪಗಳಿಗೆ ವಕ್ಫ್ ಸಮಿತಿ ಒಪ್ಪಿಗೆ

ನವದೆಹಲಿ, ಜ. 27- ವಿವಾದಿತ ಹಾಗೂ ಸರ್ಕಾರದ ಆಸ್ತಿಗಳನ್ನು ಹೊರತುಪಡಿಸಿ ಬಳಕೆ ಸ್ವರೂಪದ ಕಾರಣದಿಂದಾಗಿ ಎಂದು ಹಾಲಿ ವಕ್ಫ್ ಎಂದು ಪರಿಗಣಿಸಲಾಗಿರುವ ಆಸ್ತಿಗಳನ್ನು ಯಥಾ ಸ್ಥಿತಿಯಲ್ಲಿ ಮುಂದುವರೆಸಬೇಕು ಎಂದು ಆಡಳಿತಾರೂಢ ಸದಸ್ಯರು ಸಲ್ಲಿಸಿದ ಪ್ರಸ್ತಾಪಕ್ಕೆ ವಕ್ಫ್ ಮಸೂದೆ ಕುರಿತ ಸಂಸದೀಯ ಸಮಿತಿ ಒಪ್ಪಿಗೆ ನೀಡಿದೆ.

ವಕ್ಫ್ ಕಾಯ್ದೆಯ 14 ಕಲಂಗಳಲ್ಲಿ ತಿದ್ದುಪಡಿ ತರಬೇಕು ಎಂದು ಆಡಳಿತಾರೂಢ ಸದಸ್ಯರು ಸಲ್ಲಿಸಿದ ಪ್ರಸ್ತಾಪಗಳನ್ನು ಸಮಿತಿ ಒಪ್ಪಿಕೊಂಡಿದೆ. ಆದರೆ ವಕ್ಫ್ ತಿದ್ದುಪಡಿ ಮಸೂದೆಯ ಎಲ್ಲಾ 44 ಕಲಂ ಗಳಲ್ಲಿ ತಿದ್ದುಪಡಿ ತರಬೇಕು ಹಾಗೂ ಈಗಿರುವ ಸ್ವರೂಪದಲ್ಲಿ ಕಾಯ್ದೆ ಮುಂದುವರೆಸಬೇಕು ಎಂದು ಪ್ರತಿಪಕ್ಷಗಳ ಸಂಸದರ ಪ್ರಸ್ತಾಪಗಳನ್ನು ಸಮಿತಿ ತಳ್ಳಿ ಹಾಕಿದೆ.

ಬಿಜೆಪಿ ಸಂಸದ ಜಗದಂಬಿಕ ಪಾಲ್ ಅವರ ಅಧ್ಯಕ್ಷತೆಯ ಜಂಟಿ ಸಂಸದೀಯ ಸಮಿತಿಯು ಸೋಮವಾರ ಸಭೆ ನಡೆಸಿ ಈ ನಿರ್ಧಾರಗಳನ್ನು ತೆಗೆದುಕೊಂಡಿದೆ.

ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳನ್ನು ಗಮನಿಸಲಾಗುತ್ತಿದೆ ಎಂದು ಪ್ರತಿಪಕ್ಷಗಳ ಸದಸ್ಯರು ಸಭೆಯಲ್ಲಿ ಆಕ್ಷೇಪಿಸಿದರು. ಬುಧವಾರ ಸಮಿತಿಯು ತನ್ನ ನಿರ್ಣಯವನ್ನು ಅಂಗೀಕರಿಸುವ ನಿರೀಕ್ಷೆ ಇದೆ.

ಪ್ರತಿಪಕ್ಷಗಳ ಸಂಸದರು ಸಮಿತಿ ವರದಿಗೆ ತಮ್ಮ ಭಿನ್ನ ನಿಲುವು ಇದೆ ಎಂದು (2ನೇ ಪುಟಕ್ಕೆ)

### ಮುಡಾ: ಸಿಬಿಐ ತನಿಖೆ ಅರ್ಜಿ ವಿಚಾರಣೆ ಪೂರ್ಣ

## ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು,ಜ.27- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ಬಿಡಿ ನಿವೇಶನಗಳ ಹಂಚಿಕೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿದ ನ್ಯಾಯಾಲಯ ತೀರ್ಪನ್ನು ಕಾಯ್ದಿರಿಸಿದೆ.

ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ರಿಟ್ ಅರ್ಜಿ ಮೇಲಿನ ಮುಂದುವರೆದ ವಿಚಾರಣೆಯನ್ನು ಕೈಗೆತ್ತಿಕೊಂಡ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು, ಇಡೀ ದಿನ ವಾದ-ಪ್ರತಿವಾದ ಆಲಿಸಿ, ತೀರ್ಪು ಕಾಯ್ದಿರಿಸಿದರು.

ಅಲ್ಲದೆ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ನಡೆಸಿದ ಇದುವರೆಗಿನ ತನಿಖಾ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ಅಂತಿಮ ತನಿಖಾ ವರದಿ ಸಲ್ಲಿಕೆಗೆ ಗಡುವು ವಿಸ್ತರಿಸಿ ಆದೇಶಿಸಿತು.

ಇದಕ್ಕೂ ಮುನ್ನ, ದೂರುದಾರ ಸ್ನೇಹಮಯಿ ಕೃಷ್ಣ ಪರ ವಕೀಲ ಮಣೀಂದರ್ ಸಿಂಗ್ ವಾದ ಮಂಡಿಸಿ, ಮುಡಾ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕೆಂಬ ಅರ್ಜಿ ವಿಚಾರಣೆ ವೇಳೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾದ ಮಂಡನೆ ಆಲಿಸುವ ಅಗತ್ಯವಿಲ್ಲ ಎಂದರು.



**ಅಂತಿಮ ತನಿಖಾ ವರದಿ ಸಲ್ಲಿಸಲು ಲೋಕಾಯುಕ್ತರ ಗಡುವು ವಿಸ್ತರಣೆ**

ಇದೇ ಸಂದರ್ಭದಲ್ಲಿ ಹಗರಣ ಸಂಬಂಧ ಲೋಕಾಯುಕ್ತ ಸಂಸ್ಥೆ ತನಿಖೆ ನಡೆಸಿ ಸಿದ್ಧಪಡಿಸಿರುವ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಲಾಯಿತು. ಮಣೀಂದರ್ ಸಿಂಗ್ ವಾದ ಮುಂದುವರೆಸಿ, ಈ ಹಂತದಲ್ಲಿ ಸಿದ್ದರಾಮಯ್ಯ ವಾದ ಮಂಡನೆ ಪರಿಗಣಿಸುವ ಅಗತ್ಯವಿಲ್ಲ, ಶಂಕಿತ ಆರೋಪಿ ತನಿಖಾ ತಂಡ ಆಯ್ಕೆ ಮಾಡಬಾರದು, ಈ ಬಗ್ಗೆ ಸುಪ್ರೀಂಕೋರ್ಟ್ ತೀರ್ಪುಗಳಿವೆ, ಸ್ಥಳೀಯ ಪೊಲೀಸರಿಂದ ತನಿಖೆ ನಡೆದರೆ ನ್ಯಾಯ ದೊರೆಯುವುದು ಸಾಧ್ಯವಿಲ್ಲ, ತನಿಖೆಯನ್ನು ಸಿಬಿಐಗೆ ವಹಿಸಬಹುದು ಎಂಬುದಾಗಿ ಹೇಳಿ ಸುಪ್ರೀಂಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿದರು.

ಕೋರ್ಟ್‌ಗೆ ಸಮಾಧಾನಕರ ಎನ್ನಿಸುವ ಸ್ವತಂತ್ರ ತನಿಖಾ ತಂಡಕ್ಕೆ ತನಿಖೆ ಹೊಣೆ ವಹಿಸಬಹುದು, ತನಿಖೆ ಯಾರು ನಡೆಸಬೇಕೆಂದು ಆರೋಪಿಯನ್ನು ಕೇಳುವ ಅಗತ್ಯವಿಲ್ಲ ಎಂಬುದಾಗಿ ಹೇಳಿ, ಪಂಜಾಬ್, ಗುಜರಾತ್ ಸೇರಿದಂತೆ ಹಲವು ರಾಜ್ಯಗಳ ಪ್ರಕರಣಗಳನ್ನು ಉಲ್ಲೇಖಿಸಿದರು.

ಸುಪ್ರೀಂಕೋರ್ಟ್ ಮಾರ್ಗಸೂಚಿಯನ್ವಯ ಸ್ವತಂತ್ರ ತನಿಖೆ ಅನಿವಾರ್ಯ, ಲೋಕಾಯುಕ್ತ ಪೊಲೀಸರು ರಾಜ್ಯ ಸರ್ಕಾರದ ಅಧೀನದಲ್ಲಿದ್ದಾರೆ. ಹಗರಣದಲ್ಲಿ ರಾಜಕೀಯ ಮುಖಂಡರ ಹೆಸರು ಇರುವುದರಿಂದ ಸ್ಥಳೀಯ (4ನೇ ಪುಟಕ್ಕೆ)

## ಸಿಎಂ ಪತ್ನಿ ಹಾಗೂ ಸಚಿವ ಭೈರತಿಗೆ ನೀಡಿದ್ದ ಇಡಿ ನೋಟಿಸ್‌ಗೆ ತಡೆ

**ಫೆಬ್ರವರಿ 10ರ ವರೆಗೆ ಇಡಿ ನೀಡಿದ್ದ ಸಮನ್ಸ್‌ಗೆ ತಡೆ**

ಬೆಂಗಳೂರು, ಜ.27- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ(ಇಡಿ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಮತ್ತು ಸಚಿವ ಭೈರತಿ ಸುರೇಶ್ ಅವರಿಗೆ ನೀಡಿದ್ದ ನೋಟಿಸ್ ಗೆ ಹೈಕೋರ್ಟ್ ಏಕ ಸದಸ್ಯ ಪೀಠ ಸೋಮವಾರ ತಡೆ ನೀಡಿದೆ.

ಇಡಿ ನೋಟಿ ಸ್ ನೀಡುತ್ತಿದ್ದಂತೆ ಪಾರ್ವತಿ ಸಿದ್ದರಾಮಯ್ಯ ಮತ್ತು ಭೈರತಿ ಸುರೇಶ್ ಅವರು ಇಡಿ ಸಮನ್ಸ್ ಪ್ರಶ್ನಿಸಿ ಧಾರವಾಡ ಏಕಸದಸ್ಯ ಪೀಠಕ್ಕೆ ಎರಡು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿ ದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು, ಫೆಬ್ರವರಿ 10ರ ವರೆಗೆ ಇಡಿ ನೀಡಿದ್ದ ಸಮನ್ಸ್‌ಗೆ ತಡೆ ನೀಡಿದ್ದಾರೆ.

ಈ ಎರಡೂ ಸಮನ್ಸ್‌ಗಳಿಗೂ ಮಧ್ಯಂತರ ತಡೆ ನೀಡಿರುವ ಹೈಕೋರ್ಟ್, ವಿಚಾರಣೆಯನ್ನು ಫೆಬ್ರವರಿ 10ಕ್ಕೆ ಮುಂದೂಡಿದೆ. ಪಾರ್ವತಿ ಮತ್ತು ಭೈರತಿ ಸುರೇಶ್ ಅವರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲರಾದ ಸಿ.ವಿ. (4ನೇ ಪುಟಕ್ಕೆ)

## ಇ.ಡಿ ನೋಟಿಸ್ ಹಿಂದೆ ರಾಜಕೀಯ ಪಿತೂರಿ



ಬೆಂಗಳೂರು,ಜ.27- ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರಿಗೆ ಜಾರಿ ನಿರ್ದೇಶನಾಲಯ ರಾಜಕೀಯ ಪಿತೂರಿಯಿಂದ ನೋಟಿಸ್ ನೀಡಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ವಿರುದ್ಧದ ಪ್ರಕರಣದಲ್ಲೂ ಹೀಗೇ ಆಗಿತ್ತು, ಒಂದು ಪ್ರಕರಣವನ್ನು (4ನೇ ಪುಟಕ್ಕೆ)



**ಕುಂಭಮೇಳದ ಪವಿತ್ರ ಸ್ನಾನದಲ್ಲಿ ಅಮಿತ್ ಷಾ, ಯೋಗಿ**

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹಾಗೂ ಇತರರೊಂದಿಗೆ ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ಮಹಾ ಕುಂಭಮೇಳದ ಸಂದರ್ಭದಲ್ಲಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು.

## ಮಹಾರಾಷ್ಟ್ರದಲ್ಲಿ ಹೆಚ್ಚಿದ ಜಿಬಿಎಸ್ ಪ್ರಕರಣಗಳು : ಕೇಂದ್ರದಿಂದ ತಂಡ ರವಾನೆ

ನವದೆಹಲಿ, ಜ. 27- ಮಹಾರಾಷ್ಟ್ರದಲ್ಲಿ ಗುಲ್ಲೈನ್ ಬ್ಯಾರೆ ಸಿಂಡ್ರೋಮ್ (ಜಿ.ಬಿ.ಎಸ್.) ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಏಳು ಸದಸ್ಯರ ಪರಿಣಿತರ ತಂಡವನ್ನು ರವಾನಿಸಿದೆ.

ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಮೊದಲ ಜಿಬಿಎಸ್ ಪ್ರಕರಣ ಕಾಣಿಸಿಕೊಂಡಿತ್ತು. ಪುಣೆಯಲ್ಲಿ ಸೋಂಕಿತರ ಸಂಖ್ಯೆ ನೂರರ ಗಡಿ ದಾಟಿದೆ. ಸೋಂಕಿತ ವ್ಯಕ್ತಿಯೊಬ್ಬರು ಸೊಲ್ಲಾಪುರದಲ್ಲಿ ಸಾವನ್ನಪ್ಪಿದ್ದರು.

ಸೋಂಕಿನ ಮೇಲೆ ನಿಗಾ ವಹಿಸಲು ಹಾಗೂ ಪರಿಸ್ಥಿತಿ ನಿರ್ವಹಿಸಲು ನೆರವಾಗಲು ಕೇಂದ್ರ ಸರ್ಕಾರ ಪರಿಣಿತರ ತಂಡವನ್ನು ರವಾನಿಸಿದೆ.

ಜಿಬಿಎಸ್ ಅಪರೂಪದ ಸೋಂಕು ಪ್ರಕರಣವಾಗಿದೆ. ಇದರಿಂದ ಹಠಾತ್ತನೆ ಮಾಂಸಖಂಡಗಳಲ್ಲಿ ದೌರ್ಬಲ್ಯ ಕಾಣಿಸಿಕೊಳ್ಳುತ್ತದೆ. ತೀವ್ರ ದೌರ್ಬಲ್ಯದಿಂದಾಗಿ ನಡೆಯುವುದು ಕಷ್ಟವಾಗುತ್ತದೆ. ಬ್ಯಾಕ್ಟೀರಿಯಾ ಹಾಗೂ ವೈರಲ್ ಸೋಂಕಿನ ಕಾರಣದಿಂದಾಗಿ ಜಿಬಿಎಸ್ ಬರುತ್ತದೆ.

ಇದರಿಂದ ರೋಗ ನಿರೋಧಕ ಶಕ್ತಿ ದುರ್ಬಲವಾಗುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ. ಈ ಸೋಂಕು ಮಹಾಮಾರಿಯಾಗಿ ಹರಡುವುದಿಲ್ಲ. ಬಹುತೇಕ ಸೋಂಕಿತರು ಚಿಕಿತ್ಸೆಯಿಂದ ಚೇತರಿಸಿಕೊಳ್ಳುತ್ತಾರೆ.

## ಸಂವಿಧಾನವೇ ಭಾರತೀಯರ ಭಗವದ್ಗೀತೆ

### ರಾಣೇಬೆನ್ನೂರು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಪ್ರಕಾಶ ಕೋಳಿವಾಡ



ರಾಣೇಬೆನ್ನೂರು,ಜ.27- ನಮ್ಮ ಸಂವಿಧಾನದ ಆಚರಣೆಯೇ ಗಣರಾಜ್ಯೋತ್ಸವ. ಸಮಾನತೆ, ಭ್ರಾತೃತ್ವ, ಸೋದರತ್ವ ಮತ್ತು ವೈಚಾರಿಕತೆ ಹಾಗೂ ವೈಜ್ಞಾನಿಕವಾಗಿ ದೇಶವನ್ನು ಪ್ರಗತಿಯತ್ತ ಮುನ್ನಡೆಸಲು ರಚಿಸಿದ ನಮ್ಮ ಸಂವಿಧಾನವೇ ಭಾರತೀಯರ ಭಗವದ್ಗೀತೆ ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ನಗರಸಭೆ ಕ್ರೀಡಾಂಗಣದಲ್ಲಿ ನಡೆದ 76ನೇ ಪ್ರಜಾರಾಜ್ಯೋತ್ಸವದ ಅಧ್ಯಕ್ಷತೆ ವಹಿಸಿದ್ದ ಶಾಸಕ ಪ್ರಕಾಶ ಕೋಳಿವಾಡ, ಪೊಲೀಸ್, ಗೃಹರಕ್ಷಕ ದಳ, ಎನ್‌ಸಿಸಿ ಹಾಗೂ ಶಾಲಾ ಮಕ್ಕಳಿಂದ ವಂದನೆ ಸ್ವೀಕರಿಸಿ ಮಾತನಾಡಿದರು.

ನಗರದ ದೊಡ್ಡಕೆರೆ ಅಭಿವೃದ್ಧಿ, ತುಂಗಾ ಮೇಲ್ದಂಡೆ ಯೋಜನೆಯ ತಡೆಗೋಡೆ ನಿರ್ಮಾಣ, ಗ್ರಾಮಗಳಲ್ಲಿ ವಿವಿಧ ಜನಪರ ಅಭಿವೃದ್ಧಿ ಕಾಮಗಾರಿಗಳ ಜೊತೆಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನದ 271 ಕೋಟಿ ಸೇರಿದಂತೆ ತಾಲ್ಲೂಕಿನಲ್ಲಿ ಇದುವರೆಗೆ ಒಟ್ಟು ಸರ್ಕಾರ 376 ಕೋಟಿ ಅನುದಾನ ನೀಡಿದೆ ಎಂದು ಹೇಳಿದರು.

ಮೊದಲಿಗೆ ಅಶೋಕ ವೃತ್ತದಲ್ಲಿ ನಂತರ ಕ್ರೀಡಾಂಗಣದಲ್ಲಿ ತಹಶೀಲ್ದಾರ್ ಆರ್.ಎಚ್. ಭಾಗವಾನ ಧ್ವಜವಂದನೆ ನೆರವೇರಿಸಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಅಧ್ಯಕ್ಷ ಮಂಜನಗೌಡ ಪಾಟೀಲ, ಮಾರ್ಕೆಟಿಂಗ್ ಸೊಸೈಟಿ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರು, ನಗರಸಭೆ ನಾಮಕರಣ ಸದಸ್ಯರು, ವಿವಿಧ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಲಯನ್ಸ್ ಶಾಲೆಯಲ್ಲಿ ಹಾಗೂ ಸಿದ್ದೇಶ್ವರ ಬ್ಯಾಂಕ್ ನಲ್ಲಿ ಮಲ್ಲೇಶಣ್ಣ ಅರಕೇರಿ, (4ನೇ ಪುಟಕ್ಕೆ)

## ಹೊನ್ನಾಳಿ ಶಿಕ್ಷಕಿ ಕಾಣೆ; ಆತ್ಮಹತ್ಯೆ ಶಂಕೆ



ದಾವಣಗೆರೆ, ಜ. 27- ಹೊನ್ನಾಳಿ ಪಟ್ಟಣದ ದುರ್ಗಿಗುಡಿ ನಿವಾಸಿ ಸರ್ಕಾರಿ ಶಾಲೆಯ ಶಿಕ್ಷಕಿಯೊಬ್ಬರು ಭಾನುವಾರ ಮಧ್ಯಾಹ್ನದಿಂದ ಕಾಣೆಯಾಗಿದ್ದು, ಫೈನಾನ್ಸ್ ಕಂಪನಿ ಸಾಲಗಾರರ ಕಿರುಕುಳದಿಂದ ಬೇಸತ್ತು ತುಂಗಭದ್ರಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಕುಟುಂಬದವರು ಶಂಕಿಸಿದ್ದಾರೆ.

ಹಾವೇರಿ ಜಿಲ್ಲೆ ರಟ್ಟಿಹಳ್ಳಿ ತಾಲ್ಲೂಕಿನ ತುಮ್ಮಿನಕಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಪುಷ್ಪಲತಾ ಎಂ.ಟಿ. (46) ಕಾಣೆಯಾದವರು. ಇಲ್ಲಿನ ರಾಘವೇಂದ್ರ ಮಠದ ಬಳಿ ಸ್ವಲ್ಪ ಹೊತ್ತು ಕುಳಿತು, ಬಳಿಕ ನದಿಗೆ ಇಳಿದಿರುವುದು ಸಿ.ಸಿ. ಟಿವಿ ಫೂಟೇಜ್‌ನಲ್ಲಿ ಪತ್ತೆಯಾಗಿದೆ. ಅವರ ಚಪ್ಪಲಿ ಹಾಗೂ ಬ್ಯಾಗ್ ಸಮೀಪದಲ್ಲೇ ದೊರೆತಿವೆ.

ಹಾಲೇಶ್ ಅವರು ನೀಡಿದ ದೂರು ಆಧರಿಸಿ, ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಶಿಕ್ಷಕಿ ಕಾಣೆಯಾದ ಬಗ್ಗೆ ಪ್ರಕರಣ ದಾಖಲಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ, ಮುಳುಗು ತಜ್ಞರು ಸೋಮವಾರ ಸಂಜೆವರೆಗೂ ನದಿಯಲ್ಲಿ ಶೋಧ ಕಾರ್ಯ ನಡೆಸಿದ್ದು ಪುಷ್ಪಲತಾ ಅವರು ಪತ್ತೆಯಾಗಿಲ್ಲ.

**ಎಸ್ಪಿ ಸ್ಪಷ್ಟನೆ:** ಶಿಕ್ಷಕಿ ಪುಷ್ಪಲತಾ ಫೈನಾನ್ಸ್ ಸಾಲದ ಸುಳಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೋ ಇಲ್ಲವೋ ಎಂಬುದು ಸ್ಪಷ್ಟವಾಗಿಲ್ಲ ಎಂದು ಎಸ್ಪಿ ಉಮಾ ಪ್ರಶಾಂತ್ ಹೇಳಿದ್ದಾರೆ.

ಶಿವಮೊಗ್ಗದ ಟಾಟಾ ಕ್ಯಾಪಿಟಲ್ ಫೈನಾನ್ಸ್ ನಲ್ಲಿ 35 ರಿಂದ 40 ಲಕ್ಷ ರೂ. ಸಾಲ ಪಡೆದಿರುವ ಮಾಹಿತಿ ತಿಳಿದು ಬಂದಿದೆ. ನದಿಗೆ ಹಾರಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟತೆ ಇಲ್ಲ. ಈ ಘಟನೆಗೆ ಸಂಬಂಧಿಸಿದಂತೆ ಇನ್ನೂ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿಲ್ಲ ಎಂದವರು ಹೇಳಿದ್ದಾರೆ. ಪೊಲೀಸ್ ಇಲಾಖೆಯಿಂದ ಕೂಡ ಶಿಕ್ಷಕಿ ತುಂಗಭದ್ರಾ ನದಿಗೆ ಹಾರಲು ಕಾರಣವೇನು ಎಂಬ ಕುರಿತಂತೆ ಮಾಹಿತಿ ಕಲೆ ಹಾಕುತ್ತಿದ್ದೇವೆ. ದೂರು ದಾಖಲಾದ ಬಳಿಕ, ಮಾಹಿತಿ ಕಲೆ ಹಾಕಿದ ನಂತರ ಶಿಕ್ಷಕಿ ನದಿಗೆ ಹಾರಿದ್ದರ ಕುರಿತಂತೆ ಸ್ಪಷ್ಟ ಮಾಹಿತಿ ಸಿಗಲಿದೆ ಎಂದು ಉಮಾ ಪ್ರಶಾಂತ್ ತಿಳಿಸಿದ್ದಾರೆ.



## ಐಸಿಸಿ ಮಹಿಳಾ ಏಕದಿನ 2024 ವರ್ಷದ ಕ್ರಿಕೆಟರ್ ಆಗಿ ಸ್ಮೃತಿ ಮಂದಾನಾ

ದುಬೈ ಜ. 27 - ಐಸಿಸಿ ಮಹಿಳಾ ಏಕದಿನ ಪಂದ್ಯದ 2024ರ ವರ್ಷದ ಮಹಿಳಾ ಆಟಗಾರ್ತಿಯಾಗಿ ಸ್ಮೃತಿ ಮಂದಾನಾ ಆಯ್ಕೆಯಾಗಿದ್ದಾರೆ. ಭಾರತೀಯ ತಂಡದ ಉಪನಾಯಕಿಯೂ ಆಗಿರುವ ಅವರು 2024ರಲ್ಲಿ 747 ರನ್ ಸಿಡಿಸಿದ್ದರು.

## ಸಂಸ್ಕೃತ ವಿಶ್ವವಿದ್ಯಾಲಯದಿಂದ ಶ್ರೀಶೈಲ ಜಗದ್ಗುರುಗಳ ಗ್ರಂಥ ಪ್ರಕಟಣೆ



ದಾವಣಗೆರೆ, ಜ.27- 'ಸಿದ್ಧಾಂತ ಶಿಖಾಮಣಿ - ಭಗವದ್ಗೀತೆಯೋ : ಮೀಮಾಂಸಾ' ಎಂಬ ಗ್ರಂಥವನ್ನು ಪ್ರಕಟಿಸಲು ಕ್ರಮ ಕೈಗೊಂಡಿರುವುದಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರು ತಿಳಿಸಿದ್ದಾರೆ.

ಶ್ರೀಶೈಲ ಪೀಠದ ಜಗದ್ಗುರು ಶ್ರೀ ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರು ಈ ಗ್ರಂಥವನ್ನು ರಚಿಸಿದ್ದು, ಇದು ಬಿಎ ತರಗತಿಗಳಿಗೆ ಉಪಯುಕ್ತ ಪಠ್ಯ ಪುಸ್ತಕವಾಗಿದೆ ಎಂದು ಅವರು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಈ ಗ್ರಂಥವನ್ನು ಮುದ್ರಿಸಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಶಿಫಾರಸ್ಸು ಮಾಡಿದ್ದು, ಅದರಂತೆ ಗ್ರಂಥದ ಮುದ್ರಣ ಕಾರ್ಯ ಕೈಗೊಳ್ಳಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಶ್ರೀಶೈಲ ಪೀಠದ ಜಗದ್ಗುರುಗಳ ರಚನೆಯ ಗ್ರಂಥವನ್ನು ಮುದ್ರಿಸುವಂತೆ ಹರಿಹರದ ಶ್ರೀ ಜ.ಪಂ.ವಿ. ವಿದ್ಯಾಪೀಠದ ಕಾರ್ಯದರ್ಶಿ ಆರ್.ಟಿ. ಪ್ರಶಾಂತ್ ದುಗ್ಗತ್ತಿಮಠ ಅವರು ಮಾಡಿಕೊಂಡ ಮನವಿಯ ಮೇರೆಗೆ ಸಂಸ್ಕೃತ ವಿಶ್ವವಿದ್ಯಾಲಯವು ಈ ಕ್ರಮ ಕೈಗೊಂಡಿದೆ.


**ಹತ್ತನೇ ವರ್ಷದ ಪುಣ್ಯಸ್ಮರಣೆ**



ಲಿಂ|| ಹೆಚ್.ಡಿ. ಶೇಖರಪ್ಪನವರು
ನಿವೃತ್ತ ಮುಖ್ಯೋಪಾಧ್ಯಾಯರು, ಅತ್ತಿಗೆರೆ
ಜನನ : 03-09-1945 ನಿಧನ : 28.01.2015

ಗುರುವಾಗಿ, ಹರನಾಗಿ ಮಾನವತೆ ಮೇಳೈಸಿ
ನಮಗಾಗಿ ಧರೆಗಿಳಿದು ವಿವೇಕ ನೀಡಿದೆ.
ಪರಮ ಆತ್ಮದ ದಾರ್ಶನಿಕ ದೇವ
ಹಂಸ ನ್ಯಾಯ, ಅಧ್ಯಾತ್ಮದ ಸಾಧಕ,
ಸಪ್ತಚಕ್ರಗಳ ನೆಲೆ ಮೀರಿದ ತಂದೆ
ಭರತಮಾತೆ ಗರ್ವ ಪಡುವಂತ
ವಿವೇಕಾನಂದರ ಹರಸಿ ಬೆಳೆಸಿದ ಪರಮ
ಪುರುಷ ನಿಮಗೆ ನಮ್ಮ ಕೋಟಿ ನಮನ...

ಇಂತಿ ದುಃಖತಪ್ತರು :
ಪತ್ನಿ: ಶ್ರೀಮತಿ ಸುನಂದಮ್ಮ ಹಾಗೂ ಕುಟುಂಬ ವರ್ಗದವರು



**ಹನ್ನೊಂದನೇ ವರ್ಷದ ಚಿರಸ್ಮರಣೆ**



ದಿ|| ಶ್ರೀ ಸಿ. ಪಾಂಡುರಂಗ
ಜನನ : 01.07.1942 ನಿಧನ : 28.01.2014

ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ಬಿ. ವನಜಾಕ್ಷಮ್ಮ
ಮಕ್ಕಳು : ಡಾ. ಎಸ್.ಪಿ. ಮುರುಳೀಧರ
ಎಸ್.ಪಿ. ಶ್ರೀಧರ, ಡಾ. ಎಸ್.ಪಿ. ಮಧು
ಮತ್ತು ಸೊಸೆಯಂದಿರು, ಮೊಮ್ಮಕ್ಕಳು
ಹಾಗೂ ಬಂಧು-ಮಿತ್ರರು.

## ಡಿ.ಕೆ ಮಾಧವಿಗೆ ಏಷಿಯಾ ಪೆಸಿಫಿಕ್ ಐಕೋನಿಕ್ ಅವಾರ್ಡ್



ದಾವಣಗೆರೆ, ಜ.27- ನಮನ ಅಕಾಡೆಮಿ ಸಂಸ್ಥಾಪಕ ಕಾರ್ಯದರ್ಶಿ ಡಿ.ಕೆ ಮಾಧವಿ ಅವರಿಗೆ '2025ರ ಏಷಿಯಾ ಪೆಸಿಫಿಕ್ ಐಕೋನಿಕ್ ಅವಾರ್ಡ್' ಲಭಿಸಿದೆ.

ಭರತನಾಟ್ಯ ಕಲೆಯನ್ನು ಭಾರತ ಮಾತ್ರವಲ್ಲದೇ, ಜಾಗತೀಕ ಮಟ್ಟದಲ್ಲಿ ಪ್ರಸಾರ ಮಾಡುವಲ್ಲಿ ಯಶಸ್ಸು ಸಾಧಿಸಿರುವುದು ಮತ್ತು ಕಲಾ ಪ್ರಪಂಚದಲ್ಲಿ ಮಾಧವಿ ಅವರು ಮಾಡಿದ ಸಾಧನೆ ಹಾಗೂ ಸೇವೆಯನ್ನು ಗುರುತಿಸಿ 'ಇಂಟರ್ ನ್ಯಾಷನಲ್ ಕಲ್ಚರಲ್ ಫೆಸ್ಟ್‌ಕೌನ್ಸಿಲ್ ಆಫ್ ಇಂಡಿಯಾ ಮತ್ತು ಗ್ಲೋಬಲ್ ಫೀಸ್ ಫೌಂಡೇಶನ್' ಈ ಪ್ರಶಸ್ತಿಯನ್ನು ನೀಡಿದೆ. ಇಂಡೋನೇಷಿಯಾದ ಬಾಲಿಯ ಏಸ್ಟಿನ್ ಕಾನ್ಫರೆನ್ಸ್ ಹಾಲ್‌ನಲ್ಲಿ ಕಳೆದ ವಾರ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

## ಪ್ರಸ್ತಾಪಗಳಿಗೆ ವಕ್ಫ್ ಸಮಿತಿ ಒಪ್ಪಿಗೆ

(1ನೇ ಪುಟದಿಂದ) ತಿಳಿಸುವ ಸಾಧ್ಯತೆ ಇದೆ.

ಜನವರಿ 31 ರಿಂದ ಸಂಸತ್ತಿನ ಬಜೆಟ್ ಅಧಿವೇಶನ ಆರಂಭವಾಗಲಿದೆ. ಅಧಿವೇಶನದ ಮೊದಲ ಭಾಗದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಮಸೂದೆಗೆ ಅಂಗೀಕಾರ ಪಡೆಯುವ ನಿರೀಕ್ಷೆ ಇದೆ. ಲೋಕಸಭೆ ಹಾಗೂ ರಾಜ್ಯಸಭೆ ಎರಡರಲ್ಲೂ ಮೈತ್ರಿಕೂಟ ಬಹುಮತ ಹೊಂದಿದೆ ಎಂದು ಮೂಲಗಳು ಹೇಳಿವೆ.

ಸಮಿತಿಯ ಪ್ರಕ್ರಿಯೆಗಳು ಅಣಕದ ರೂಪದಲ್ಲಿ ನಡೆದಿವೆ. ನೂತನ ಕಾಯ್ದೆಗೆ ಸಂಸತ್ತು ಅಂಗೀಕಾರ ನೀಡಿದರೆ ಅದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಲಿದ್ದೇವೆ ಎಂದು ಡಿಎಂಕೆ ಸಂಸದ ಎ.ರಾಜ ತಿಳಿಸಿದ್ದಾರೆ. ಆದರೆ ಈ ಆರೋಪಗಳನ್ನು ತಳ್ಳಿ ಹಾಕಿರುವ ಸಮಿತಿಯ ಅಧ್ಯಕ್ಷ ಜಗದಂಬಿಕ ಪಾಲ್, ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಎಲ್ಲಾ ತಿದ್ದುಪಡಿಗಳನ್ನು ಪರಿಗಣಿಸಲಾಗಿದೆ. ಬಹುಮತದ ಆಧಾರದ ಮೇಲೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪ್ರಸ್ತಾಪಿತ ತಿದ್ದುಪಡಿಗಳ ಕಾರಣದಿಂದಾಗಿ ಕಾಯ್ದೆ ಉತ್ತಮ ಹಾಗೂ ಪರಿಣಾಮಕಾರಿ ಆಗಲಿದೆ ಎಂದಿದ್ದಾರೆ.

ಸಮಿತಿ ಕಾಯ್ದೆಯಲ್ಲಿ ತಿದ್ದುಪಡಿಗೆ ಮಾಡಿರುವ ಪ್ರಸ್ತಾಪಗಳನ್ನು ಸರ್ಕಾರ ಒಪ್ಪಿಕೊಳ್ಳಲು ಬದ್ಧವಾಗಿದೆ ಎಂದವರು ಹೇಳಿದ್ದಾರೆ.

## ಹಳೇಬಾತಿ ಹಾ.ಉ.ಸ. ಸಂಘಕ್ಕೆ ಆಯ್ಕೆ



ದಾವಣಗೆರೆ, ಜ. 27- ಹಳೇಬಾತಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ರತ್ನಮ್ಮ ಮಾಗಾನಹಳ್ಳಿ ಹನುಮಂತಪ್ಪ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಭಾಗ್ಯಶ್ರೀ ತಿಳಿಸಿದ್ದಾರೆ.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ನಾಳೆ ಅವರಾತ್ರಿ ಅಮವಾಸ್ಯೆ



ದಾವಣಗೆರೆ, ಜ. 27 - ದಾವಣಗೆರೆಯ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಅವರಾತ್ರಿ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 29ರ ಬುಧವಾರ ಬೆಳಿಗ್ಗೆ 6.30ಕ್ಕೆ ಅಭಿಷೇಕ - ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ. ಪಾದಯಾತ್ರೆ ಟ್ರಸ್ಟ್ ಇವರು ಸೇವಾಕರ್ತರಾಗಿದ್ದಾರೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ, ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ವಾಲ್ಮೀಕಿ ಜಾತ್ರೆ : ರಾಜನಹಳ್ಳಿ ಮಠದಲ್ಲಿ ಇಂದು ಹಂದರಕಂಬ ಪೂಜೆ

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಫೆ.8 ಮತ್ತು 9 ರಂದು ಹಮ್ಮಿಕೊಂಡಿರುವ 7ನೇ ವರ್ಷದ ವಾಲ್ಮೀಕಿ ಜಾತ್ರೆಯ ಅಂಗವಾಗಿ ಇಂದು ಬೆಳಿಗ್ಗೆ 10.30ಕ್ಕೆ ಶ್ರೀಮಠದ ಆವರಣದಲ್ಲಿ ಪೆಂಡಾಲ್ ನಿರ್ಮಾಣಕ್ಕೆ ಹಂದರಕಂಬ ಪೂಜೆಯನ್ನು ಡಾ. ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮತ್ತು ಜಾತ್ರಾ ಸಮಿತಿ ಅಧ್ಯಕ್ಷರೂ ಆದ ಶಾಸಕ ಬಿ.ದೇವೇಂದ್ರಪ್ಪ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ.

# ಸಮುದಾಯದ ಆಶೋತ್ತರಗಳಿಗೆ ಸ್ಪಂದಿಸುವ ಜನಜಾಗೃತಿ ಸಮಾವೇಶ

### ಹಿರೆಮೇಗಳಗೆರೆಯಲ್ಲಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಆಹ್ವಾನ ನೀಡುವ ಕಾರ್ಯಕ್ರಮ



ಹರಪನಹಳ್ಳಿ, ಜ.27- ಸಮುದಾಯದ ಜನರ ಆಶೋತ್ತರಗಳಿಗೆ, ಸಾಂವಿಧಾನಿಕ ಬೇಡಿಕೆಗಳಿಗೆ ಸ್ಪಂದಿಸುವಂತೆ ಬೃಹತ್ ಜನಜಾಗೃತಿ ಸಮಾವೇಶದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸುವ ಉದ್ದೇಶದೊಂದಿಗೆ ಜಾತ್ರಾ ಮಹೋತ್ಸವವನ್ನು ಪ್ರತಿ ವರ್ಷ ಆಚರಿಸಲಾಗುತ್ತಿದೆ ಎಂದು 7ನೇ ವರ್ಷದ ಮಹರ್ಷಿ ವಾಲ್ಮೀಕಿ ಜಾತ್ರೆಯ ರಾಜ್ಯ ಸಂಚಾಲಕ ಶ್ರೀನಿವಾಸ ದಾಸಕರಿಯಪ್ಪ ಹೇಳಿದರು.

ತಾಲ್ಲೂಕಿನ ಹಿರೆಮೇಗಳಗೆರೆಯಲ್ಲಿ ಹರಿಹರದ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಬರುವ ಫೆಬ್ರವರಿ 8 ಮತ್ತು 9 ರಂದು ಜರುಗಲಿರುವ ವಾಲ್ಮೀಕಿ ಜಾತ್ರೆಯ ಅಂಗವಾಗಿ ತಾಲ್ಲೂಕಿನ ಹೊಸಹಳ್ಳಿ, ಚೌಡಾಪುರ, ಗೊಲ್ಲರಹಟ್ಟಿ, ಜಂಬು ಲಿಂಗನಹಳ್ಳಿ ಶ್ರೀಕಂಠಪುರ, ಹಿರೇಮೇಗಳಗೇರಿ, ಅರೆ ಬಸಾಪುರ, ವೊಡ್ಡಿನಹಳ್ಳಿ, ಪೋತಲಕಟ್ಟೆ, ಚಿಕ್ಕಮೇಗಳಗೇರಿ ಗ್ರಾಮಗಳಲ್ಲಿ ಸಂಚರಿಸಿ ಜಾತ್ರೆಗೆ ಅಹ್ವಾನ ನೀಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೀಸಲಾತಿ ಹೆಚ್ಚಳ ಹೋರಾಟದಿಂದ ನಮ್ಮ ಸಮುದಾಯಕ್ಕೆ ಮೀಸಲಾತಿ ಹೆಚ್ಚಳವಾಗಿದ್ದು, ನಮ್ಮ ಸಮಾಜದ ಮಕ್ಕಳಿಗೆ ಶೈಕ್ಷಣಿಕ, ಉದ್ಯೋಗದಲ್ಲಿ ಸಾಕಷ್ಟು ಅವಕಾಶಗಳು ಸಿಕ್ಕಿವೆ.

ಹೋರಾಟ ನಿಂತ ನೀರಲ್ಲ ಅದು ನಿರಂತರ ಎಂಬಂತೆ ಸಮುದಾಯದ ಇನ್ನೂ ಹತ್ತು ಹಲವು ಬೇಡಿಕೆಗಳಿಗೆ ಧ್ವನಿಯಾಗಲು ಈ ಜಾಗೃತಿಗಾಗಿ ಜಾತ್ರೆ ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ಸಮುದಾಯದ ಎಲ್ಲರ ಮೇಲಿದೆ ಎಂದರು.

ವಾಲ್ಮೀಕಿ ನಾಯಕ ಸಮುದಾಯದ ಅಧ್ಯಕ್ಷ ವೈ.ಡಿ. ಅಣ್ಣಪ್ಪ ಮಾತನಾಡಿ, ವಾಲ್ಮೀಕಿ ನಾಯಕ ಸಮಾಜ ಶೈಕ್ಷಣಿಕವಾಗಿ ಮುಂದೆ ಬರಬೇಕು. ಅಂಬೇಡ್ಕರ್ ಹೇಳುವ ಹಾಗೆ ಶಿಕ್ಷಣ ಹುಲಿಯ ಹಾಲು ಇದ್ದ ಹಾಗೆ. ಶಿಕ್ಷಣ ಕಲಿತವರು ಘರ್ಜಿಸುತ್ತಾರೆ.

ನಮಗೆ ಮೀಸಲಾತಿ ಹೆಚ್ಚಳವಾಗಿದೆ ಎಂದು ಕೈಕಟ್ಟಿ ಕುಳಿತುಕೊಳ್ಳದೇ ಸಮಾಜದ ಜಲ್ವಂತ ಸಮಸ್ಯೆಗಳು ಇದ್ದು, ಪ್ರಮುಖವಾಗಿ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದುಕೊಂಡವರಿಂದ ನಿಜವಾದ ನಾಯಕರಿಗೆ ಅನ್ಯಾಯವಾಗುತ್ತಿದ್ದು, ನಾವು ಸಂಘಟಿತರಾಗಬೇಕು, ಜಾಗೃತರಾಗಬೇಕು ಎಂದರು.

ಜಾತ್ರಾ ಸಮಿತಿಯ ತಾಲ್ಲೂಕು ಅಧ್ಯಕ್ಷ ಹಿರೆಮೇಗಳಗೇರಿ ಲಕ್ಕಳ್ಳಿ ಹನುಮಂತಪ್ಪ ಮಾತನಾಡಿ, ತಾಲ್ಲೂಕಿನ ಪ್ರತಿ ಗ್ರಾಮದಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹರ್ಷಿ ವಾಲ್ಮೀಕಿ ಜಾತ್ರೆಯಲ್ಲಿ ಭಾಗವಹಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಈ ಸಂದರ್ಭದಲ್ಲಿ ಮಹಿಳಾ ಘಟಕದ ಅಧ್ಯಕ್ಷರಾದ ಹಲವಾಗಲು ಹೆಚ್.ಟಿ ವನಜಾಕ್ಷಮ್ಮ, ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಶಿರಹಟ್ಟಿ ದಂಡೆಪ್ಪ, ಮುಖಂಡರಾದ ಬಾಲೇನಹಳ್ಳಿ ರೇವಣಸಿದ್ದಪ್ಪ, ತೆಲಿಗಿ ಅಂಜಿನಪ್ಪ, ನಿಟ್ಟೂರು ಸಣ್ಣ ಹಾಲಪ್ಪ, ಟಿ.ಪದ್ಮಾವತಿ ಮಾತನಾಡಿದರು.

ಶಾಮನೂರು ಪ್ರವೀಣ, ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷ ಶ್ರೀನಿವಾಸ, ಸಮಾಜದ ಪ್ರಧಾನ ಕಾರ್ಯದರ್ಶಿ ಜಿಟ್ಟಿನಕಟ್ಟಿ ಎಚ್.ಕೆ. ಮಂಜುನಾಥ, ಸಮಾಜದ ಉಪಾಧ್ಯಕ್ಷ ಮಂಡಕ್ಕಿ ಸುರೇಶ. ತೆಲಿಗಿ ಅಂಜಿನಪ್ಪ, ಯಡಿಹಳ್ಳಿ ಮಂಜುಳಾ, ಎಲ್.ಗಂಗಪ್ಪ, ಹಲವಾಗಲು ಶಿವಯೋಗಿ, ಮೈದೂರು ಮಾರುತಿ ಸೇರಿದಂತೆ ಇತರರು ಇದ್ದರು.

## ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಜ. 27 - ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಪ್ರಶಸ್ತಿ ನೀಡಲು ಆತ್ಮಸ್ಥೈರ್ಯದಿಂದ ಹೋರಾಡಿ ಜೀವನೋಪಾಯದಿಂದ ಪಾರು ಮಾಡಿದಂತಹ ಮಹಿಳೆಯ ರನ್ನು ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಪರಿಗಣಿಸಲು ಮಹಿಳೆಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಅರ್ಹ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳನ್ನೊಳಗೊಂಡಂತೆ ಕ್ರೀಡೆ, ಕಲೆ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಮಹಿಳೆಯರು ಅರ್ಜಿ ಸಲ್ಲಿಸಬಹುದು.

ಅರ್ಜಿ ನಮೂನೆ ಗಳನ್ನು ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸರ್ಕಾರಿ ಬಾಲಕರ ಬಾಲಮಂದಿರ ಕಟ್ಟಡ, 14ನೇ ಮುಖ್ಯರಸ್ತೆ, ಕುವೆಂಪು ನಗರ, ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ಪಡೆದು ಭರ್ತಿ ಮಾಡಿ ದ್ವಿ-ಪ್ರತಿಯಲ್ಲಿ ಫೆಬ್ರವರಿ 5 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08192-264056 ಸಂಪರ್ಕಿಸಲು ಉಪನಿ ರ್ದೇಶಕ ರಾಜಾನಾಯ್ಕ ತಿಳಿಸಿದ್ದಾರೆ.

## ನಗರದದಲ್ಲಿ ಉಚಿತ ಕೈ ಕಸೂತಿ ತರಬೇತಿ

ದಾವಣಗೆರೆ, ಜ. 27- ಭಾರತ ವಿಕಾಸ ಪರಿಷತ್ ಗೌತಮ ಶಾಖೆ ದಾವಣಗೆರೆ ವತಿಯಿಂದ ಇಲ್ಲಿನ ವಿದ್ಯಾನಗರದಲ್ಲಿ ಮಹಿಳೆಯರಿಗೆ ಉಚಿತ ಕೈ ಕಸೂತಿ ತರಬೇತಿ ಅರ್ಜಿ ಆಹ್ವಾನಿಸಲಾಗಿದೆ ಆರ್ಥಿಕವಾಗಿ ಹಿಂದುಳಿದವರು ಇದರ ಉಪಯೋಗ ಪಡೆದೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಭವಾನಿ ಶಂಭುಲಿಂಗಪ್ಪ (78293 79675), ನೇತ್ರಾ ಮಧುಕರ್ (91643 48699), ಅಕ್ಷಯ್ ಸುರ್ವೆ (96065 81587) ಅವರನ್ನು ಸಂಪರ್ಕಿಸಬಹುದು.

## ಬಾಲ ಕಾರ್ಮಿಕರು, ಕಿಶೋರ ಕಾರ್ಮಿಕರು ಪತ್ತೆ

ದಾವಣಗೆರೆ, ಜ.27- ಪ್ಯಾನ್ ಇಂಡಿಯಾ ರಕ್ಷಣೆ ಮತ್ತು ಪುನರ್ವಸತಿ ಆಂದೋಲನದ ಅಂಗವಾಗಿ ಹರಿಹರದಲ್ಲಿರುವ ಇಟ್ಟಿಗೆ ಭಟ್ಟಿಗಳಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಶುಕ್ರವಾರ (ಜ.24) ಭೇಟಿ ನೀಡಿ ಬಾಲ ಮತ್ತು ಕಿಶೋರಾವಸ್ಥೆ ಕಾರ್ಮಿಕರ ತಪಾಸಣೆ ನಡೆಸುವಾಗ ಗುತ್ತೂರು ಕಾಲೋನಿ ಇಟ್ಟಿಗೆ ಭಟ್ಟಿ ತಪಾಸಣೆಯಲ್ಲಿ 2 ಗಂಡು ಮಕ್ಕಳು ಹಾಗೂ 4 ಹೆಣ್ಣು ಮಕ್ಕಳು ಕಿಶೋರ ಕಾರ್ಮಿಕರು ಅಪಾಯಕಾರಿ ಉದ್ದಿಮೆಯಲ್ಲಿ ದುಡಿಯುತ್ತಿರುವುದು ಪತ್ತೆಯಾಗಿದ್ದು, ಪತ್ತೆಯಾದ ಮಕ್ಕಳನ್ನು ಕೆಲಸದಿಂದ ಬಿಡುಗಡೆಗೊಳಿಸಿ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರಿಪಡಿಸಿ, ಮಾಲೀಕರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಹರಿಹರ ವೃತ್ತದ ಕಾರ್ಮಿಕ ನಿರೀಕ್ಷಕರಾದ ಜೆ. ಕವಿತಾಕುಮಾರಿ, ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿಗಳು, ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳಾದ ಹಾಲೇಶ್, ರವಿ, ಹಾಗೂ ಅಂಗನವಾಡಿ ಸಹಾಯಕಿ ಬೇಬಿ, ಯೋಜನಾ ನಿರ್ದೇಶಕ ಪ್ರಸನ್ನ ಇ.ಎನ್ ಇದ್ದರು.

## ರಾಜನಹಳ್ಳಿಯಲ್ಲಿ ಬ್ಯಾರೇಜ್ ನಿರ್ಮಾಣ ಕಾಮಗಾರಿ ಪರಿಶೀಲನೆ



ದಾವಣಗೆರೆ, ಜ. 27 - ಸ್ಮಾರ್ಟ್ ಸಿಟಿ ವತಿಯಿಂದ ರಾಜನಹಳ್ಳಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಹುಲ್ಲುಮನೆ ಗಣೇಶ್ ಅವರು ಇಂದು ಪ್ರಗತಿ ಪರಿಶೀಲನೆ ನಡೆಸಿದರು.

ಕಳೆದ 2 ವರ್ಷಗಳಿಂದ ಬ್ಯಾರೇಜ್‌ಗೆ ಗೇಟ್ ಅಳವಡಿಸುವ ಕೆಲಸ ಬಾಕಿ ಇದ್ದು ಮಳೆಗಾಲ ಪ್ರಾರಂಭವಾಗುವ ಒಳಗೆ ಎಲ್ಲಾ 42 ಗೇಟ್‌ಗಳನ್ನು ಅಳವಡಿಸಬೇಕು ಮತ್ತು ಅದಕ್ಕಾಗಿ ಒಂದು ವಾರದೊಳಗೆ ಅಳವಡಿಸಲು ಬೇಕಿರುವ ಅಗತ್ಯ ವಸ್ತುಗಳ ಜೊತೆಗೆ ಶೀಘ್ರವಾಗಿ ಕೆಲಸ ಪ್ರಾರಂಭಿಸಿ ಮಾರ್ಚ್ ಅಂತ್ಯದೊಳಗೆ ಕಾಮಗಾರಿ ಮುಗಿಸಲು ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಈ ಕಾಮಗಾರಿಯು ಪೂರ್ಣಗೊಂಡರೆ ನಗರದಲ್ಲಿ ಜಲಸಿರಿ ಯೋಜನೆಯಲ್ಲಿ ಮುಂದಿನ 20 ವರ್ಷಗಳ ದೂರ ದೃಷ್ಟಿಯ ನೀರು ಪೂರೈಸಲು ಅಗತ್ಯವಿರುವ 0.2ಟಿಎಂಸಿ ನೀರನ್ನು ಒಟ್ಟು 12.5 ಕಿಲೋ ಮೀಟರ್ ನದಿ ಪಾತ್ರದಲ್ಲಿ ಸಂಗ್ರಹಿಸಬಹುದಾಗಿದೆ. ಬೇಸಿಗೆಯಲ್ಲಿ ನೀರಿನ ಸಂಗ್ರಹಣೆ ಮತ್ತು ಪೂರೈಕೆಗೆ ತ್ವರಿತವಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವುದು ಅತ್ಯಂತ ಅವಶ್ಯಕವಾಗಿದ್ದು, ಗುತ್ತಿಗೆದಾರರು ಅಗತ್ಯ ಯಂತ್ರಗಳೊಂದಿಗೆ ಮಾನವ ಸಂಪನ್ಮೂಲ ಹೆಚ್ಚಿಸಿ ಬೇಗನೆ ಕಾಮಗಾರಿ ಮುಗಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್, ಮಹಾನಗರ ಪಾಲಿಕೆ ಕಾರ್ಯಪಾಲಕ ಅಭಿಯಂತರರಾದ ಉದಯ್ ಕುಮಾರ್, ಸಚಿನ್, ಜೋಶಿ ಇತರೆ ಅಧಿಕಾರಿಗಳು ಹಾಜರಿದ್ದರು.

## ಇಂಗಳಗೊಂದಿ ಬಳಿ ಅಕ್ರಮ ಮರಳು ವಶ



ಮಲೇಬೆನ್ನೂರು, ಜ.27- ಸಮೀಪದ ಇಂಗಳಗೊಂದಿ ಗ್ರಾಮದ ಬಳಿ ತುಂಗಭದ್ರಾ ನದಿ ತಟದಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 200 ಟನ್ ನಷ್ಟು ಮರಳನ್ನು ಸೋಮವಾರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿ ಕವಿತಾ ಅವರ ನೇತೃತ್ವದಲ್ಲಿ ಮಲೇಬೆನ್ನೂರು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಮಲೇಬೆನ್ನೂರು ಪಿಎಸ್‌ಐ ಪ್ರಭು ಡಿ.ಕೆಳಗಿನಮನಿ, ಕಂದಾಯ ನಿರೀಕ್ಷಕ ಆನಂದ್, ಗ್ರಾಮಲೆಕ್ಕಾಧಿಕಾರಿ ಮಂಜುಳಾ ಮತ್ತು ಪೊಲೀಸ್ ಸಿಬ್ಬಂದಿ ಈ ವೇಳೆ ಇದ್ದರು.

## ವಿದ್ಯಾನಗರ ಲಯನ್ಸ್‌ನಿಂದ ಶಿಕ್ಷಕರ ತರಬೇತಿ ಕಾರ್ಯಾಗಾರ




ದಾವಣಗೆರೆ, ಜ.27- ಲಯನ್ಸ್ ಕ್ಲಬ್ ವತಿಯಿಂದ ವಿದ್ಯಾನಗರದ ಲಯನ್ಸ್ ಸೇವಾ ಭವನದಲ್ಲಿ ಜ.7ರಿಂದ 8ರ ವರೆಗೆ ಶಿಕ್ಷಕರ ತರಬೇತಿ ಕಾರ್ಯಾಗಾರವನ್ನು ತರಬೇತುದಾರ ಶಿವಯೋಗಿ ಕಬ್ಬಿನ ಕಂಥಿಮಠ ನಡೆಸಿ ಕೊಟ್ಟರು. ಈ ವೇಳೆ ವಿದ್ಯಾನಗರ ಲಯನ್ಸ್ ಅಧ್ಯಕ್ಷ ಎಲ್. ಎಸ್. ಪ್ರಭುದೇವ, ಲಯನ್ಸ್ ಮಾಜಿ ರಾಜ್ಯಪಾಲ ಹೆಚ್. ಎನ್. ಶಿವಕುಮಾರ್, ಪ್ರಾಂತೀಯ ಅಧ್ಯಕ್ಷ ವೈ.ಬಿ. ಸತೀಶ್, ಜಿಲ್ಲಾ ಛೇರ್ಮನ್ ಬೆಳ್ಳೂಡಿ ಶಿವಕುಮಾರ್, ಎನ್.ವಿ. ಬಂಡಿವಾಡ, ಶೀಥಿಲ್ ಕುಮಾರ್, ಸುದರ್ಶನ್ ಕುಮಾರ್, ತಿಪ್ಪೇಸ್ವಾಮಿ, ಮಹೇಂದ್ರ ಕುಮಾರ್ ಮತ್ತಿತರರಿದ್ದರು.

## ಸಹಕಾರ ತತ್ವದಿಂದ ಮನುಷ್ಯನ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ : ಎಂ. ಆರ್. ಪ್ರಭುದೇವ್




ದಾವಣಗೆರೆ, ಜ.27- ಸಹಕಾರ ತತ್ವದ ಜೀವನದಿಂದ ಮನುಷ್ಯನ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ ಎಂದು ಸಹಕಾರ ಭಾರತಿ ರಾಜ್ಯಾಧ್ಯಕ್ಷ ಎಂ.ಆರ್. ಪ್ರಭುದೇವ್ ಅಭಿಪ್ರಾಯಪಟ್ಟರು.

ಸಹಕಾರ ಭಾರತಿ ರಾಜ್ಯಾಧ್ಯಕ್ಷರಾಗಿ ಚುನಾಯಿತರಾದ ಹಿನ್ನೆಲೆಯಲ್ಲಿ ವಿದ್ಯಾನಗರದ ರೋಟರಿ ಕ್ಲಬ್‌ನಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮನುಷ್ಯನಲ್ಲಿ ಸಂಸ್ಕಾರ ಹಾಗೂ ಸಹಕಾರದ ಗುಣಗಳು ಇಲ್ಲದಿದ್ದರೆ ಅವನ ಬದುಕು ಅನಭಿವೃದ್ಧಿಯಾಗಲಿದೆ. ಹಾಗಾಗಿ ಎಲ್ಲರೂ ಸಂಸ್ಕಾರ ಹಾಗೂ ಸಹಕಾರದ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಈ ವೇಳೆ ಅಂತರ್‌ರಾಷ್ಟ್ರೀಯ ರೋಟರಿ ಸಂಸ್ಥೆಯ ಪ್ರಾಥಮಿಕ ಹಾಗೂ ಮೂಲಭೂತ ಶಿಕ್ಷಣ ಅಭಿವೃದ್ಧಿ ಯೋಜನೆಯ ಮಹಿಳಾ ಸಬಲೀಕರಣ ಯೋಜನೆಯಡಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದ ಬಡ ಹಾಗೂ ಪ್ರತಿಭಾವಂತ 16 ವಿದ್ಯಾರ್ಥಿನಿಯರಿಗೆ ಗುಣಮಟ್ಟದ ಸೈಕಲ್ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್‌ನ ಅಧ್ಯಕ್ಷ ಎಸ್. ಎನ್. ಮಳವಳ್ಳಿ, ಡಾ.ಜೆ.ಬಿ. ರಾಜ್, ಎಸ್.ಸಿ. ಮಹಾರುದ್ರಪ್ಪ, ರೋಟರಿ ಅಸಿಸ್ಟೆಂಟ್ ಗವರ್ನರ್ ಎಂ.ಎನ್ ಬಿಲ್ಲಳ್ಳಿ, ಇನ್ನರ್ ವೀಲ್ ಚಾರ್ಟರ್ ಅಧ್ಯಕ್ಷೆ ಸುಲೋಚನಮ್ಮ ರಾಜಶೇಖರ್, ಪ್ರೇಮ ಮಹೇಶ್ವರಪ್ಪ, ಸಿದ್ದಪ್ಪ ಇದ್ದರು.

## ಯುವಕರಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ : ಡಾ. ಹೆಚ್.ವಿ. ವಾಮದೇವಪ್ಪ

ದಾವಣಗೆರೆ, ಜ. 27- ಭಾರತ ಅತಿ ಹೆಚ್ಚು ಯುವಕರನ್ನು ಹೊಂದಿದ ದೇಶ. ಯುವಕರಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಯುವಜನತೆ ದಿಕ್ಕು ತಪ್ಪಿ ಸಾಗಬಾರದು. ಚಿಕ್ಕಂದಿನಿಂದಲೇ ಮಹತ್ವದ ಗುರಿಗಳನ್ನು ಹೊಂದಿರಬೇಕು. ಚಿಕ್ಕ ಗುರಿಗಳನ್ನು ಹೊಂದಿರುವುದು ಅಪರಾಧ ಎಂದು ತರಳಬಾಳು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಡಾ. ಹೆಚ್.ವಿ. ವಾಮದೇವಪ್ಪ ಹೇಳಿದರು.

ನಗರದ ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಮಾಗನೂರು ಬಸಪ್ಪ ಅವರು ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಮಾಗನೂರು ಸಂಗಮೇಶ್ವರ ಗೌಡ್ರು ಮಾತನಾಡಿ, ಪ್ರತಿಭಾವಂತ ವಿದ್ಯಾರ್ಥಿಗಳು ಸಂಸ್ಕಾರವಂತರಾಗಿ ಶ್ರದ್ಧೆಯಿಂದ, ನಿಸ್ವಾರ್ಥ ಸೇವಾ ಮನೋಭಾವನೆಯಿಂದ ದುಡಿದರೆ ಸಮಾಜದ ಅಭಿವೃದ್ಧಿ ಸಾಧ್ಯ ಎಂದರು.

ಕಾಲೇಜಿನ ನಿರ್ದೇಶಕ ಡಾ. ಜಿ.ಎನ್. ಹೆಚ್. ಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಜೆ.ಆರ್. ಯಶವಂತ ಕುಮಾರ್ ವಾರ್ಷಿಕ ವರದಿ ವಾಚಿಸಿದರು. ಉಪನ್ಯಾಸಕ ಕೆ. ಹರ್ಷಿತ ಅತಿಥಿಗಳನ್ನು ಪರಿಚಯಿಸಿದರು. ಉಪನ್ಯಾಸಕಿ ಮಮತ ರೋನಾಲ್ಡ್ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಸಿಕೊಟ್ಟರು. ಪುರಸ್ಕೃತರ ಪರವಾಗಿ ಹೆಚ್.ಆರ್. ಭರತ್ ಅನಿಸಿಕೆ ಹಂಚಿಕೊಂಡರು.

ಹೆಚ್. ಪೂಜಾರ್ ಪ್ರಾರ್ಥಿಸಿದರು. ಪ್ರಾಚಾರ್ಯ ಪ್ರಸಾದ್ ಬಂಗೇರ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸುರೇಖ ಜಗದೀಶ ನಿರೂಪಿಸಿದರು. ಉಪನ್ಯಾಸಕಿ ಬಿ. ಚಂದನ್ ವಂದಿಸಿದರು. ಜಿ.ಎಸ್. ಕಾದಂಬರಿ ಮತ್ತು ಜೀಷ್ಣುಪ್ರೇಮ್ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

## ವಿದ್ಯಾರ್ಥಿಗಳಿಂದ ರಸ್ತೆ ಸುರಕ್ಷತಾ ಮಾಸಾಚರಣೆ



ದಾವಣಗೆರೆ, ಜ.27- ಧ.ರ.ಮ ವಿಜ್ಞಾನ ಕಾಲೇಜಿನ ಎನ್.ಸಿ.ಸಿ ಹಾಗೂ ಎನ್ನೆಸ್ಸೆಸ್ ವಿದ್ಯಾರ್ಥಿಗಳು ರಸ್ತೆ ಸುರಕ್ಷತಾ ಮಾಸಾಚರಣೆ ನಿಮಿತ್ಯ ಜಾಥಾ ಹಾಗೂ ನಗರದ ಗುಂಡಿ ಮಹಾದೇವಪ್ಪ ವೃತ್ತದಲ್ಲಿ ಜೀಬ್ರಾ ಪಟ್ಟಿಗಳನ್ನು ಹಾಕಿ, ಸಂಚಾರ ನಿಯಮದ ಬಗ್ಗೆ ಅರಿವು ಮೂಡಿಸಿದರು. ಕಾಲೇಜಿನ ಪ್ರಾಚಾರ್ಯರಾದ ಎಂ.ಪಿ. ರೂಪಶ್ರೀ, ಎನ್ನೆಸ್ಸೆಸ್ ಅಧಿಕಾರಿ ಚನ್ನಬಸವರಾಜ್ ಕೆಂಚಪ್ಪನವರ್, ಡಾ.ಮಂಜುನಾಥ್, ಮುರಿಗೇಂದ್ರಪ್ಪ, ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐ ಶೈಲಜಾ, ಬಸವರಾಜ್ ಹಾಗೂ ಇತರರು ಇದ್ದರು.

## ಗೋವಿನಹಾಳ್ ಗ್ರಾಮದ ಜಿ.ಎಂ. ಬಸವನಗೌಡ ನಿಧನ



ಹರಿಹರ ತಾಲ್ಲೂಕು ಗೋವಿನಹಾಳ್ ಗ್ರಾಮದ ಹಿರಿಯ ಮುಖಂಡರಾದ ಜಿ. ಮಲ್ಲನಗೌಡರ ದ್ವಿತೀಯ ಪುತ್ರ

**ಜಿ.ಎಂ. ಬಸವನಗೌಡ**

ಇವರು ದಿನಾಂಕ : 27.01.2025ರ ಸೋಮವಾರ ಸಾಯಂಕಾಲ 4 ಗಂಟೆಗೆ ನಿಧನರಾದರು. ಮೃತರಿಗೆ 48 ವರ್ಷ ವಯಸ್ಸಾಗಿತ್ತು. ತಂದೆ, ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಇಬ್ಬರು ಸಹೋದರರು, ಇಬ್ಬರು ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 28.01.2025ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಗೋವಿನಹಾಳ್ ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತರು : ಜಿ. ಮಲ್ಲನಗೌಡ್ರು ಮತ್ತು ಕುಟುಂಬದವರು, ಗೋವಿನಹಾಳ್ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

## ಕುಡುಕ ಗಂಡಂದಿರ ಬಿಟ್ಟು ತಾವೇ ಮದುವೆ ಮಾಡಿಕೊಂಡ ಪತ್ನಿಯರು

ಗೋರಖ್‌ಪುರ, ಜ. 27- ಕುಡಿದು ಹಿಂಸೆ ನೀಡುತ್ತಿದ್ದ ಗಂಡಂದಿರನ್ನು ಬಿಟ್ಟ ಇಬ್ಬರು ಮಹಿಳೆಯರು ತಾವೇ ದೇವಾಲಯದಲ್ಲಿ ಮದುವೆ ಮಾಡಿಕೊಂಡ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.

ಕವಿತಾ ಮತ್ತು ಗುಂಜು ಎಂಬುವವರು ಇನ್‌ಸ್ಟಾಗ್ರಾಂ ಮೂಲಕ ಪರಿಚಯ ಬೆಳೆಸಿಕೊಂಡಿದ್ದರು. ತಮ್ಮ ಜೀವನದಲ್ಲಿ ಕುಡುಕ ಗಂಡನಿಂದ ಒಂದೇ ರೀತಿಯ ಸಮಸ್ಯೆ ಎದುರಿಸುತ್ತಿದ್ದುದನ್ನು ಕಂಡುಕೊಂಡರು.

ಮದ್ಯ ವ್ಯಸನಕ್ಕೆ ಸಿಲುಕಿದ ಗಂಡಂದಿರಿಂದ ಪೀಡನೆ ಎದುರಾಗುತ್ತಿರುವ ಬಗ್ಗೆ ಅವರು ಚರ್ಚಿಸಿದ್ದರು. ತಮ್ಮ ಸಮಸ್ಯೆ ಹಾಗೂ ಹೋರಾಟಗಳ ಬಗ್ಗೆ ವಿಚಾರ ಹಂಚಿಕೊಳ್ಳುವಾಗ ಅವರು ಸಾಕಷ್ಟು ಹತ್ತಿರವಾಗಿದ್ದರು.

ಅಂತಿಮವಾಗಿ ಅವರು ತಮ್ಮ ಹಿಂದಿನ ಜೀವನ ಬಿಟ್ಟು ಪರಸ್ಪರ ಜೊತೆಯಾಗಿ ಹೊಸ ಜೀವನಕ್ಕೆ ಮುಂದಾಗಲು ನಿರ್ಧರಿಸಿದರು.

ಮನೆ ಬಿಟ್ಟು ಬಂದ ಅವರು ದೇವರಿಯಾದಲ್ಲಿರುವ ಶಿವ ದೇವಾಲಯದಲ್ಲಿ ಮದುವೆ ಮಾಡಿಕೊಂಡಿದ್ದಾರೆ. ಗುಂಜಾ ಅವರು ವರನ ಪಾತ್ರ ವಹಿಸಿದ್ದಾರೆ.

ಉಭಯರು ಪರಸ್ಪರ ಹಾರ ಹಾಕಿಕೊಂಡಿದ್ದಾರೆ ಹಾಗೂ ಮದುವೆ ಪದ್ಧತಿಯಂತೆ ದೇವಾಲಯಕ್ಕೆ ಐದು ಸುತ್ತು ಹಾಕಿದ್ದಾರೆ.

ನಾವು ಗಂಡಂದಿರ ಮದ್ಯ ವ್ಯಸನ ಹಾಗೂ ದುರ್ವರ್ತನೆಯಿಂದ ಬೇಸತ್ತಿದ್ದೇವೆ. ಹೀಗಾಗಿ ಶಾಂತಿ ಹಾಗೂ ಪ್ರೀತಿಯ ಜೀವನಕ್ಕಾಗಿ ಜೊತೆಯಾಗಿದ್ದೇವೆ. ನಾವು ದಂಪತಿಯಾಗಿ ಬದುಕುತ್ತೇವೆ ಎಂದು ಉಭಯರು ತಿಳಿಸಿದ್ದಾರೆ. ಗೋರಖ್‌ಪುರದಲ್ಲಿ ಬಾಡಿಗೆ ಮನೆ ಪಡೆಯಲು ಉಭಯರು ಯೋಜಿಸಿದ್ದಾರೆ.

ಈ ಘಟನೆ ಖಚಿತಪಡಿಸಿರುವ ದೇವಾಲಯದ ಅರ್ಚಕ ಉಮಾಶಂಕರ್ ಪಾಂಡೆ, ಮಹಿಳೆಯರು ಹಾರ ಹಾಗೂ ಕುಂಕುಮ ಖರೀದಿಸಿ ಮದುವೆ ಸಂಪ್ರದಾಯದ ನಂತರ ನಿರ್ಗಮಿಸಿದ್ದಾರೆ ಎಂದಿದ್ದಾರೆ.

# 2024ರಲ್ಲಿ ಕೋಟ್ಯಾಧೀಶರ ಆಸ್ತಿ ಮೂರು ಪಟ್ಟು ವೇಗದಲ್ಲಿ ಹೆಚ್ಚಳ : ಆಕ್ಸ್‌ಫಾಮ್

ದಾವೋಸ್, ಜ.27- 2024ರಲ್ಲಿ ಕೋಟ್ಯಾಧೀಶರ ಆಸ್ತಿ ಎರಡು ಟ್ರಿಲಿಯನ್ ಡಾಲರ್‌ಗಳಷ್ಟು ಹೆಚ್ಚಾಗಿ ಹದಿನೈದು ಟ್ರಿಲಿಯನ್ ಡಾಲರ್‌ಗಳಿಗೆ ತಲುಪಿದೆ. ಜಗತ್ತಿನಾದ್ಯಂತ ಶ್ರೀಮಂತರ ಆಸ್ತಿ ಹೆಚ್ಚಳದ ವೇಗ ಕಳೆದ ವರ್ಷಕ್ಕಿಂತ ಮೂರು ಪಟ್ಟು ಹೆಚ್ಚಾಗಿದೆ ಎಂದು ಆಕ್ಸ್‌ಫಾಮ್ ಇಂಟರ್‌ನ್ಯಾಷನಲ್ ವರದಿ ತಿಳಿಸಿದೆ.

ಜಗತ್ತಿನ ಶ್ರೀಮಂತರ ಸಭೆಯಾದ ವರ್ಲ್ಡ್ ಎಕನಾಮಿಕ್ ಫೋರಂನ ವಾರ್ಷಿಕ ಸಭೆ ನಡೆಯುವ ಮೊದಲ ದಿನದಂದು ಈ ವರದಿ ಬಿಡುಗಡೆ ಮಾಡಲಾಗಿದೆ.

ಜಗತ್ತಿನಾದ್ಯಂತ ಶ್ರೀಮಂತರ ಆಸ್ತಿ ಹೆಚ್ಚಾಗಿದ್ದರೆ ಬಡವರ ಪರಿಸ್ಥಿತಿ 1990 ಕ್ಕಿಂತ ಹೆಚ್ಚೇನೂ ಬದಲಾಗಿಲ್ಲ ಎಂದು ವರದಿ ತಿಳಿಸಿದೆ. 2024ರಲ್ಲಿ ಏಷಿಯಾದ ಶ್ರೀಮಂತರು ಹೊಂದಿರುವ ಆಸ್ತಿ ಮೌಲ್ಯ 299 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಇನ್ನೊಂದು ದಶಕದಲ್ಲಿ ಈ ವಲಯದಲ್ಲಿ ಕನಿಷ್ಠ ಐವರು ಟ್ರಿಲಿಯನೇರ್‌ಗಳು ಇರಲಿದ್ದಾರೆ ಎಂದು ವರದಿ ಹೇಳಿದೆ.

2024ರಲ್ಲಿ 204 ಹೊಸ ಬಿಲಿಯನೇರ್‌ಗಳು ಹೊರಹೊಮ್ಮಿದ್ದಾರೆ. ಪ್ರತಿವಾರ ಕನಿಷ್ಠ ಸರಾಸರಿ ನಾಲ್ವರು ಬಿಲಿಯನೇರ್‌ಗಳು ರೂಪುಗೊಂಡಿದ್ದಾರೆ. ಏಷಿಯಾ ಒಂದರಲ್ಲಿಯೇ ಈ ವರ್ಷ 41 ಹೊಸ ಬಿಲಿಯನೇರ್‌ಗಳು ಕಂಡುಬಂದಿದ್ದಾರೆ ಎಂದು ವರದಿ ತಿಳಿಸಿದೆ.

ಉತ್ತರ ಗೋಳದಲ್ಲಿರುವ ಶೇಕಡ ಒಂದರಷ್ಟು ಉನ್ನತ ಶ್ರೀಮಂತರು ಪ್ರತಿ ಗಂಟೆಗೆ ದಕ್ಷಿಣ ಗೋಳದಿಂದ 30 ದಶಲಕ್ಷ ಡಾಲರ್ ಪಡೆಯುತ್ತಿದ್ದಾರೆ ಎಂದು ವರದಿ ಹೇಳಿದೆ. ವಿಶ್ವದ ಶೇಕಡ 60ರಷ್ಟು ಬಿಲಿಯನೇರ್‌ಗಳು ವಂಶಪಾರಂಪರಿಕ, ಏಕಸ್ವಾಮ್ಯ ಇಲ್ಲವೇ ಕ್ಷುದ್ರ ಬಂಡವಾಳಶಾಹಿ ಮಾರ್ಗದಿಂದ ಆಸ್ತಿ ಪಡೆದಿದ್ದಾರೆ ಎಂದು ವರದಿ ತಿಳಿಸಿದೆ.

ಉನ್ನತ ಶ್ರೀಮಂತ ವರ್ಗದ ಬಹುತೇಕರು ಅರ್ಹತೆ ಇಲ್ಲದೆ ಈ ಆಸ್ತಿಗಳನ್ನು ಪಡೆದಿದ್ದಾರೆ. ವಿಶ್ವದಾದ್ಯಂತ ಇರುವ ಸರ್ಕಾರಗಳು ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ಹೇರುವ ಮೂಲಕ ಅಸಮಾನತೆ ನಿವಾರಣೆ ಮಾಡಬೇಕಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಅಲ್ಲದೇ ಮಾಜಿ ವಸಹಾತು ಶಕ್ತಿಗಳು ಈ ಹಿಂದೆ ತಮ್ಮಿಂದ ಆಗಿರುವ ಹಾನಿಗಳಿಗೆ ಪರಿಹಾರ ನೀಡಬೇಕು ಎಂದೂ ವರದಿಯಲ್ಲಿ ಆಗ್ರಹಿಸಲಾಗಿದೆ.

2024ರಲ್ಲಿ ಬಿಲಿಯನೇರ್‌ಗಳ ಆಸ್ತಿ ಮೌಲ್ಯ ಪ್ರತಿದಿನ 5.7 ಶತಕೋಟಿ ಡಾಲರ್‌ಗಳಷ್ಟು ಹೆಚ್ಚಾಗಿದೆ. 2023ರಲ್ಲಿ ಬಿಲಿಯನೇರ್‌ಗಳ ಸಂಖ್ಯೆ 2565 ಆಗಿತ್ತು ಇದು 2024ರಲ್ಲಿ 2769 ಕ್ಕೆ ತಲುಪಿದೆ.

ವಿಶ್ವದ ಮೊದಲ 10 ಶ್ರೀಮಂತರ ಆಸ್ತಿ ಮೌಲ್ಯ ಪ್ರತಿದಿನಕ್ಕೆ 100 ದಶಲಕ್ಷ ಡಾಲರ್ ಸರಾಸರಿಯಲ್ಲಿ ಹೆಚ್ಚಾಗಿದೆ. ಇವರು ತಮ್ಮ ಶೇಕಡ 99 ರಷ್ಟು ಆಸ್ತಿಯನ್ನು ಒಂದೇ ದಿನದಲ್ಲಿ



ಕಳೆದುಕೊಂಡರೂ ಸಹ ಅವರು ಬಿಲಿಯನೇರ್‌ಗಳಾಗಿಯೇ ಮುಂದುವರೆಯಲಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಕೆಲವೇ ವ್ಯಕ್ತಿಗಳು ಜಾಗತಿಕ ಆರ್ಥಿಕತೆಯನ್ನು ವಶಕ್ಕೆ ತೆಗೆದುಕೊಳ್ಳುವುದು ಅತಿ ವೇಗವಾಗಿ ನಡೆಯುತ್ತಿದೆ. ಊಹಿಸಲು ಅಸಾಧ್ಯವಾದ ರೀತಿಯಲ್ಲಿ ಇವರ ಆರ್ಥಿಕ ಶಕ್ತಿ ಬೆಳೆಯುತ್ತಿದೆ. ಬಿಲಿಯನೇರ್‌ಗಳು ಹೀಗೆಯೇ ಮುಂದುವರೆದರೆ ಅವರು ಶೀಘ್ರದಲ್ಲೇ ಟ್ರಿಲೆನಿಯರ್‌ಗಳಾಗಲಿದ್ದಾರೆ. ಆಸ್ತಿ ಸಂಗ್ರಹ ವೇಗವಾಗುವ ಜೊತೆಗೆ ಅವರ ಅಧಿಕಾರವೂ ಹೆಚ್ಚಾಗುತ್ತಿದೆ ಎಂದು ಆಕ್ಸ್‌ಫಾಮ್ ಇಂಟರ್‌ನ್ಯಾಷನಲ್ ಕಾರ್ಯಕಾರಿ ನಿರ್ದೇಶಕ ಅಮಿತಾಬ್ ಬೆಹರ್ ಹೇಳಿದ್ದಾರೆ.

ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿಯಾದ ಎಲಾನ್ ಮಸ್ಕ್ ಅವರು ವಿಶ್ವದ ಅತಿ ದೊಡ್ಡ ಆರ್ಥಿಕ ವ್ಯವಸ್ಥೆ ನಡೆಸುತ್ತಿದ್ದಾರೆ. ಇದು ವಿಶ್ವದಾದ್ಯಂತ ಇರುವ ಜನಸಾಮಾನ್ಯರಿಗೆ ಎಚ್ಚರಿಕೆ ಗಂಟೆಯಾಗಿದೆ. ಕೆಲವೇ ಜನರು ಹೊಂದಿರುವ ಅಪಾರ ಆಸ್ತಿಗಳಿಂದ ಉಳಿದವರು ದಮನಿತರಾಗುತ್ತಿದ್ದಾರೆ ಎಂದು ವರದಿ ಹೇಳಿದೆ.

ಫೋರ್ಬ್ಸ್ ವರದಿಯ ಪ್ರಕಾರ ಶೇಕಡ 30ರಷ್ಟು ಬಿಲಿಯನೇರ್‌ಗಳು ವಂಶಪಾರಂಪರಿಕವಾಗಿ ತಮ್ಮ ಆಸ್ತಿಯನ್ನು ಪಡೆದಿದ್ದಾರೆ. ಯುಬಿಎಸ್ ವರದಿಯ ಪ್ರಕಾರ ಈಗ ಬಿಲಿಯನೇರ್‌ಗಳಾಗಿರುವ ಸಾವಿರಕ್ಕೂ ಹೆಚ್ಚು ಜನರು ತಮ್ಮ 5.2 ಟ್ರಿಲಿಯನ್ ಡಾಲರ್ ಆಸ್ತಿಯನ್ನು ಮುಂದಿನ ಎರಡರಿಂದ ಮೂರು ದಶಕಗಳಲ್ಲಿ ತಮ್ಮ ಉತ್ತರಾಧಿಕಾರಿಗಳಿಗೆ ನೀಡಲಿದ್ದಾರೆ.

ಈ ಅತಿ ಶ್ರೀಮಂತರು ಅದರಲ್ಲೂ ಯೂರೋ ವಲಯದಲ್ಲಿ ಇರುವವರು ವಸಹಾತುಶಾಹಿ ಇತಿಹಾಸದ ಮೂಲಕ ತಮ್ಮ ಆಸ್ತಿಯನ್ನು ಪಡೆದಿದ್ದಾರೆ. ವಸಾಹತು ಶಾಹಿ ಬಡ ದೇಶಗಳನ್ನು ಶೋಷಣೆಗೆ ಒಳಪಡಿಸಿತ್ತು ಎಂದು ಆಕ್ಸ್‌ಫಾಮ್ ತಿಳಿಸಿದೆ.

ವಿನ್ಸೆಂಟೇ ಬೊಲೊರೆ ಅವರು ವಿಸ್ತಾರವಾದ ಮಾಧ್ಯಮ ಸಾಮ್ರಾಜ್ಯ ಹೊಂದಿದ್ದಾರೆ. ಅವರು ಆಫ್ರಿಕಾದ ಹೊಸಹಾತುಶಾಹಿ ಹಿನ್ನೆಲೆಯಿಂದ ಆಸ್ತಿ ಪಡೆದಿದ್ದಾರೆ ಎಂದು ಆಕ್ಸ್‌ಫಾಮ್ ಹೇಳಿದೆ.

ಇದು ಆಧುನಿಕ ಜಗತ್ತಿನ ವಸಾಹತುಶಾಹಿ ಆಗಿದೆ. ಈಗ ಆಸ್ತಿಯು ದಕ್ಷಿಣ ಗೋಳದಿಂದ ಉತ್ತರ ಗೋಳಕ್ಕೆ ಹಾಗೂ ಶ್ರೀಮಂತ ನಾಗರಿಕರಿಗೆ ವರ್ಗಾವಣೆಯಾಗುತ್ತಿದೆ. ಉತ್ತರ ಗೋಳದಲ್ಲಿರುವ ಶ್ರೀಮಂತರ ಪೈಕಿ ಉನ್ನತ ಶೇಕಡಾ ಒಂದರಷ್ಟು ಜನರು ಅಮೆರಿಕ, ಬ್ರಿಟನ್ ಹಾಗೂ ಫ್ರಾನ್ಸ್‌ಗಳಲ್ಲಿ ಇದ್ದಾರೆ. ಇವರು ಪ್ರತಿ ಗಂಟೆಗೆ ದಕ್ಷಿಣ ಗೋಳದಿಂದ 30 ದಶಲಕ್ಷ ಡಾಲರ್ ಪಡೆಯುತ್ತಿದ್ದಾರೆ ಎಂದು ವರದಿ ಹೇಳಿದೆ.

ಉತ್ತರ ಗೋಳದಲ್ಲಿರುವ ದೇಶಗಳು ಜಾಗತಿಕವಾಗಿ ಶೇಕಡ 69 ರಷ್ಟು ಆಸ್ತಿಯ ಒಡೆತನ ಹೊಂದಿವೆ, ಇಲ್ಲಿ ಶೇಕಡ 68 ರಷ್ಟು ಬಿಲಿಯನೇರ್‌ಗಳು ಇದ್ದಾರೆ. ಆದರೆ ಜಾಗತಿಕವಾಗಿ ಈ ಭಾಗ ಶೇಕಡ 21ರಷ್ಟು ಮಾತ್ರ ಜನಸಂಖ್ಯೆ ಹೊಂದಿದೆ ಎಂದು ವರದಿ ಹೇಳಿದೆ.

ಆರೋಗ್ಯ ಸೇವೆ, ಶಿಕ್ಷಣ ಹಾಗೂ ಉತ್ತಮ ಉದ್ಯೋಗ ಅವಕಾಶಗಳಿಗಾಗಿ ಬಡ ದೇಶಗಳಿಗೆ ಹಣ ಬೇಕಾಗಿದೆ. ಆದರೆ ಈ ಹಣವನ್ನು ಶ್ರೀಮಂತರು ತಮ್ಮ ವಶಕ್ಕೆ ಪಡೆಯುತ್ತಿದ್ದಾರೆ. ಇದು ಆರ್ಥಿಕತೆಗೆ ಕೆಟ್ಟದಾಗಿರುವ ಜೊತೆಗೆ ಮಾನವೀಯತೆಗೂ ಕೆಡುಕಾಗಿದೆ ಎಂದು ವರದಿ ತಿಳಿಸಿದೆ. ವಿಶ್ವ ಬ್ಯಾಂಕ್ ವರದಿಯ ಪ್ರಕಾರ 1990ರಲ್ಲಿ ಬಡವರು ಪ್ರತಿದಿನಕ್ಕೆ 6.85 ಡಾಲರ್ ಆದಾಯ ಮಾತ್ರ ಪಡೆಯುತ್ತಿದ್ದರು. ಈಗಲೂ ಸಹ ಪರಿಸ್ಥಿತಿ ಬದಲಾಗಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

## ಅದಾನಿ ಜೊತೆಗಿನ ಪವನ ವಿದ್ಯುತ್ ಒಪ್ಪಂದ ರದ್ದುಗೊಳಿಸಿದ ಶ್ರೀಲಂಕಾ

ಕೊಲಂಬೋ, ಜ. 27- ಅದಾನಿ ಸಮೂಹದ ಜೊತೆ ಮಾಡಿಕೊಳ್ಳಲಾಗಿದ್ದ ಪವನ ವಿದ್ಯುತ್ ಯೋಜನೆಯ ಬೆಲೆ ಒಪ್ಪಂದವನ್ನು ರದ್ದುಗೊಳಿಸಿರುವುದಾಗಿ ಶ್ರೀಲಂಕಾ ಸರ್ಕಾರ ತಿಳಿಸಿದೆ. ಒಪ್ಪಂದದ ಪರಿಶೀಲನೆಗಾಗಿ ಸಮಿತಿ ಒಂದನ್ನು ರಚಿಸಲಾಗಿದೆ.

ಅದಾನಿ ಗ್ರೀನ್ ಎನರ್ಜಿಯ ಪವನ ವಿದ್ಯುತ್ ಯೋಜನೆಗಳನ್ನು ಎರಡು ಜಿಲ್ಲೆಗಳಲ್ಲಿ ಜಾರಿಗೆ ತರಲಾಗಿತ್ತು. ಈ ಯೋಜನೆಗಳನ್ನು ರದ್ದುಗೊಳಿಸಿಲ್ಲ. ಆದರೆ ಈ ಹಿಂದೆ ಕೈಗೊಳ್ಳಲಾದ ಬೆಲೆ ಸಂಧಾನವನ್ನು ತಿರಸ್ಕರಿಸಲಾಗಿದೆ ಎಂದು ಸರ್ಕಾರದ ವಕ್ತಾರರಾದ ನಳಿಂದ ಜಯತಿಸ ಹೇಳಿದ್ದಾರೆ.

ಈ ಹಿಂದೆ ರಾಣಿಲ್ ವಿಕ್ರಮಸಿಂಗೆ ನೇತೃತ್ವದ ಸರ್ಕಾರ ಇದ್ದಾಗ ಅದಾನಿ ಸಮೂಹದ ಜೊತೆ ವಿದ್ಯುತ್ ಖರೀದಿಗೆ 20 ವರ್ಷಗಳ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಸ್ಥಳೀಯ ಬಿಡ್‌ದಾರರು ಈ ಒಪ್ಪಂದವನ್ನು ಟೀಕಿಸಿದ್ದರು.

## ಸರ್ಕಾರದ ಧೋರಣೆಯಿಂದ ಪರಿತಪಿಸುತ್ತಿರುವ ಮಧ್ಯಮ ವರ್ಗದ ಜನರು



ದಾವಣಗೆರೆ,ಜ.27- ರಾಜ್ಯ ಸರ್ಕಾರದ ಧೋರಣೆಯಿಂದಾಗಿ ಜನ ಸಾಮಾನ್ಯರು ಅದರಲ್ಲಿಯೂ ಮಧ್ಯಮ ವರ್ಗದ ಜನ ಪರಿತಪಿಸುವಂತಾಗಿದೆ ಎಂದು ಹಿರಿಯ ಮುಖಂಡ ಜೆ.ಸೋಮನಾಥ್ ಟೀಕಿಸಿದ್ದಾರೆ.

ಚುನಾವಣೆ ವೇಳೆ ಜನತೆಗೆ ನೀಡಿದ ಆಶ್ವಾಸನೆಗಳನ್ನು ನೀಡುವಲ್ಲಿ ಸರ್ಕಾರ ವಿಫಲವಾಗುತ್ತಿದ್ದು, ಪಂಚ ಗ್ಯಾರಂಟಿಗಳಿಗೂ ಹಣ ಒದಗಿಸುವಲ್ಲಿ ಪರದಾಡುವಂತಾಗಿದೆ. ಹಾಗಾಗಿ ಸಾಮಾನ್ಯ ಜನರ ಮೇಲೆ ಇಲ್ಲ-ಸಲ್ಲದ ಹೊರೆಯನ್ನು ಹಾಕುವ ಮೂಲಕ, ಒಂದು ಕೈಯಲಿ ಕೊಟ್ಟು, ಇನ್ನೊಂದು ಕೈಯಿಂದ ಕಿತ್ತುಕೊಳ್ಳುವ ಕೆಲಸಕ್ಕೆ ಮುಂದಾಗಿದೆ.

ಶ್ರೀಮಂತರೇನೋ ಬದುಕುತ್ತಾರೆ. ಆದರೆ ಬಡ ಮಧ್ಯಮ ವರ್ಗದ ಜನರ ಸ್ಥಿತಿ ಅಡಕೊತ್ತಿನಲ್ಲಿ ಸಿಕ್ಕ ಅಡಕೆಯಂತಾಗಿದೆ ಎಂದು ಅವರು ಹೇಳಿದ್ದಾರೆ.

## ಸಂವಿಧಾನದ ಆಶಯವನ್ನು ಎತ್ತಿಹಿಡಿಯುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ



ಜಗಳೂರಿನ ಗಣರಾಜ್ಯೋತ್ಸವದಲ್ಲಿ ಶಾಸಕ ಬಿ.ದೇವೇಂದ್ರಪ್ಪ

ಜಗಳೂರು, ಜ. 27- ಸಂವಿಧಾನದ ಆಶಯಗಳನ್ನು, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಸಂವಿಧಾನ ಉಳಿಸಲು ನಾವೆಲ್ಲರೂ ಕಂಕಣಬದ್ದರಾಗಬೇಕು ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ಬಯಲು ರಂಗಮಂದಿರ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಮುಖ್ಯವಾಹಿನಿಗೆ ಬರಲು ಸಂವಿಧಾನವೇ ಮೂಲಾಧಾರ. ಮೀಸಲಾತಿಯಡಿ ನಾನೂ ಒಬ್ಬ ಶಾಸಕನಾಗಿ ಆಯ್ಕೆಗೊಂಡಿದ್ದೇನೆ. ಚಹಾ ಮಾರುವ ವ್ಯಕ್ತಿ, ಮಣ್ಣಿನ ಮಕ್ಕಳು ದೇಶಕ್ಕೆ ಪ್ರಧಾನಿಯಾಗಿದ್ದಾರೆ ಎಂದರೆ ಅದಕ್ಕೆ ಅಂಬೇಡ್ಕರ್ ಅವರು ನೀಡಿದ ಸಂವಿಧಾನವೇ ಕಾರಣ ಎಂದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕ ಜಾರಿಗೊಳಿಸಿ ಜನಪರ ಆಡಳಿತ ನಡೆಸುತ್ತಿದೆ. ಶಿಕ್ಷಣ, ಆರೋಗ್ಯ, ಕೃಷಿ ಕ್ಷೇತ್ರಗಳನ್ನೊಳಗೊಂಡಂತೆ ವಿಧಾನಸಭಾ ಕ್ಷೇತ್ರದ ಸರ್ವತೋಮುಖ ಅಭಿವೃದ್ದಿಗೆ ಬದ್ದನಾಗಿರುವೆ ಎಂದು ಶಾಸಕರು ಭರವಸೆ ನೀಡಿದರು.

ವಕೀಲರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಟಿ.ಬಸವರಾಜ್ ಮರೇನಹಳ್ಳಿ ಮಾತನಾಡಿ, ಸಂವಿಧಾನ ದೇಶದ ಪ್ರತಿಯೊಬ್ಬರಿಗೂ ಸಮಾನ ಮತದಾನದ ಹಕ್ಕು ಕಲ್ಪಿಸಿದೆ. ಮಹಿಳೆಯರ ಮುಖ್ಯವಾಹಿನಿಗೆ ಕಾರಣವಾಗಿದೆ ಎಂದರು.

ದೇಶದಲ್ಲಿ ನೆಮ್ಮದಿ, ಶಾಂತಿ, ಸುವ್ಯವಸ್ಥೆಗೆ ಸಂವಿಧಾನ ಕಾರಣವಾಗಿದೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಎಂದು ತಿಳಿಸಿದರು.

ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ ಧ್ವಜಾರೋಹಣ ನೆರವೇರಿಸಿ ಧ್ವಜ ವಂದನೆ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಪ.ಪಂ ಅಧ್ಯಕ್ಷ ನವೀನ್ ಕುಮಾರ್,ಉಪಾಧ್ಯಕ್ಷೆ ಲೋಕಮ್ಮ, ತಾ.ಪಂ ಇಓ ಕೆಂಚಪ್ಪ, ಸಿಪಿಐ ಹೆಚ್‌ಎಸ್.ರಾಷ್ಟ್ರಪತಿ, ಬಿಇಓ ಹಾಲಮೂರ್ತಿ, ಪ.ಪಂ.ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಎಲ್.ತಿಪ್ಪೇಸ್ವಾಮಿ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಶ್ರೀನಿವಾಸ್, ಪ.ಪಂ ಸದಸ್ಯರುಗಳು, ನಾಮನಿರ್ದೇಶಿತ ಸದಸ್ಯರುಗಳು ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.

## ವಿನಯ್‌ಕುಮಾರ್ - ಕಾಂಗ್ರೆಸ್ ಕಾರ್ಯಕರ್ತರ ಮಧ್ಯೆ ಮಾತಿನ ಚಕಮಕಿ

ಹರಿಹರ, ಜ.27- ತಹಶೀಲ್ದಾರ್ ಕಚೇರಿಗೆ ಮನವಿ ಸಲ್ಲಿಸಲು ಆಗಮಿಸಿದ್ದ ಸ್ವಾಭಿಮಾನಿ ಬಳಗ ರಾಜ್ಯಾಧ್ಯಕ್ಷ ಜಿ.ಬಿ.ವಿನಯ್ ಕುಮಾರ್ ಮತ್ತು ಕೆಲ ಕಾಂಗ್ರೆಸ್ ಕಾರ್ಯಕರ್ತರ ಮಧ್ಯೆ ಮಾತಿನ ಚಕಮಕಿ ನಡೆದಿದೆ.

ಕಾಂಗ್ರೆಸ್ ಮುಖಂಡ ತಿಪ್ಪೇಸ್ವಾಮಿ ಎಂಬುವರು ಸ್ವಾಭಿಮಾನಿ ಸಂಘಟನೆ ಬೆಂಬಲಿಸಿ ಬಂದಿದ್ದ ಜನರಿಗೆ ಇಲ್ಲಿಂದ ಹೋಗುವಂತೆ ಹೇಳಿದ್ದಾರೆ. ಆಗ ನಮ್ಮ ಮೇಲೆ ದಬ್ಬಾಳಿಕೆ ಮಾಡುತ್ತಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ವಿನಯ್ ಕುಮಾರ್, ಹರಿಹರಕ್ಕೆ ಬರಬೇಡಿ ಎಂದು ಹೇಳಲಿಕ್ಕೆ ನೀವು ಯಾರು ಎಂದು ಪ್ರಶ್ನಿಸಿದ್ದಾರೆ.

ಮುಂದಿನ ದಿನಗಳಲ್ಲಿ ತಾಲ್ಲೂಕಿನ ಪ್ರತಿಯೊಂದು ಹಳ್ಳಿಗೆ ಭೇಟಿ ಕೊಟ್ಟು ಜನರ ಸಮಸ್ಯೆಗಳಿಗೆ ಹೋರಾಟ ಮಾಡುವೆ. ಯಾರು ಬಂದು ತಡೆಯುತ್ತಾರೋ ನಾನು ನೋಡುವೆ ಎಂದು ಸವಾಲು ಹಾಕಿದ್ದಾರೆ.

ಇಲ್ಲಿನ ಜನರ ಸಮಸ್ಯೆಯನ್ನು ಪರಿಹರಿಸಲು ಕಾಂಗ್ರೆಸ್ ಮಾಜಿ ಶಾಸಕ ಎಸ್.ರಾಮಪ್ಪ ಮತ್ತು ಮುಖಂಡ ನಂದಿಗಾವಿ ಶ್ರೀನಿವಾಸ್ ಇದ್ದಾರೆ. ಇಲ್ಲಿನ ಜನರ ಬಗ್ಗೆ ಕಾಳಜಿ ತೋರಿಸಲು ನೀವು ಯಾರು ಎಂದು ತಿಪ್ಪೇಸ್ವಾಮಿ ಕೇಳಿದ್ದಾರೆ. ಮಾತಿಗೆ ಮಾತು ಬೆಳೆದಿದೆ. ಪಿಎಸ್‌ಐ ಶ್ರೀಪತಿ ಮಧ್ಯ ಪ್ರವೇಶದಿಂದ ಗಲಾಟೆ ತಹಬಂದಿಗೆ ಬಂದಿದೆ.

ಕಾಂಗ್ರೆಸ್ ಪಕ್ಷದ ಮುಖಂಡ ಕೊತ್ವಾಲ ಹನುಮಂತಪ್ಪ ಮತ್ತು ಕಾರ್ಯಕರ್ತರು ಇದ್ದರು.

## ವಾಯುಪಡೆಯಲ್ಲಿ ನೇಮಕಾತಿ ರ‍್ಯಾಲಿ

ದಾವಣಗೆರೆ, ಜ.27- ಭಾರತೀಯ ವಾಯುಪಡೆಯಲ್ಲಿನ ಏರ್‌ಮ್ಯಾನ್ ಗ್ರೂಪ್ ವೈ ತಾಂತ್ರಿಕವಲ್ಲದ ಹಾಗೂ ವೈದ್ಯಕೀಯ ಸಹಾಯಕ ವೃತ್ತಿಗೆ ನೇಮಕಾತಿ ರ‍್ಯಾಲಿಯನ್ನು ಕೇರಳದ ಕೊಚ್ಚಿಯ ಎರ್ನಾಕುಲಂನಲ್ಲಿನ ಶೆಣ್ಯೆಸ್, ಪಿಟಿ ಉಷಾ ರಸ್ತೆಯಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಾಡಿದ್ದು ದಿನಾಂಕ 29 ರಿಂದ ಫೆಬ್ರವರಿ 6 ರವರೆಗೆ ಏರ್ಪಡಿಸಲಾಗಿದೆ.

ಮಾಹಿತಿಗಾಗಿ ವೆಬ್‌ಸೈಟ್ www.airmenselection.cda.in ಗೆ ಭೇಟಿನೀಡಿ ಮಾಹಿತಿ ಪಡೆಯಬಹುದು. ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ದಾವಣಗೆರೆ ದೂ.ಸಂ: 08192-259446 ಸಂಪರ್ಕಿಸಲು ಜಿಲ್ಲಾ ಉದ್ಯೋಗಾಧಿಕಾರಿ ರವೀಂದ್ರ ತಿಳಿಸಿದ್ದಾರೆ.

## ನಗರದಲ್ಲಿ ಸಂಗೀತ ನೃತ್ಯಾದಿಗಳ ಮಹಾವಿದ್ಯಾಲಯದ ಸ್ಥಾಪನೆ ಅಗತ್ಯವಿದೆ

ದಾವಣಗೆರೆ, ಜ.27- ಶೈಕ್ಷಣಿಕ ರಂಗದಲ್ಲಿ ಗುರುತಿಸಿಕೊಂಡಿರುವ ದಾವಣಗೆರೆ ಮಹಾನಗರದಲ್ಲಿ ಶಾಸ್ತ್ರೀಯ ನೃತ್ಯ ಸಂಗೀತಾದಿಗಳ ಪೂರ್ಣ ಪ್ರಮಾಣದ ಶಿಕ್ಷಣ ನೀಡುವ ಮಹಾವಿದ್ಯಾಲಯ ಒಂದರ ಸ್ಥಾಪನೆಯ ಅಗತ್ಯವಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ. ಡಿ. ಕುಂಬಾರ ಅಭಿಪ್ರಾಯ ಪಟ್ಟರು.



ನಾಟ್ಯ ಭಾರತಿ ವಾರ್ಷಿಕೋತ್ಸವದಲ್ಲಿ ಕುಲಪತಿ ಪ್ರೊ. ಕುಂಬಾರ

ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ನಾಟ್ಯ ಭಾರತಿ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಕಲಾ ಕೇಂದ್ರದ 65ನೇ ವಾರ್ಷಿಕ ಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಶಾಸ್ತ್ರೀಯ ನೃತ್ಯ ಸಂಗೀತ ಚಿತ್ರಕಲೆ ಇವುಗಳಲ್ಲಿನ ಆಸಕ್ತಿ ಸುಸಂಸ್ಕೃತಿಯ ಲಕ್ಷಣವಾಗಿದ್ದು, ಶಿಕ್ಷಣದ ಜೊತೆ ಜೊತೆಗೆ ಕಲೆಗಳಲ್ಲೂ ಆಸಕ್ತಿಯನ್ನು ಮುಂದುವರೆಸಲು ಪೋಷಕರು ಮಕ್ಕಳಿಗೆ ಪ್ರೋತ್ಸಾಹಿಸಬೇಕು. ನೃತ್ಯ ಸಂಗೀತಾದಿಗಳಲ್ಲಿ ಸಾಧನೆ ಮಾಡಿದವರಿಗೆ ಉದ್ಯೋಗಗಳಲ್ಲೂ ಮೀಸಲಾತಿ ಇದೆ ಎಂದರು.

ತಮ್ಮ ವಿಶ್ವವಿದ್ಯಾನಿಲಯದಲ್ಲಿ ಈ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಮಾಡಲು ಎರಡು ಸ್ಥಾನಗಳ ಅವಕಾಶವಿದೆ ಎಂದು ಸಹಾ ಹೇಳಿದರು.

ನಾಟ್ಯ ಭಾರತಿಯ ಗೌರವಾಧ್ಯಕ್ಷರೂ, ಹಿರಿಯ ಪತ್ರಕರ್ತರೂ ಆದ ಹೆಚ್.ಬಿ.ಮಂಜುನಾಥ ಮಾತನಾಡಿ, ಸಂಪತ್ತಿನಿಂದ ಸಂತೋಷ ಪಡೆಯ ಬಹುದು. ಆದರೆ ಆನಂದ ಪಡೆಯಬೇಕೆಂದರೆ ಅದು ಲಲಿತ ಕಲೆಗಳಾದ ಶಾಸ್ತ್ರೀಯ ನೃತ್ಯ, ಸಂಗೀತಗಳಿಂದ ಸಾಧ್ಯ. ಏಕೆಂದರೆ ಭಾರತೀಯ ಶಾಸ್ತ್ರೀಯ ನೃತ್ಯ ಸಂಗೀತಗಳು ಮಾನವ ಸೃಷ್ಟಿ ಆಗಿರದೆ ದೈವ ಸೃಷ್ಟಿಯಾಗಿವೆ. ಆತ್ಮ ನಿವೇದನೆಗೂ ಪರಮಾತ್ಮನ ಸಾಕ್ಷಾತ್ಕಾರಕ್ಕೂ ಇವು ಸಾಧನ ಎಂಬ ಭಾವನೆ ನಮ್ಮ ದೇಶದಲ್ಲಿದೆ, ಆದ್ದರಿಂದಲೇ ನಮ್ಮ ಶಾಸ್ತ್ರೀಯ ನೃತ್ಯ, ಸಂಗೀತಗಳನ್ನು ವಿಶ್ವಾದ್ಯಂತ ಎಲ್ಲರೂ ಪೂಜ್ಯ ಭಾವನೆಯಿಂದ ಸ್ವೀಕರಿಸುತ್ತಾರೆ ಎಂದರು. ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ನೃತ್ಯ ಮತ್ತು ಸಂಗೀತಗಳ ಕುರಿತಾಗಿ ಗ್ರಂಥಗಳು 150 ರಿಂದ 200 ವರ್ಷಗಳ ಕೆಳಗೆ ರಚನೆಯಾದರೆ ಭಾರತ ದೇಶದಲ್ಲಿ ಮೂರುವರೆ ಸಾವಿರ ವರ್ಷಗಳ ಹಿಂದೆಯೇ ಭರತಮುನಿ, ನಂದಿಕೇಶ್ವರ, ಶಿಲಾಲಿ ಸಾರಂಗದೇವ ಮುಂತಾದ ಋಷಿಗಳು ನೃತ್ಯ ಸಂಗೀತಗಳ ಬಗ್ಗೆ ಮಹಾ ಗ್ರಂಥಗಳನ್ನೇ ರಚಿಸಿದ್ದಾರೆ ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ ಬಡದಾಳ್ ಮಾತನಾಡಿ, ನಾಟ್ಯ ಭಾರತಿಯು ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೂ ಕೈಗೆಟಕುವ ಶುಲ್ಕದಲ್ಲಿ ದಶಕಗಳಿಂದ ಶಾಸ್ತ್ರೀಯ ನೃತ್ಯ, ಸಂಗೀತ ಶಿಕ್ಷಣ ನೀಡುತ್ತಿರುವುದು ಸ್ವಾಗತಾರ್ಹ ಎಂದರು.

ಸಂಸ್ಥೆಯ ಅಧ್ಯಕ್ಷರಾದ ವಿದುಷಿ ರಜನಿ ರಘುನಾಥ ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು.

ಶ್ರೀನಿಧಿ ಆರ್ ಕುಲಕರ್ಣಿಯವರ ನಟುವಾಂಗ ವಿದುಷಿ ರಜನಿ ರಘುನಾಥ ಕುಲಕರ್ಣಿಯವರ ಹಾಡುಗಾರಿಕೆ ವಿದ್ವಾನ್ ಬಿ ಶ್ರೀನಾಥ ಭಟ್ ಹೊಸಪೇಟೆ ಇವರ ಮೃದಂಗ ಹಾಗೂ ವಿದ್ವಾನ್ ಜಿ ಸಿ ಕುಲಕರ್ಣಿ ತುಮಕೂರು ಇವರ ಹಾರ್ಮೋನಿಯಂ ಹಿಮ್ಮೇಳದಲ್ಲಿ ಸಂಸ್ಥೆಯ ಹಿರಿ-ಕಿರಿಯ ವಿದ್ಯಾರ್ಥಿನಿಯರು ಸುಮಾರು 19 ವಿಶೇಷ ಶಾಸ್ತ್ರೀಯ ಹಾಗೂ ಲಘು ಶಾಸ್ತ್ರಿಯ ವೈವಿಧ್ಯಮಯ ನೃತ್ಯಗಳನ್ನು ಹಾಗೂ ಗಂಗಾವತರಣ ಎಂಬ ನೃತ್ಯ ರೂಪಕವನ್ನು ಪ್ರಸ್ತುತಪಡಿಸಿದರು.

ವಿಶೇಷವಾಗಿ ಜರ್ಮನಿಯಿಂದ ಬಂದ ಶ್ರೀಕಾಂತ ಆರ್. ಕುಲಕರ್ಣಿಯವರ ನವಿಲು ನೃತ್ಯ ಹಾಗೂ ಉಡುಪಿಯ ವಿಶ್ವನಾಥರಾವ್ ಮತ್ತು ವರ್ಣಿಕಾ ಅವರ 'ವರವ ಕೊಡು' ಎಂಬ ಕನಕದಾಸರ ಕೀರ್ತನೆ ನೃತ್ಯ ಆಕರ್ಷಕವಾಗಿತ್ತು.

ನಾಟ್ಯ ಭಾರತಿಯ ನಿರ್ದೇಶಕ ರಾಜಶೇಖರ್, ವಿಜಯ ಕುಮಾರ್ ಕಲಮದಾನಿ, ಕುಬೇರ, ವಿಶ್ವನಾಥ್ ಕೆ ಎಸ್, ಸಾಗರ್ ತೌಡೂರು, ಬಿ ಶಿವಶಂಕರ್, ಶರತ್ ರಾಜ್ ಕಾರ್ಯಕ್ರಮಕ್ಕೆ ಸಹಕಾರ ನೀಡಿದರು. ಧಾರವಾಡದ ಸಂತೋಷ್ ಮಹಾಲೆ ದಂಪತಿ ಕಲಾತ್ಮಕ ಮೇಕಪ್ ವ್ಯವಸ್ಥೆ ನಿರ್ವಹಿಸಿದರು.

### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಚಿರಡೋಣಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ**

ಕ್ರ. ಸಂಖ್ಯೆ : ಗ್ರಾಪಂ.ಚಿ/ಇಟೆಂಡರ್/2024-25 ದಿನಾಂಕ :- 27.01.2025

**'ಇ-ಪ್ರಕ್ಯೂರ್ ಮೆಂಟ್' ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ**

ಈ ಕಛೇರಿಯಿಂದ 2024-25ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯಿತಿ ಚಿರಡೋಣಿ, ಚನ್ನಗಿರಿ ತಾಲ್ಲೂಕು ದಾವಣಗೆರೆ ಜಿಲ್ಲೆ ಇವರು ಲೋಕೋಪಯೋಗಿ ಇಲಾಖೆ ಮತ್ತು ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ-ಟೆಂಡರ್‌ಗಾಗಿ ಇ-ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರ / ಸಾಮಗ್ರಿ ಸರಬರಾಜುದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Tender Document for E-procurement for Goods ನಮೂನೆಯಲ್ಲಿ (K/H-2) ಆಹ್ವಾನಿಸಲಾಗಿದೆ.

| ಕ್ರ.ಸಂ. | ಕಾಮಗಾರಿ ಹೆಸರು | ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | ಚಿರಡೋಣಿ ಗ್ರಾಮದ ನಾಲ್ಕು ವಾರ್ಡ್‌ಗಳಿಗೆ ಬೀದಿದೀಪ ನಿರ್ವಹಣೆ RDPR/2024-25/SE2105 | 306851-00 |
| 2 | ಚಿರಡೋಣಿ ಗ್ರಾಮದ ಅಂಬಾಭವಾನಿ ದೇವಸ್ಥಾನದ ಹತ್ತಿರ ಹೈಮಾಸ್ಟ್ ಲೈಟ್ ಅಳವಡಿಸುವುದು RDPR/2024-25SE2108 | 300000-00 |
| 3 | ಚಿರಡೋಣಿ ಗ್ರಾಮ ಪಂಚಾಯಿತಿಯ ಹೈಮಾಸ್ಟ್ ಲೈಟ್ ದುರಸ್ಥಿ ಮತ್ತು ಸಾಮಗ್ರಿ ಖರೀದಿ RDPR/2024-25SE2107 | 150000-00 |
| 4 | ಚಿರಡೋಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಡಿಯುವ ನೀರು ಮೋಟಾರು ರಿವೈಂಡಿಂಗ್ ಮತ್ತು ನಿರ್ವಹಣೆ RDPR/2024-25/SE2106 | 400000-00 |
| 5 | ಚಿರಡೋಣಿ ಗ್ರಾಮದ ಕುಡಿಯುವ ನೀರಿನ ಮೋಟಾರ್ ಬಿಡಿಭಾಗಗಳ ಸಾಮಗ್ರಿ ಖರೀದಿ RDPR/2024-25IND7029 | 550000-00 |
| 6 | ಚಿರಡೋಣಿ ಗ್ರಾಮದ ಕುಡಿಯುವ ನೀರಿನ ಬಿಡಿಭಾಗಗಳ ಸಾಮಾಗ್ರಿ ಖರೀದಿ RDPR/2024-25IND7027 | 398729-00 |
| 7 | ಚಿರಡೋಣಿ ಗ್ರಾಮದ ಪಂಚಾಯಿತಿ ಘನತ್ಯಾಜ್ಯ ವಿಲೇವಾರಿ ಮಾಡಲು ಡಸ್ಟ್‌ಬಿನ್ ಖರೀದಿ RDPR/2024-25IND7030 | 150000-00 |

**ಇ-ಟೆಂಡರ್ ವೇಳಾಪಟ್ಟಿ**

| | | |
|---|---|---|
| 1 | ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ-1 ಮತ್ತು ಅನುಬಂಧ - 2ನ್ನು) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ & ಸಮಯ | ದಿನಾಂಕ : 27-01-2025 |
| 2 | ಇ-ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಇಂಧೀಕರಿಸಲು ಕೊನೆಯ ದಿನಾಂಕ | ದಿನಾಂಕ : 10-02-2025 ಸಂಜೆ 5.30 ಗಂಟೆಯವರೆಗೆ |
| 3 | ಇ-ಪೋರ್ಟಲ್‌ನಲ್ಲಿ ದಾಖಲಾತಿಗಳ / ತಾಂತ್ರಿಕ, ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ : 12-02-2025 ಬೆಳಿಗ್ಗೆ 11 ಗಂಟೆಗೆ |
| 4 | ಈ ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಕಚೇರಿ ವಿವರ | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯಿತಿ, ಚಿರಡೋಣಿ. |

ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ www.kppp.karnataka.gov.in ನೋಡಿಕೊಳ್ಳುವುದು. ಕಛೇರಿ ವೇಳೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸುವುದು.

ಸಹಿ/-
**ಅಧ್ಯಕ್ಷರು**
ಗ್ರಾಮ ಪಂಚಾಯಿತಿ. ಚಿರಡೋಣಿ.

ಸಹಿ/-
**ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು**
ಗ್ರಾಮ ಪಂಚಾಯಿತಿ, ಚಿರಡೋಣಿ.

## ಎಫ್‌ಐಐಟಿಜೆಇಇ ಕೇಂದ್ರಗಳು ಬಂದ್ : ಪ್ರಕರಣ ದಾಖಲು

ನೋಯ್ಡಾ, ಜ.27- ದೆಹಲಿಯಲ್ಲಿ ಎಫ್‌ಐಐಟಿಜಿಇಇ ಕೋಚಿಂಗ್ ಕೇಂದ್ರಗಳನ್ನು ಬಂದ್ ಮಾಡಿರುವ ಕಾರಣ ದಾಖಲಾದ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಅದರ ಸ್ಥಾಪಕ ಸೇರಿದಂತೆ 12 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಸಂಸ್ಥೆಯ ಸ್ಥಾಪಕ ಡಿ.ಕೆ. ಗೋಯಲ್, ಮುಖ್ಯ ಹಣಕಾಸು ಅಧಿಕಾರಿ ರಾಜೀವ್ ಬಬ್ಬರ್, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮನೀಶ್ ಆನಂದ್ ಸೇರಿದಂತೆ ಹಲವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೋಷಕರು ದಾಖಲಿಸಿರುವ ದೂರಿನ ಹಿನ್ನೆಲೆಯಲ್ಲಿ ಅಪರಾಧಿಕ ಸಂಚು ಹಾಗೂ ನಂಬಿಕೆ ಉಲ್ಲಂಘನೆ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ನೋಯ್ಡಾ ಡಿಸಿಪಿ ರಾಮಬದನ್ ಸಿಂಗ್ ತಿಳಿಸಿದ್ದಾರೆ.

ದೆಹಲಿ - ಎನ್‌ಸಿಆರ್ ಪ್ರದೇಶದ ಹಲವು ಕೋಚಿಂಗ್ ಕೇಂದ್ರಗಳನ್ನು ಹಠಾತ್ತನೆ ಮುಚ್ಚಲಾಗಿದೆ ಎಂದು ವಿದ್ಯಾರ್ಥಿಗಳು ಹಾಗೂ ಪೋಷಕರು ದೂರಿದ್ದರು. ಹಲವು ತಿಂಗಳಿನಿಂದ ವೇತನ ಪಾವತಿಸದ ಕಾರಣ ಕೆಲ ಶಿಕ್ಷಕರು ರಾಜೀನಾಮೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಕೇಂದ್ರಗಳನ್ನು ಮುಚ್ಚಲಾಗಿದೆ ಎನ್ನಲಾಗಿತ್ತು.

ಇಂಜಿನಿಯರಿಂಗ್ ಪ್ರವೇಶಕ್ಕಾಗಿ ಎಫ್‌ಐಐಟಿಜೆಇಇ ಕೋಚಿಂಗ್ ನೀಡುತ್ತದೆ. ದೇಶಾದ್ಯಂತ ಇದು 73 ಕೇಂದ್ರಗಳನ್ನು ಹೊಂದಿದೆ.

ಹಠಾತ್ತನೇ ಈ ಕೇಂದ್ರಗಳನ್ನು ಮುಚ್ಚಿರುವ ಕಾರಣ ಲಕ್ಷಾಂತರ ರೂಪಾಯಿ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳು ಹಾಗೂ ಪೋಷಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.

### IN THE COURT OF THE III ADDITIONAL CIVIL JUDGE AND JMFC COURT AT DAVANGERE

O.S.No.148 of 2023

Plaintiff : Karnataka Gramina Bank
-Vs.-
Defendants : Smt Yasmin Taz and another
Defendant ;- 1)Smt Yasmin Taz dead by Lr's
1(a) Sri Mohamed Astaf s/o Late Mohamed Hussain, II Main, 15th Cross, Vinobanagara Davangere.

**Summons under Order 5 Rule 20(1)(a) of CPC.**

WHEREAS, the plaintiff Karnataka Gramina Bank Saraswathi Badavane Branch, Davangere has instituted the suit against you for the recovery a sum of Rs Rs 2,63,847/- and for court costs and such other reliefs. You the defendant 1 a) being lr's of deceased Smt Yasmin Taz do hereby summoned to appear in this court in person or by a pleader duly instructed and able to answer all your material questions relating to the said suit who shall be accompanied by some person able to answer all such questions, on the 3-2-2025 at Davangere in the forenoon 11 O'Clock to answer the claim and as the day fixed for your appearance is appointed for the final disposal of the suit.

Take notice that in default of your appearance on the day before mentioned, the suit will be heard and determined in your absence.

Given under my hand and seal of the court this 25th day of 2025.

**GOPAL.M.**
Advocate for Plaintiff
Ph. : 9448233500
DAVANGERE
DATE: 25-01-2025

**By the order of the Court,
Chief Ministerial Officer
Principal Civil Judge Court
Davangere.**

### ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಹಾಗೂ ಸಿಜೆಎಂ, ದಾವಣಗೆರೆ

**ಸಿಆರ್‌ಮಿಸ್ ನಂ. 43/2025**

**ಅರ್ಜಿದಾರರು :ಶ್ರೀ ಹಂಸತಾರಕಮ್ ಮತ್ತು ಇನ್ನೊಬ್ಬರು -ವಿರುದ್ಧ- ಎದುರುದಾರರು : ಜನನ ಮತ್ತು ಮರಣಗಳ ಮುಖ್ಯ ರಿಜಿಸ್ಟ್ರರ್ ತಹಶೀಲ್ದಾರ್‌ರವರ ಕಛೇರಿ, ದಾವಣಗೆರೆ ತಾಲ್ಲೂಕು, ದಾವಣಗೆರೆ.**

**ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸ್**

ಅರ್ಜಿದಾರರ ತಂದೆಯಾದ ಕೆ. ನಾರಾಯಣಮೂರ್ತಿ ಬಿನ್ ಶ್ರೀ ರಾಮುಲು ಇವರು ದಿನಾಂಕ : 25.10.1984ರಂದು ಮಾಳಗೊಂಡನಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು ಹಾಗೂ ಜಿಲ್ಲೆಯ 2 ನೇ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರು ಮೇಲ್ಕಂಡ ಪ್ರಕರಣವನ್ನು ತಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ಪಡೆಯಲು ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರಾದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ : 11.3.2025 ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಿದ್ದು, ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಸಿದೆ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ : 27.1.2025 ರಂದು ಕೊಡಲ್ಪಟ್ಟಿದೆ.

**ಸಹಿ/- ಅರ್ಜಿದಾರರ ಪರ ವಕೀಲರು**

**ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಸಿಜೆಎಂ ದಾವಣಗೆರೆ.**

### ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ.

**ಆರ್.ಎ.ನಂ. 77/2024-25**

**ಮೇಲ್ಮನವಿದಾರರು : ಶ್ರೀ ರಮೇಶ್ ನಾಯ್ಕ ಮತ್ತು ಇತರರು -ವಿರುದ್ಧ- ಪ್ರತಿವಾದಿಗಳು : ಮಾನ್ಯ ತಹಶೀಲ್ದಾರರು ಮತ್ತು ಇತರರು**

**ಪತ್ರಿಕಾ ಪ್ರಕಟಣೆ**

ಪ್ರಸ್ತುತ ಮೇಲ್ಮನವಿಯನ್ನು ಚನ್ನಗಿರಿ ತಾಲ್ಲೂಕು, ಉಬ್ರಾಣಿ ಹೋಬಳಿ, ಹನುಮಲಾಪುರ ಗ್ರಾಮದ ಸ.ನಂ.15ರ ಒಟ್ಟು ವಿಸ್ತೀರ್ಣ 2 ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಎಸ್.ಆರ್.ನಂ. 244/2005-06 ದಿ. 28.04.2005ನೇ ಇಸವಿಯ ಕ್ರಯಪತ್ರದಂತೆ ಖಾತೆ ಬದಲಾವಣೆ ಮಾಡಲು ನಿರಾಕರಿಸಿರುವ ಮಾನ್ಯ 1ನೇ ಪ್ರತಿವಾದಿಯ ಆದೇಶ ನಂ. ಎಂ. ಆರ್. 6/2004-05 ಹಾಗೂ 2ನೇ ಪ್ರತಿವಾದಿ ಆದೇಶ ಆರ್.ಎ.ಸಿ.ಆರ್ 93/2023-24 ದಿ. 29.08.2024ರ ಈ ಎರಡೂ ಆದೇಶಗಳ ಕಾನೂನು ಬದ್ಧತೆ ಮತ್ತು ಔಚಿತ್ಯವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದು, ಸದರಿ ಮೇಲ್ಮನವಿಯಲ್ಲಿ 3ನೇ ಪ್ರತಿವಾದಿ ಶ್ರೀ ಕೃಷ್ಣ ನಾಯ್ಕ ಬಿನ್ ಗಂಗಾನಾಯ್ಕ್, 4ನೇ ಪ್ರತಿವಾದಿ ಶ್ರೀ ರತ್ನ ನಾಯ್ಕ ಬಿನ್ ಕೃಷ್ಣ ನಾಯ್ಕ, 5ನೇ ಪ್ರತಿವಾದಿ ಶ್ರೀ ರೇವಣ ನಾಯ್ಕ ಬಿನ್ ಕೃಷ್ಣ ನಾಯ್ಕ, 6ನೇ ಪ್ರತಿವಾದಿ ದೇವೇಂದ್ರ ನಾಯ್ಕ ಬಿನ್ ಕೃಷ್ಣ ನಾಯ್ಕ ಆದ ನೀವುಗಳು ನ್ಯಾಯಾಲಯದಿಂದ ನೋಟೀಸ್ ನೀಡಿದರೂ ಹಾಜರಾಗಿರುವುದಿಲ್ಲ. ಸದರಿ ಪ್ರಕರಣವನ್ನು 20.02.2025 ದಿನಾಂಕದಂದು ನಿಗದಿಪಡಿಸಿದ್ದು ಆ ದಿನಾಂಕದಂದು ನೀವಾಗಲೀ ಅಥವಾ ನಿಮ್ಮಿಂದ ನಿಯುಕ್ತಿಗೊಂಡ ವಕೀಲರಾಗಲೀ ಹಾಜರಾಗತಕ್ಕದ್ದು. ತಪ್ಪಿದಲ್ಲಿ ತಮ್ಮ ತಕರಾರು ಏನೂ ಇಲ್ಲವೆಂದು ಪರಿಗಣಿಸಿ, ನಿಮ್ಮ ಅನುಪಸ್ಥಿತಿಯಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವುದು.

**ಸಹಿ/-
ಮೇಲ್ಮನವಿದಾರರ ಪರ ವಕೀಲರು
ಸ್ಥಳ : ದಾವಣಗೆರೆ.
ದಿನಾಂಕ 23.01.2025**

**ಸಹಿ/- ಮಾನ್ಯ ಜಿಲ್ಲಾಧಿಕಾರಿಗಳು
ದಾವಣಗೆರೆ.
ಜಿಲ್ಲೆ ದಾವಣಗೆರೆ.**

# ದಕ್ಷಿಣ ಕೊರಿಯಾದಲ್ಲಿ ರಾಜಕೀಯ ಪ್ರತಿಭಟನೆಗೆ ಶ್ರದ್ಧಾಂಜಲಿ ಪುಷ್ಪಗುಚ್ಛ

ಸಿಯೋಲ್, ಜ. 27- ದಕ್ಷಿಣ ಕೊರಿಯಾ ಇತ್ತೀಚಿನ ದಶಕಗಳಲ್ಲಿ ಅತ್ಯಂತ ತೀವ್ರವಾದ ರಾಜಕೀಯ ಬಿಕ್ಕಟ್ಟು ಎದುರಿಸುತ್ತಿದೆ. ಈ ಸಂದರ್ಭದಲ್ಲಿ ಜನರು ಶ್ರದ್ಧಾಂಜಲಿ ಪುಷ್ಪಗುಚ್ಛ ಹಾಗೂ ಕೊರಿಯನ್ ಪಾಪ್ ಬೆಳಕಿನ ಕಡ್ಡಿಗಳನ್ನು ಪ್ರತಿಭಟನೆಯ ಅಸ್ತ್ರಗಳಾಗಿ ಬಳಸಿಕೊಳ್ಳುತ್ತಿದ್ದಾರೆ.

ಕಳೆದ ಡಿಸೆಂಬರ್ ತಿಂಗಳಲ್ಲಿ ಸೈನಿಕ ಆಡಳಿತಕ್ಕೆ ಮುಂದಾಗಿದ್ದ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರಿಗೆ ಶ್ರದ್ಧಾಂಜಲಿ ಪುಷ್ಪ ಗುಚ್ಛಗಳನ್ನು ನೂರಾರು ಸಂಖ್ಯೆಯಲ್ಲಿ ರವಾನಿಸಲಾಗುತ್ತಿದೆ. ಅವರ ನಿವಾಸ ಹಾಗೂ ಅವರ ವಿರುದ್ಧ ವಾಗ್ದಂಡನೆ ಪ್ರಕ್ರಿಯೆ ನಡೆಸುತ್ತಿರುವ ಅಧಿಕಾರಿಗಳ ಕಚೇರಿಗಳಿಗೆ ಶ್ರದ್ಧಾಂಜಲಿ ಪುಷ್ಪಗುಚ್ಛಗಳನ್ನು ರವಾನಿಸಲಾಗುತ್ತಿದೆ.

ಸರ್ಕಾರಿ ಕಚೇರಿಗಳಿಗೆ ಸಾವಿರಾರು ಸಂಖ್ಯೆಯಲ್ಲಿ ಪುಷ್ಪಗುಚ್ಛಗಳನ್ನು ರವಾನಿಸಲಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಇಂತಹ ಪುಷ್ಪಗುಚ್ಛಗಳಲ್ಲಿ ಬಹುತೇಕ ಸಾಮಾನ್ಯ ಸಂದೇಶ ಇದೆಯಾದರೂ ಕೆಲವರು ತೀವ್ರ ಸ್ವರೂಪದ ಸಂದೇಶಗಳನ್ನು ಕಳಿಸಿದ್ದಾರೆ.

ಕೆಲವು ಪುಷ್ಪಗುಚ್ಛಗಳು 75 ಡಾಲರ್‌ಗಳಷ್ಟು ದುಬಾರಿಯಾಗಿವೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.



ಇತ್ತೀಚಿನ ವರ್ಷಗಳಲ್ಲಿ ಶ್ರದ್ಧಾಂಜಲಿ ಪುಷ್ಪಗುಚ್ಛಗಳ ಮೂಲಕ ಪ್ರತಿಭಟನೆ ನಡೆಸುವುದು ಸಾಮಾನ್ಯವಾಗಿದೆ. 2023 ಕ್ಕೆ ಹೋಲಿಸಿದರೆ 2024ರಲ್ಲಿ ಪುಷ್ಪಗುಚ್ಛಗಳ ಮೂಲಕ ಪ್ರತಿಭಟನೆ ನಡೆಸುವುದು ನಾಲ್ಕು ಪಟ್ಟು ಹೆಚ್ಚಾಗಿದೆ ಎಂದು ಬಿಗ್ ಕೈಂಡ್ಸ್ ವರದಿ ತಿಳಿಸಿದೆ.

2010 ರ ಆರಂಭದಿಂದಲೂ ಈ ರೀತಿಯ ಪ್ರತಿಭಟನೆಗಳು ಕಂಡುಬರುತ್ತಿವೆ. ಇಂತಹ ಪ್ರತಿಭಟನೆ ಯಾವಾಗ ಆರಂಭವಾಯಿತು ಎಂಬುದು ಸ್ಪಷ್ಟವಾಗಿಲ್ಲ.

ಆನ್‌ಲೈನ್ ಬ್ಲಾಗ್‌ಗಳ ಮೂಲಕ ಈ ರೀತಿಯ ಪ್ರತಿಭಟನೆಗಳು ಇನ್ನಷ್ಟು ಜನಪ್ರಿಯತೆ ಪಡೆದುಕೊಳ್ಳುತ್ತಿವೆ. ಕೆಲವೇ ಕೆಲವು ಹೂವಿನ ಅಂಗಡಿಗಳು ಈ ರೀತಿಯ ಪ್ರತಿಭಟನೆ ಪುಷ್ಪಗುಚ್ಛಗಳ ಮಾರಾಟಕ್ಕೆ ಆಕರ್ಷಣೆ ಪಡೆದುಕೊಂಡಿದೆ.

ಅಧ್ಯಕ್ಷ ಯೂನ್ ಪರವಾಗಿಯೂ ಹಲವರು ಪುಷ್ಪಗುಚ್ಛ ಅಭಿಯಾನ ನಡೆಸಿದ್ದಾರೆ. ಡಿಸೆಂಬರ್ ನಂತರ ಸಾವಿರಕ್ಕೂ ಹೆಚ್ಚು ಪುಷ್ಪಗುಚ್ಛಗಳನ್ನು ಬೆಂಬಲಿಗರು ಖರೀದಿಸಿದ್ದಾರೆ ಎಂದು ಸಿಯೋಲ್‌ನಲ್ಲಿರುವ ಡಾನ್‌ಸಂಗ್ ಫ್ಲವರ್‌ನಲ್ಲಿ ಕಾರ್ಯನಿರ್ವಹಿಸುವ ಯೂನ್ ಮಿಯೂಂಗ್ ತಿಳಿಸಿದ್ದಾರೆ.

ನಾವು ಎಷ್ಟರಮಟ್ಟಿಗೆ ಪುಷ್ಪಗುಚ್ಛಗಳನ್ನು ಕಳಿಸಿದ್ದೇವೆ ಎಂದರೆ ನಮ್ಮಲ್ಲಿ ಹೂವು ಬಹುತೇಕ ಖಾಲಿಯಾಗಿದೆ. ಪುಷ್ಪಗುಚ್ಛ ಖರೀದಿಸಿರುವವರು 20 ರಿಂದ 30ರ ವಯಸ್ಸಿನವರಾಗಿದ್ದಾರೆ ಎಂದವರು ತಿಳಿಸಿದ್ದಾರೆ.

ಪುಷ್ಪಗುಚ್ಛಗಳು ದೈಹಿಕ ಹಿಂಸಾಚಾರದಿಂದ ದೂರ ಉಳಿದಿವೆ. ಆದರೆ ಇದು ಒಂದು ರೀತಿಯ ದ್ವೇಷ ಭಾಷಣದಂತೆ ಇದೆ. ದ್ವೇಷದ ಅಂಶವನ್ನು ಹೂವುಗಳಲ್ಲಿ ಅಲಂಕರಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಉಪನ್ಯಾಸಕ ಕೋಯಿ ಹ್ಯಾಂಗ ಸಬ್ ಹೇಳಿದ್ದಾರೆ.

ಈ ರೀತಿಯ ಪ್ರತಿಭಟನೆ ರಾಜಕೀಯ ಗುಂಪಿನ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿದೆ. ಇದಕ್ಕೆ ವ್ಯಾಪಕ ಜನಬೆಂಬಲ ಸಿಕ್ಕಿಲ್ಲ ಎಂದು ಜುಗ್ವಾನ್ ವಿಶ್ವವಿದ್ಯಾಲಯದ ಉಪನ್ಯಾಸಕ ಕಿಮ್ ಹರ್ನ್ ಸಿಕ್ ಹೇಳಿದ್ದಾರೆ.

ಪುಷ್ಪಗುಚ್ಛಗಳ ಈ ರೀತಿಯ ರಾಶಿಯಿಂದ ಪರಿಸರದ ಮೇಲೆ ಆಗುತ್ತಿರುವ ಪರಿಣಾಮಗಳ ಬಗ್ಗೆಯೂ ಹಲವರು ಕಳವಳ ವ್ಯಕ್ತಪಡಿಸಿದ್ದಾರೆ.

ಈ ರೀತಿಯ ಪುಷ್ಪಗುಚ್ಛಗಳಿಗೆ ಪರಿಸರ ಸ್ನೇಹಿ ಅಲ್ಲದ ವಸ್ತುಗಳನ್ನು ಬಳಸಲಾಗುತ್ತಿದೆ. ಇದರಿಂದ ಪುಷ್ಪ ಕೃಷಿಕರಿಗೆ ಆಗಲೀ ಇಲ್ಲವೇ ಪರಿಸರಕ್ಕಾಗಲೀ ಯಾವುದೇ ಪ್ರಯೋಜನ ಇಲ್ಲ ಎಂದು ಕಿಮ್ ಹೇಳಿದ್ದಾರೆ

ಯುವ ಪೀಳಿಗೆಯ ಪ್ರತಿಭಟನಾಕಾರರು ಕೊರಿಯಾ ಪಾಪ್ ಬೆಳಕಿನ ಕಡ್ಡಿಗಳನ್ನು ಬಳಸುತ್ತಿದ್ದಾರೆ. ಪುಷ್ಪಗುಚ್ಛಗಳಿಗಿಂತ ಇವು ಉತ್ತಮ ಎಂದು ಕಿಮ್ ಅಭಿಪ್ರಾಯಪಟ್ಟಿದ್ದಾರೆ.

ಕಳೆದ ಡಿಸೆಂಬರ್ ತಿಂಗಳಲ್ಲಿ ರಾಷ್ಟ್ರೀಯ ಸದನದಲ್ಲಿ ಶಾಸಕರು ಅಧ್ಯಕ್ಷ ಯೂನ್ ವಿರುದ್ಧ ಕ್ರಮ ತೆಗೆದುಕೊಳ್ಳಲು ಸೇರಿದ್ದರು. ಆಗ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಜನರು ಕೊರಿಯಾ ಪಾಪ್ ಬೆಳಕಿನ ಕಡ್ಡಿಗಳನ್ನು ಹಿಡಿದಿದ್ದರು.

ಇಂತಹ ಬೆಳಕಿನ ಕಡ್ಡಿಗಳು ದುಬಾರಿಯಾಗಿವೆ. ಆದರೂ ಜನರು ತಮ್ಮ ಅಭಿಪ್ರಾಯ ತಿಳಿಸಲು ಈ ಮಾರ್ಗ ಬಳಸುತ್ತಿದ್ದಾರೆ. ಹಲವರು ಈ ರೀತಿಯ ಬೆಳಕಿನ ಕಡ್ಡಿಗಳನ್ನು ಪ್ರತಿಭಟನೆಗೆ ಬಳಸಲು ಉಚಿತವಾಗಿ ನೀಡುತ್ತಿದ್ದಾರೆ. ಇನ್ನು ಕೆಲವರು ಆನ್‌ಲೈನ್ ಮೂಲಕ ಬಾಡಿಗೆಗೆ ನೀಡುತ್ತಿದ್ದಾರೆ.

ಡಿಸೆಂಬರ್ 3ರಂದು ಯೂನ್ ಅವರು ಸೈನಿಕ ಆಡಳಿತ ಹೇರಿದ್ದರು. ಯೂನ್ ಪ್ರಯತ್ನ ವಿಫಲವಾಗಿತ್ತು. ನಂತರ ಅವರು ಮಹಾಭಿಯೋಗ ಎದುರಿಸುವ ಪರಿಸ್ಥಿತಿ ಬಂದಿತ್ತು.

## ಉತ್ತರ ಗಾಜಾಗೆ ಮರಳಲು ಇಸ್ರೇಲ್ ಅನುಮತಿ

ಡೀರ್ -ಅಲ್ -ಬಲಾ, ಜ.27- ಹಮಾಸ್ ವಿರುದ್ಧ ಸಂಘರ್ಷ ಆರಂಭವಾದ 15 ತಿಂಗಳ ನಂತರ ಗಾಜಾ ಪಟ್ಟಿಯ ಉತ್ತರದಲ್ಲಿ ಪ್ಯಾಲೆಸ್ಟೀನ್ ಜನರು ಮರಳಲು ಇಸ್ರೇಲ್ ಅನುಮತಿ ನೀಡಿದೆ.

ಹಲವು ದಿನಗಳ ಕಾಲ ನೆಟ್ಸಾರಿನ್ ಭಾಗದಲ್ಲಿ ಕಾದಿದ್ದ ಸಾವಿರಾರು ಜನರು ಉತ್ತರದ ಭಾಗಕ್ಕೆ ಮರಳಲು ಅವಕಾಶ ಪಡೆದಿದ್ದಾರೆ.

ಹಮಾಸ್ ಹಾಗೂ ಇಸ್ರೇಲ್ ನಡುವೆ ಕದನ ವಿರಾಮಕ್ಕೆ ಸಂಬಂಧಿಸಿದಂತೆ ಇದ್ದ ತೊಡಕುಗಳು ನಿವಾರಣೆಯಾದ ನಂತರ ಈ ಬೆಳವಣಿಗೆಯಾಗಿದೆ.

ಸಂಘರ್ಷ ಆರಂಭವಾದ ಮೊದಲ ವಾರಗಳಲ್ಲಿ ಉತ್ತರ ಭಾಗದಲ್ಲಿರುವ ಜನರು ತಮ್ಮ ನೆಲೆಗಳನ್ನು ಸಂಪೂರ್ಣ ತೆರವುಗೊಳಿಸಬೇಕು ಎಂದು ಇಸ್ರೇಲ್ ತಿಳಿಸಿತ್ತು. ಇದರಿಂದಾಗಿ ಸುಮಾರು ಹತ್ತು ಲಕ್ಷ ಜನರು ಗಾಜಾ ಪಟ್ಟಿಯ ದಕ್ಷಿಣ ಭಾಗಕ್ಕೆ ತೆರಳಿದ್ದರು. ಅವರು ತಮ್ಮ ನೆಲೆಗಳಿಗೆ ವಾಪಸಾಗಲು ಇದುವರೆಗೂ ಅವಕಾಶ ದೊರೆತಿರಲಿಲ್ಲ.

## ಕರಾಟೆ : ರಾಷ್ಟ್ರಮಟ್ಟಕ್ಕೆ ಸಾದತ್

ದಾವಣಗೆರೆ,ಜ.27- ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ಆಶ್ರಯದಲ್ಲಿ ಗಣರಾಜ್ಯೋತ್ಸವ ದಿನದಂದು ಬೆಂಗಳೂರಿ ನಲ್ಲಿ ನಡೆದ 16ನೇ ರಾಜ್ಯ ಕರಾಟೆ ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ನಗರದ ಚಾಣಕ್ಯ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿ ಸಾದತ್ ಅಹಮದ್ ಬಂಗಾರದ ಪದಕ ವಿಜೇತರಾಗಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

# ತೀರ್ಪು ಕಾಯ್ದಿರಿಸಿದ ಹೈಕೋರ್ಟ್

**(1ನೇ ಪುಟದಿಂದ)** ಪೊಲೀಸರಿಂದ ದಕ್ಷ ತನಿಖೆ ಸಾಧ್ಯವಿಲ್ಲ, ರಾಜಕೀಯ ಒತ್ತಡದಿಂದ ತನಿಖೆ ಹಳಿ ತಪ್ಪಬಹುದು.

ಆರೋಪಿಗಳ 3.26 ಲಕ್ಷ ರೂ. ಮೌಲ್ಯದ ಜಮೀನು ಸ್ವಾಧೀನಕ್ಕೆ ಬದಲಾಗಿ ದುಬಾರಿ ನಿವೇಶನ ಹಂಚಿಕೆ ಮಾಡಲಾಗಿದೆ, ಎಲ್ಲ ಅಧಿಕಾರಿಗಳೂ ಸೇರಿ ಅನುಕೂಲ ಮಾಡಿಕೊಟ್ಟಿದ್ದಾರೆ, ಅಸ್ತಿತ್ವದಲ್ಲೇ ಇಲ್ಲದ ಜಮೀನಿನ ಭೂ ಪರಿವರ್ತನೆ ಮಾಡಲಾಗಿದೆ, ಕ್ಯಾಬಿನೆಟ್ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಟಿಪ್ಪಣಿ ಇದ್ದು, ಈ ಪ್ರಕರಣದಲ್ಲಿ ಸ್ವತಂತ್ರ ತನಿಖೆ ಅನಿವಾರ್ಯ ಎಂದು ವಾದಿಸಿದರು.

ನ್ಯಾಯ ಎತ್ತಿ ಹಿಡಿಯಲು ಸಿಬಿಐ ತನಿಖೆ ಅನಿವಾರ್ಯ, ಮುಡಾ ಪ್ರಕರಣದಲ್ಲಿ ನಡೆದಿರುವ ಘಟನೆಗಳು ತನಿಖೆಯ ಅಗತ್ಯತೆಯನ್ನು ಒತ್ತಿ ಹೇಳುತ್ತಿವೆ, ಒಮ್ಮುಖದ, ತಾರತಮ್ಯದ ತನಿಖೆ ನಡೆಯಬಾರದು, ಸ್ವತಂತ್ರ ನ್ಯಾಯಸಮ್ಮತ ತನಿಖೆ ಆಗಬೇಕಿದೆ, ಲೋಕಾಯುಕ್ತ ಪೊಲೀಸರಿಂದ ನ್ಯಾಯಸಮ್ಮತ ತನಿಖೆ ಸಾಧ್ಯವಿಲ್ಲ, ಎಲ್ಲವನ್ನೂ ಕಾರ್ಪೆಟ್ ಕೆಳಗೆ ಹಾಕುವ ಪ್ರಯತ್ನ ನಡೆಯುತ್ತಿದೆ ಎಂದರು.

ಈ ಮಧ್ಯೆ, ಎಜಿ ಶಶಿಕಿರಣ್ ಶೆಟ್ಟಿ ಮನವಿ ಮಾಡಿ, ಸ್ವಲ್ಪ ಕಾಲಾವಕಾಶ ನೀಡಬೇಕೆಂದು ಕೋರಿದರು.

ಸರ್ಕಾರದ ಪರ ವಕೀಲ ಕಪಿಲ್ ಸಿಬಾಲ್ ವಾದ ಮಂಡಿಸಲಿರುವುದರಿಂದ ಬೆಂಗಳೂರಿನಲ್ಲಿ ವಿಚಾರಣೆ ನಡೆದಾಗ ದಿನಾಂಕ ನಿಗದಿಪಡಿಸಿ ಎಂದು ಅವರು ಮಾಡಿದ ಮನವಿಯನ್ನು ಒಪ್ಪದ ಹೈಕೋರ್ಟ್, ಇಂದು ವಿಚಾರಣೆ ನಿಗದಿಯಾಗಿದೆ, ಮುಂದೂಡಿಕೆ ಸಾಧ್ಯವಿಲ್ಲ ಎಂದಿತು.

ಭೂ ಮಾಲೀಕ ದೇವರಾಜು ಪರ ವಕೀಲ ದುಷ್ಯಂತ್ ದವೆ ವಾದ ಮಂಡಿಸಿ, ದೇವರಾಜು ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣವಿಲ್ಲ, ಆದ್ದರಿಂದ ಸಿಬಿಐ ತನಿಖೆಗೆ ವಹಿಸುವ ಅಗತ್ಯವಿಲ್ಲ, ಲೋಕಾಯುಕ್ತ ಪೊಲೀಸರು ತನಿಖೆ ನಡೆಸಬೇಕೆಂದು ಈ ಹಿಂದೆ ಕೋರಿದ್ದರು, ಈಗ ಲೋಕಾಯುಕ್ತ ಪೊಲೀಸರೇ ತನಿಖೆ ನಡೆಸುತ್ತಿದ್ದಾರೆ, ಈ ಹಂತದಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿರುವುದು ಸೂಕ್ತವಲ್ಲ ಎಂದು ವಾದ ಮಂಡಿಸಿದರು.

ದೇವರಾಜು ಹೆಸರಿಗೆ ಇತರೆ ಮಾಲೀಕರು ಹಕ್ಕು ಬಿಡುಗಡೆ ಮಾಡಿದ್ದಾರೆ, ಈ ಅಂಶವನ್ನು ಮುಚ್ಚಿಟ್ಟು ದೂರು ದಾಖಲಿಸಲಾಗಿದೆ.

ದೇವರಾಜು ಅವರ ವ್ಯಕ್ತಿ ಸ್ವಾತಂತ್ರ್ಯವನ್ನು ಪಣಕ್ಕಿಡಲಾಗಿದೆ, ಹೈಕೋರ್ಟ್ ಈ ಅಂಶಗಳನ್ನು ಗಂಭೀರವಾಗಿ ಪರಿಗಣಿಸಬೇಕು, ದೇವರಾಜು ಅಮಾಯಕ ಎಂದಾದರೆ ಕೇಸ್‌ನ ಆರೋಪಿಯಾಗಬಾರದು, ಆದ್ದರಿಂದ ದೇವರಾಜು ವಾದವನ್ನು ಹೈಕೋರ್ಟ್ ಪರಿಗಣಿಸಬೇಕು ಎಂದು ದವೆ ಮನವಿ ಮಾಡಿದರು.

ದುಷ್ಯಂತ್ ದವೆ ವಾದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು, ಲೋಕಾಯುಕ್ತ ಪೊಲೀಸರು ಈವರೆಗಿನ ತನಿಖಾ ವರದಿ ಸಲ್ಲಿಸಿದ್ದಾರೆ, ಇದನ್ನು ಪರಿಶೀಲಿಸಿ ನಾನು ಸಿಬಿಐ ತನಿಖೆ ಬಗ್ಗೆ ತೀರ್ಮಾನಿಸುತ್ತೇನೆ, ಈಗಾಗಲೇ ವಿಚಾರಣೆಗೊಳಗಾದ ಅಂಶಗಳನ್ನು ಮತ್ತೆ ವಾದಿಸುವ ಅಗತ್ಯವಿಲ್ಲ ಎಂದರು.

ಲೋಕಾಯುಕ್ತ ಪೊಲೀಸರ ತನಿಖೆ ಕೋರಿ ದೂರು ಸಲ್ಲಿಸಿದ್ದೀರಿ, ಎಫ್‌ಐಆರ್ ದಾಖಲಾದ ದಿನವೇ ಸಿಬಿಐ ತನಿಖೆ ಕೋರಿದ್ದೇಕೆಂದು ಹೈಕೋರ್ಟ್ ಪ್ರಶ್ನಿಸಿತು.

ಇದಕ್ಕೆ ಉತ್ತರಿಸಿದ ವಕೀಲ ಮಣೀಂದರ್ ಸಿಂಗ್, ರಿಟ್ ಅರ್ಜಿ ದಾಖಲಾದ ಬಳಿಕ ಎಫ್‌ಐಆರ್ ದಾಖಲಾಗಿದೆ, ಅದುವರೆಗೂ ಪೊಲೀಸರು ಎಫ್‌ಐಆರ್ ದಾಖಲಿಸಿರಲಿಲ್ಲ ಎಂದು ವಾದಿಸಿದರು.

ಸರ್ಕಾರದ ಪರ ಹಿರಿಯ ವಕೀಲ ಕಪಿಲ್ ಸಿಬಾಲ್ ವಾದ ಮಂಡಿಸಿ, ಲೋಕಾಯುಕ್ತ ಸ್ವತಂತ್ರ ತನಿಖಾ ಸಂಸ್ಥೆಯಾಗಿದೆ, ಲೋಕಾಯುಕ್ತ ಪೊಲೀಸರು ರಾಜ್ಯ ಸರ್ಕಾರದ ಹಿಡಿತದಲ್ಲಿದೆ ಎಂದಿದ್ದಾರೆ, ಆದರೆ, ಸಿಬಿಐ ಸಹಾ ಕೇಂದ್ರ ಸರ್ಕಾರದ ಹಿಡಿತದಲ್ಲಿದ್ದಾರೆ, ಆದ್ದರಿಂದ ಸಿಬಿಐಯನ್ನೂ ಸ್ವತಂತ್ರ ತನಿಖಾ ಸಂಸ್ಥೆ ಎನ್ನಲಾಗದು, ಲೋಕಾಯುಕ್ತ ಸಂಸ್ಥೆ ಕಳಂಕಿತ ಎನ್ನಲಾಗದು, ಲೋಕಾಯುಕ್ತ ಸಂಸ್ಥೆಯ ನಿಗಾ ಇರುವುದರಿಂದ ತನಿಖೆ ಸ್ವತಂತ್ರವಾಗಿರಲಿದೆ ಎಂದರು.

ಸಿಬಿಐ ಪಂಜರದೊಳಗಿನ ಗಿಣಿ ಎಂಬುದಾಗಿ 'ಸುಪ್ರೀಂ' ಸಹಾ ಹೇಳಿದೆ, ಆದ್ದರಿಂದ ಸಿಬಿಐ ಈ ಅಭಿಪ್ರಾಯವನ್ನು ಹೋಗಲಾಡಿಸಬೇಕಿದ್ದು, ಲೋಕಾಯುಕ್ತ ಪೊಲೀಸರನ್ನು ಸಂಶಯಿಸಬಾರದು, ರಾಜ್ಯ ಸರ್ಕಾರ ಸಿಬಿಐ ತನಿಖೆಗೆ ವಹಿಸುವ ಸಾಮಾನ್ಯ ಅನುಮತಿಯನ್ನು ಹಿಂಪಡೆದಿದೆ, ಸಿಬಿಐ ಸ್ವತಂತ್ರವಾಗಿಲ್ಲದಿರುವುದೇ ಈ ಕ್ರಮಕ್ಕೆ ಕಾರಣವಾಗಿದೆ ಎಂದು ವಾದಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ವಕೀಲ ಅಭಿಷೇಕ್ ಮನುಸಿಂಘ್ವಿ ವಾದ ಮಂಡಿಸಿ, ಸಿಬಿಐ ತನಿಖೆಗೆ ಅರ್ಹವೆನ್ನಲು ಇದು ಅಪರೂಪದ ಪ್ರಕರಣವಲ್ಲ, ಲೋಕಾಯುಕ್ತ ತನಿಖೆಯಲ್ಲಿ ಮಧ್ಯಪ್ರವೇಶಿಸಿ ಸಿಬಿಐಗೆ ಹಸ್ತಾಂತರಿಸುವುದು ಸರಿಯಲ್ಲ, ದೂರುದಾರರಿಗೆ ರಾಜ್ಯಪಾಲರ ಅನುಮತಿ ಬೇಕಿತ್ತು ಪಡೆದರು, ಮೊದಲಿಗೆ ಲೋಕಾಯುಕ್ತ ಪೊಲೀಸರ ತನಿಖೆ ಕೋರಿದರು, ತನಿಖೆ ಆಗುವ ಮೊದಲೇ ಸಿಬಿಐ ತನಿಖೆ ಕೇಳುತ್ತಿದ್ದಾರೆ ಎಂದು ವಾದಿಸಿದರು.

# ಗಂಗೆಯಲ್ಲಿ ಸ್ನಾನ ಮಾಡುವುದರಿಂದ ಬಡತನ ಹೋಗುವುದೇ : ಖರ್ಗೆ

ಮಹೌ, ಜ. 27- ಗಂಗಾನದಿಯಲ್ಲಿ ಸ್ನಾನ ಮಾಡು ವುದರಿಂದ ಬಡತನ ನಿವಾರಣೆ ಆಗುತ್ತದೆಯೇ? ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದ್ದಾರೆ.

ಮಧ್ಯಪ್ರದೇಶದಲ್ಲಿ ಆಯೋಜಿಸಲಾಗಿದ್ದ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಸಮಾವೇಶದಲ್ಲಿ ಮಾತ ನಾಡಿದ ಅವರು, ಗಂಗಾ ನದಿಯಲ್ಲಿ ಸ್ನಾನ ಮಾಡು ವುದರಿಂದ ಬಡತನ ನಿವಾರಣೆ ಆಗುತ್ತದೆಯೇ? ಇದರಿಂದ ಹೊಟ್ಟೆ ತುಂಬುತ್ತದೆಯೇ? ಎಂದು ಪ್ರಶ್ನಿಸಿದ್ದಾರೆ.

ಮಗು ಒಂದು ಹಸಿವಿನಿಂದ ಸಾಯುತ್ತಿರುವಾಗ, ಶಾಲೆಗೆ ಹೋಗದೆ ಇರುವಾಗ, ಕಾರ್ಮಿಕರಿಗೆ ಅವರ ಬಾಕಿ ಬರದೇ ಇರುವಾಗ ಬಿಜೆಪಿಯವರು ಸಾವಿರಾರು ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತಿದ್ದಾರೆ ಹಾಗೂ ಸ್ಪರ್ಧಾತ್ಮಕವಾಗಿ ಗಂಗಾ ನದಿಯಲ್ಲಿ ಸ್ನಾನ ಮಾಡುತ್ತಿದ್ದಾರೆ ಎಂದು ಖರ್ಗೆ ಹೇಳಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಸೋಮವಾರ ಕುಂಭಮೇಳದ ಅಂಗವಾಗಿ ಗಂಗಾ ನದಿಯಲ್ಲಿ ಪವಿತ್ರ ಸ್ನಾನ ಮಾಡಿದ ದಿನದಂದು ಖರ್ಗೆ ಈ ಹೇಳಿಕೆ ನೀಡಿದ್ದಾರೆ. ಬಿಜೆಪಿ ನಾಯಕರು ಕ್ಯಾಮರಾ ಎದುರು ಕಾಣಿಸಿಕೊಳ್ಳುವ ಸಲುವಾಗಿ ಗಂಗಾ ನದಿಯಲ್ಲಿ ಸ್ನಾನ ಮಾಡುತ್ತಿದ್ದಾರೆ. ಇಂತಹ ವ್ಯಕ್ತಿಗಳಿಂದ ದೇಶಕ್ಕೆ ಲಾಭವಿಲ್ಲ. ನಾವು ದೇವರಲ್ಲಿ ನಂಬಿಕೆ ಇರಿಸಿದ್ದೇವೆ. ಪ್ರತಿದಿನ ಮನೆಯಲ್ಲಿ ಪೂಜೆ ಮಾಡುತ್ತೇವೆ. ಆದರೆ ಧರ್ಮದ ಹೆಸರಿನಲ್ಲಿ ಬಡವರನ್ನು ಶೋಷಣೆ ಮಾಡುವುದನ್ನು ವಿರೋಧಿಸುತ್ತೇವೆ ಎಂದು ಖರ್ಗೆ ಹೇಳಿದ್ದಾರೆ.

ನಾನು ಯಾರದೇ ನಂಬಿಕೆಯನ್ನು ಪ್ರಶ್ನಿಸಿಲ್ಲ. ಯಾರಿಗಾದರೂ ತಪ್ಪಾದ ಭಾವನೆ ಬಂದಿದ್ದರೆ ವಿಷಾದಿಸುತ್ತೇನೆ ಎಂದೂ ಅವರು ಹೇಳಿದ್ದಾರೆ.

## ಸಚಿವ ಭೈರತಿಗೆ ನೀಡಿದ್ದ ಇಡಿ ನೋಟಿಸ್‌ಗೆ ತಡೆ

**(1ನೇ ಪುಟದಿಂದ)** ನಾಗೇಶ್, ಸಂದೇಶ್ ಚೌಟ ಮತ್ತು ವಿಕ್ರಮ್ ಹುಯಿಲುಗೋಳ್ ಅವರು, ಇದೇ ರೀತಿಯ ಸಂದರ್ಭಗಳಲ್ಲಿ ಮುಡಾ ಅಧಿಕಾರಿ ವಿರುದ್ಧದ ವಿಚಾರಣೆಯನ್ನು ಹೈಕೋರ್ಟ್‌ನ ಸಮನ್ವಯ ಪೀಠ ರದ್ದುಗೊಳಿಸಿದೆ ಎಂದು ವಾದಿಸಿದರು.

ಅಲ್ಲದೆ, ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಿರುವ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಲು ನಿರ್ದೇಶನಗಳನ್ನು ಕೋರಿ ಸಲ್ಲಿಸಲಾದ ಅರ್ಜಿಯ ತೀರ್ಪನ್ನು ಹೈಕೋರ್ಟ್ ಕಾಯ್ದಿರಿಸಿದೆ ಎಂದು ಹೇಳಿದರು.

## ರೈತರ ಒಕ್ಕಲೆಬ್ಬಿಸದಂತೆ ಆಗ್ರಹ

**(1ನೇ ಪುಟದಿಂದ)** ಬಿಸಿಲಿನ್ನೂ ಲೆಕ್ಕಿಸದೇ ದಾವಣಗೆರೆ ಜಿಲ್ಲಾಧಿಕಾರಿ ಕಚೇರಿ ವರೆಗೆ ಪಾದಯಾತ್ರೆ ಸಹ ನಡೆಸಲಾಗಿತ್ತು. ಜಿಲ್ಲಾಧಿಕಾರಿಗಳು ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ ಮೇರೆಗೆ ಧರಣಿ ಸತ್ಯಾಗ್ರಹ ಹಿಂತೆಗೆದುಕೊಂಡಿದ್ದೆವು. ಆದರೆ ಇದುವರೆಗೂ ಅಧಿಕಾರಕ್ಕೆ ಬಂದ ಜಿಲ್ಲಾಧಿಕಾರಿಗಳು ಕೊಟ್ಟ ಭರವಸೆಯನ್ನು ಹುಸಿಗೊಳಿಸಿದ್ದಾರೆ ಎಂದು ಆರೋಪಿಸಿದರು.

ಚನ್ನಗಿರಿ ತಾಲ್ಲೂಕಿನ ಶಿವಗಂಗೆಹಾಳ, ಅಸ್ತಾಫನಹಳ್ಳಿ, ಮಧುರನಾಯಕನಹಳ್ಳಿ, ಬಿ.ಆರ್.ಟಿ. ಕಾಲೋನಿ, ಬಸವಾಪುರ, ಮಲ್ಲನಾಯಕನ ಹಳ್ಳಿ, ಬೆಟ್ಟಕಡೂರು, ಹೊನ್ನನಾಯಕನಹಳ್ಳಿ, ಜೋಳದಹಾಳ್, ಚಿಕ್ಕಕೋಗಲೂರು, ಹರೋಸಾಗರ, ಗರಗ, ಅಗರಬನ್ನಿಹಟ್ಟಿ, ಎರೇಹಳ್ಳಿ, ಮಲ್ಲಿಗೇನಹಳ್ಳಿ, ಎನ್. ಗಾಣದಕಟ್ಟೆ ಸೇರಿದಂತೆ ಇನ್ನೂ ಅನೇಕ ಹಳ್ಳಿಗಳಲ್ಲಿ ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವ ರೈತರ ಅರ್ಜಿಗಳು ವಿಲೇವಾರಿಯಾಗದೇ ಬಾಕಿ ಉಳಿದಿವೆ. ಉಪ ವಿಭಾಗಾಧಿಕಾರಿಗಳು ಸರಿಯಾಗಿ ಈ ಕಾಯ್ದೆಯನ್ನು ಅನುಷ್ಠಾನಕ್ಕೆ ತರುತ್ತಿಲ್ಲ. ಇದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳ ದೌರ್ಜನ್ಯ ಹೆಚ್ಚಾಗಿದೆ. ಅರಣ್ಯ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಣೆ ಮಾಡುವಂತೆ ಆಗ್ರಹಿಸಿದರು.

ಜಗಳೂರು ತಾಲ್ಲೂಕಿನ ಗೌಡಗೊಂಡನಹಳ್ಳಿಯ 23 ಕುಟುಂಬಗಳನ್ನು ಒಕ್ಕಲೆಬ್ಬಿಸಿ ಈ ಭೂಮಿಯಲ್ಲಿ ಕಂದಕಗಳನ್ನು ನಿರ್ಮಾಣ ಮಾಡಿ ಸಸಿಗಳನ್ನು ನೆಡಲಾಗುತ್ತಿದೆ. ಕೂಡಲೇ ಜಿಲ್ಲಾಡಳಿತ ಮಧ್ಯೆ ಪ್ರವೇಶಿಸಿ 23 ಕುಟುಂಬಗಳಿಗೆ ಸಾಗುವಳಿ ಚೀಟಿ ವಿತರಿಸುವಂತೆ ಮನವಿ ಮಾಡಿದರು.

ಧರಣಿ ಸತ್ಯಾಗ್ರಹದಲ್ಲಿ ರೈತ ಮುಖಂಡರಾದ ಅಸ್ತಾಫನಹಳ್ಳಿ ಗಂಡುಗಲಿ, ಎಲೋದಹಳ್ಳಿ ರವಿಕುಮಾರ್, ಕೋಗಲೂರು ಕುಮಾರ್, ಚಿಕ್ಕಮಲ್ಲನಹೊಳೆ ಚಿರಂಜೀವಿ, ರಾಜು, ಗೌಡಗೊಂಡನಹಳ್ಳಿ ಸತೀಶ್, ಆನಗೋಡು ಭೀಮಣ್ಣ, ಚಿನ್ನಸಮುದ್ರ ಪರಶುರಾಮ್, ಆಲೂರು ಪರಶುರಾಮ್, ಕೊಡಗನೂರು ತಿಪ್ಪಣ್ಣ, ಸುರೇಶ್ ನಾಯ್ಕ, ಭರಮಸಾಗರ ಸೂರಪ್ಪ, ಗುಮ್ಮನೂರು ರುದ್ರೇಶ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ನೋಟಿಸ್ ಹಿಂದೆ ರಾಜಕೀಯ ಪಿತೂರಿ

**(1ನೇ ಪುಟದಿಂದ)** ಒಂದೇ ಸಮಯದಲ್ಲಿ ಎರಡು ಸಂಸ್ಥೆಗಳು ತನಿಖೆ ನಡೆಸಲು ಸಾಧ್ಯವಿಲ್ಲ, ಲೋಕಾಯುಕ್ತ ಸಂಸ್ಥೆ ತನಿಖೆ ನಡೆಸುತ್ತಿರುವಾಗ ಬೇರೆ ಸಂಸ್ಥೆಗಳು ತನಿಖೆ ನಡೆಸಲು ಆಗುವುದಿಲ್ಲ ಎಂಬುದಾಗಿ ನ್ಯಾಯಾಲಯಗಳು ಅನೇಕ ತೀರ್ಪು ನೀಡಿವೆ, ಈ ವಿಚಾರವಾಗಿ ಸಂಪೂರ್ಣ ಮಾಹಿತಿ ಪಡೆದ ನಂತರ ನಾನು ಮಾತನಾಡುತ್ತೇನೆ ಎಂದರು.

ನನ್ನ ಪ್ರಕರಣದಲ್ಲೂ ಸಿಬಿಐ ಹಾಗೂ ಇ.ಡಿ. ಒಟ್ಟಿಗೆ ತನಿಖೆ ಮಾಡುತ್ತಿದ್ದವು, ಒಟ್ಟಿಗೆ ಒಂದೇ ಪ್ರಕರಣವನ್ನು ಎರಡು ಸಂಸ್ಥೆಗಳು ತನಿಖೆ ಮಾಡು ವಂತಿಲ್ಲ ಎಂಬುದಾಗಿ ನ್ಯಾಯಾಲಯದ ಮುಂದೆ ಪ್ರಸ್ತಾಪ ಮಾಡಿದ್ದೇನೆ ಎಂದರು.

# ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥವಾದ ಅಂತ್ಯಕ್ರಿಯೆ ಸ್ಥಳ

ನವದೆಹಲಿ, ಜ. 27- ಛತ್ತೀಸ್‌ಘಡದ ಗ್ರಾಮವೊಂದರಲ್ಲಿ ನಡೆಸಬೇಕಿದ್ದ ಅಂತ್ಯಕ್ರಿಯೆಯ ವಿಷಯ ಸುಪ್ರೀಂ ಕೋರ್ಟ್‌ವರೆಗೂ ತೆರಳಿ ಇತ್ಯರ್ಥವಾಗಿದೆ.

ವ್ಯಕ್ತಿಯ ಸ್ವಂತ ಗ್ರಾಮದ ಪಕ್ಕದಲ್ಲಿರುವ ಹಳ್ಳಿಯ ಕ್ರಿಶ್ಚಿಯನ್ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲು ಒಡಕಿನ ತೀರ್ಪಿನ ನಂತರ ನಿರ್ಧರಿಸಲಾಗಿದೆ.

ಗ್ರಾಮದಲ್ಲಿರುವ ಕುಟುಂಬದವರ ಖಾಸಗಿ ಕೃಷಿ ಜಾಗದಲ್ಲಿ ಅಂತ್ಯಕ್ರಿಯೆ ನಡೆಸಬೇಕು ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ತೀರ್ಪು ನೀಡಿದ್ದರು. ಆದರೆ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಅವರು ಅಂತ್ಯಕ್ರಿಯೆಯನ್ನು ಪಕ್ಕದ ಹಳ್ಳಿಯಲ್ಲಿ ನಡೆಸಬೇಕು ಎಂದು ತೀರ್ಪು ನೀಡಿದ್ದಾರೆ.

ಜನವರಿ 7ರಂದು ಮೃತಪಟ್ಟಿದ್ದ ವ್ಯಕ್ತಿಯ ಅಂತ್ಯಕ್ರಿಯೆ ನಡೆಸಬೇಕಾದ ಸ್ಥಳದ ಬಗ್ಗೆ ಪೀಠದಲ್ಲಿ ಒಮ್ಮತ ಮೂಡಿಲ್ಲ. ಮೂರು ವಾರಗಳಿಂದ ಕಳೆಬರ ಶವಾಗಾರದಲ್ಲಿ ಉಳಿದಿದೆ.

ತ್ವರಿತವಾಗಿ ಹಾಗೂ ಗೌರವಾನ್ವಿತವಾಗಿ ಅಂತ್ಯಕ್ರಿಯೆ ನಡೆಸಬೇಕಿದೆ. ಈ ಹಿನ್ನೆಲೆಯಲ್ಲಿ ಸಂವಿಧಾನದ 142ನೇ ವಿಧಿಯ ಅನ್ವಯ ನಿರ್ದೇಶನಗಳನ್ನು ನೀಡುವುದಾಗಿ ಪೀಠ ಹೇಳಿದೆ.

ಅರ್ಜಿದಾರರು ತಮ್ಮ ತಂದೆಯ ಅಂತ್ಯಕ್ರಿಯೆಯನ್ನು ಸ್ವಂತ ಗ್ರಾಮವಾದ ಚಿಂದ್ವಾಡದಿಂದ 20 ಕಿಲೋಮೀಟರ್ ದೂರದಲ್ಲಿರುವ ಕರ್ಕಪಾಲ್ ಹಳ್ಳಿಯಲ್ಲಿ ನಡೆಸಬೇಕು. ಈ ಗ್ರಾಮದಲ್ಲಿ ಕ್ರಿಶ್ಚಿಯನರಿಗೆ ಪ್ರತ್ಯೇಕ ಸ್ಮಶಾನ ಲಭ್ಯವಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಅಂತ್ಯಕ್ರಿಯೆಗಾಗಿ ಸ್ಥಳೀಯ ಆಡಳಿತ ಹಾಗೂ ರಾಜ್ಯ ಸರ್ಕಾರ ನೆರವು ನೀಡಬೇಕು ಹಾಗೂ ಪೊಲೀಸ್ ರಕ್ಷಣೆ ನೀಡಬೇಕು ಎಂದು ಸುಪ್ರೀಂಕೋರ್ಟ್ ಪೀಠ ತಿಳಿಸಿದೆ.

ರಮೇಶ್ ಬಾಗೇಲ್ ಎಂಬುವವರು ತಮ್ಮ ತಂದೆಯ ಅಂತ್ಯಕ್ರಿಯೆಯನ್ನು ಸ್ವಂತ ಗ್ರಾಮದಲ್ಲೇ ನಡೆಸಬೇಕು ಎಂದು ಛತ್ತೀಸ್‌ಘಡ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ಅರ್ಜಿ ತಳ್ಳಿ ಹಾಕಿದ ನಂತರ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

37 ಪುಟಗಳ ತೀರ್ಪು ನೀಡಿರುವ ನ್ಯಾಯಮೂರ್ತಿ ನಾಗರತ್ನ, ಸ್ಥಳೀಯ ಪಂಚಾಯಿತಿಯು ಆಕ್ಷೇಪಾರ್ಹವಾಗಿ ನಡೆದುಕೊಂಡಿದೆ ಹಾಗೂ ಮೃತರ ಕುಟುಂಬದವರಿಗೆ ಬೆದರಿಕೆ ಒಡ್ಡಿದೆ. ಅಂತ್ಯಕ್ರಿಯ ವಿಷಯ ಗ್ರಾಮದಲ್ಲೇ ಇತ್ಯರ್ಥವಾಗಬೇಕಿತ್ತು ಎಂದು ತಿಳಿಸಿದ್ದಾರೆ.

ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಆಗಿದ್ದಾರೆ ಎಂಬ ಕಾರಣಕ್ಕಾಗಿ ಗ್ರಾಮದಲ್ಲಿ ಅಂತ್ಯಕ್ರಿಯೆಗೆ ಅವಕಾಶ ನೀಡದೇ ಇರುವುದು ದುರಾದೃಷ್ಟಕರ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

ಈ ರೀತಿ ಅವಕಾಶ ನಿರಾಕರಿಸಿರುವುದು ಸಂವಿಧಾನದ 14 ಹಾಗೂ 15 (1) ವಿಧಿಗಳ ಉಲ್ಲಂಘನೆಯಾಗಿದೆ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

ಇದಕ್ಕೆ ವ್ಯತಿರಿಕ್ತವಾದ ತೀರ್ಪು ನೀಡಿರುವ ನ್ಯಾಯಮೂರ್ತಿ ಶರ್ಮ, ಅರ್ಜಿದಾರರು ಹಾಗೂ ಅವರ ಕುಟುಂಬದವರು ಕರ್ಕಪಾಲ್ ಹಳ್ಳಿಯಲ್ಲಿ ಇರುವ ಕ್ರಿಶ್ಚಿಯನ್ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಬಹುದು ಎಂದಿದ್ದಾರೆ.

ಗ್ರಾಮದಲ್ಲಿ ಸ್ಮಶಾನಗಳನ್ನು ನಿರಂಕುಶವಾಗಿ ನಿರ್ಮಿಸಿಲ್ಲ ಎಂಬುದು ಛತ್ತೀಸ್‌ಘಡ ಗ್ರಾಮ ಪಂಚಾಯಿತಿ ನಿಯಮಗಳಿಂದ ಸ್ಪಷ್ಟವಾಗುತ್ತದೆ. ಅಂತ್ಯಕ್ರಿಯೆಗಾಗಿ ಪ್ರತ್ಯೇಕ ಜಾಗಗಳನ್ನು ಗುರುತಿಸಲಾಗಿದೆ ಎಂದು ಹೇಳಿದ್ದಾರೆ.

## ಸಂವಿಧಾನವೇ ಭಾರತೀಯರ ಭಗವದ್ಗೀತೆ

**(1ನೇ ಪುಟದಿಂದ)** ನಗರಸಭೆಯಲ್ಲಿ ಪೌರಾಯುಕ್ತ ಪಕ್ಕೀರಪ್ಪ, ಗಂಗಾ ಬ್ಯಾಂಕ್‌ನಲ್ಲಿ ಅಧ್ಯಕ್ಷ ರತ್ನಾಕರ ಕುಂದಾಪುರ, ನೆಹರು ಮಾರ್ಕೆಟ್ ವರ್ತಕರ ಸಂಘದಲ್ಲಿ ಅಧ್ಯಕ್ಷ ಬಸವರಾಜ ಪಟ್ಟಣಶೆಟ್ಟಿ, ಎಪಿಎಂಸಿಯಲ್ಲಿ ಅಧ್ಯಕ್ಷ ಜಿ.ಜಿ. ಹೊಟ್ಟಿಗೌಡ್ರ, ಕಾಂಗ್ರೆಸ್ ಕಾರ್ಯಾಲಯದಲ್ಲಿ ಅಧ್ಯಕ್ಷ ಮಂಜನಗೌಡ ಪಾಟೀಲ, ಬಿಜೆಪಿ ಕಾರ್ಯಾಲಯದಲ್ಲಿ ಅಧ್ಯಕ್ಷ ಪರಮೇಶ ಗೂಳಣ್ಣನವರ, ಇಲಾಖೆ ಮುಖ್ಯಸ್ಥರು ತಮ್ಮ ಕಛೇರಿಗಳಲ್ಲಿ ಧ್ವಜ ವಂದನೆ ನೆರವೇರಿಸಿದರು.


**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
99868 02097

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ, 40 ಅಡಿ ರಸ್ತೆಗೆ ಹೊಂದಿಕೊಂಡು ಆಂಜನೇಯ ಬಡಾವಣೆಯಲ್ಲಿ 30x50 ಉತ್ತರ, ವಿನಾಯಕ ಬಡಾವಣೆಯಲ್ಲಿ 30x50 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕಾರ್ ಡ್ರೈವರ್ ಕಮ್ ಸೆಕ್ಯೂರಿಟಿ, ಆಟೋಮೆಟಿಕ್ ಗೇರ್ ಅನುಭವ ಇರಬೇಕು. ಸಂಬಳ 16,000/- OT ಸಿಗುತ್ತದೆ. ವಸತಿ ಸೌಲಭ್ಯವಿದೆ.
97400 98047

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಬೇಕಾಗಿದ್ದಾರೆ**
ಕ್ಲಿನಿಕ್ ನಲ್ಲಿ ರಿಸೆಪ್ಷನಿಸ್ಟ್ (ಬೇಸಿಕ್ ಕಂಪ್ಯೂಟರ್ ಜ್ಞಾನ ಇರಲಿ) ಕೆಲಸ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಬೆಳಿಗ್ಗೆ 11ರಿಂದ ಸಂಜೆ 8ರ ಒಳಗೆ ಫೋನ್ ಮಾಡಿ ಸಂಪರ್ಕಿಸಿ:
91640 54547

**ಬೇಕಾಗಿದ್ದಾರೆ**
ಫ್ಲೆಕ್ಸ್ ಅಳವಡಿಸಲು ಅನುಭವವಿರುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
94481 10287
76195 62207

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ROOM FOR RENT**
2nd floor 15x15 sqft with attached bathroom
#361, 4th main, 9th cross, Behind Vishveshwaraiah park, PJ Exten. Davangere.
94489 29509

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ ವೆಜ್ & ನಾನ್‌ವೆಜ್ ಮಾಡಲು ಅನುಭವವಿರುವವರು ಬೇಕಾಗಿದ್ದಾರೆ.
94834 26393

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ (ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
9740064163

**ರಕ್ತ ದಾನ ಶ್ರೇಷ್ಠ ದಾನ**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬಾರ್ ಮತ್ತು ರೆಸ್ಟೋರೆಂಟ್ ಮಾರಾಟಕ್ಕಿದೆ**
ದಾವಣಗೆರೆ ಸಿಟಿ ನ್ಯಾಷನಲ್ ಹೈವೇಗೆ ಹೊಂದಿಕೊಂಡಿರುವ ಉತ್ತಮ ವ್ಯಾಪಾರ - ವೈಹಿವಾಟು ನಡೆಸುತ್ತಿರುವ ಬಾರ್ & ರೆಸ್ಟೋರೆಂಟ್ ಮತ್ತು 30x120 ಅಡಿಗಳ ಬಿಲ್ಡಿಂಗ್ ಸಮೇತ ಬಾರ್ & ರೆಸ್ಟೋರೆಂಟ್ ಮಾರಾಟಕ್ಕಿದೆ. ಸಂಪರ್ಕಿಸಿ :
98868 24240, 98863 24240

**ಬೇಕಾಗಿದ್ದಾರೆ**
ಊಟದ ಹೋಟೆಲ್‌ಗೆ ಕ್ಲೀನರ್ ಮತ್ತು ಸಪ್ಲೈಯರ್‌ಗಳು ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇದೆ.
99861 17995
73538 89971

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಪಂಪ್ ಅಟೆಂಡರ್ ಕೆಲಸಕ್ಕೆ ಮಹಿಳೆಯರು/ ಪುರುಷರು ಬೇಕಾಗಿದ್ದಾರೆ.
ಸಂಪರ್ಕಿಸಿ :
79005 30053

**ಆರ್.ಡಿ. ಲೈಸೆನ್ಸ್ ಕಳೆದಿದೆ**
ದಾವಣಗೆರೆ ಸಿಟಿ, ಗಾಂಧಿನಗರ 6ನೇ ಕ್ರಾಸ್ ವಾಸಿ ಎ.ಕೆ. ರಂಗಮ್ಮ ಕೋಂ ಶಿವಮೂರ್ತಿ ಆದ ನನ್ನ ಆರ್.ಡಿ. ಏಜೆಂಟ್ ಮೂಲ ಪ್ರತಿ ಲೈಸೆನ್ಸ್ ದಾಖಲೆಯು (MPKBY/ DVG/418/2000-01) ದಿನಾಂಕ : 22.01.2025ರಂದು ಬೆಳಿಗ್ಗೆ 10.40ಕ್ಕೆ ಹಳೆ ಕೋರ್ಟ್ ಹತ್ತಿರ ಮಾರ್ಗ ಮಧ್ಯೆ ಆಕಸ್ಮಿಕವಾಗಿ ಕಳೆದಿರುತ್ತದೆ. ಸದರಿ ದಾಖಲೆಗಳು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ನಂಬರ್‌ಗೆ ಸಂಪರ್ಕಿಸಲು ವಿನಂತಿ.
ಮೊ. 87222-22661

**WANTED**
OFFICE BOY-1 SSLC
Office Assistant In Tally Ladies
Gaurav Communications,
Davangere
9448728866, 8861368296

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**JOB OPPORTUNITY**
Female Office Assistant
Good In Office Work-Computer Skills
Good In Customer Dealing Freshers can also apply B.Com., M.Com., & MBA
Cor Contact :
97312 18567
Send C.V-hardsoftdvg@gmail.com

**CCTV ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
Freshers / Experienced
Address :
VAHIN GROUPS
3096, Bapuji High School Road, MCC `B' Block, Davanagere.
93805 83672

**CCTV ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
Age 20-25 years
Address :
VAHIN GROUPS
3096, Bapuji High School Road, MCC `B' Block, Davanagere.
93805 83672

**WANTED**
Boys & Girls required for billing work at Food Mart Supermarket.
Quli : Any Degree
98864 63531

**WANTED**
Male candidates
any degree with computer knowledge is must.
Accomondation & food will be provided
Monthly Salary : 8000/-
Whats app : 99887 72291
P.B. Road, Davanagere

**ಸೈಟು ಮಾರಾಟಕ್ಕಿದೆ**
30x35 ಉತ್ತರ
ಹೊಸ ಸರ್‌ಎಂವಿ ಕಾಲೇಜು ಹಿಂಭಾಗ @2699
77600 70828

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

# ಶಿವಮೊಗ್ಗ ರಸ್ತೆ ಅಗಲೀಕರಣ, ಭೈರನಪಾದ ನೀರಾವರಿ ಯೋಜನೆ ಜಾರಿ ವಿಳಂಬ : ಆಕ್ರೋಶ



## ಮಲೇಬೆನ್ನೂರಿನಲ್ಲಿ ಜಿ.ಬಿ. ವಿನಯ್‌ಕುಮಾರ್ ನೇತೃತ್ವದ ಸ್ವಾಭಿಮಾನಿ ಬಳಗದಿಂದ ಸಾರ್ವಜನಿಕ ಆದಾಲತ್

ಮಲೇಬೆನ್ನೂರು, ಜ.27- ಹಗರಿಬೊಮ್ಮನಹಳ್ಳಿ - ಶಿವಮೊಗ್ಗ ರಾಜ್ಯ ಹೆದ್ದಾರಿ ಕಳೆದ ಅನೇಕ ವರ್ಷಗಿಂದ ಅಗಲೀಕರಣ ಹಾಗೂ ಅಭಿವೃದ್ಧಿಗೊಳ್ಳದೇ ಇರುವುದಕ್ಕೆ ಜನಪ್ರತಿನಿಧಿಗಳಿ ನಿರ್ಲಕ್ಷ್ಯವೇ ಕಾರಣ ಎಂದು ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ.ವಿನಯ್‌ಕುಮಾರ್ ದೂರಿದರು.

ಸೋಮವಾರ ಪಟ್ಟಣದಲ್ಲಿ ಹಾದು ಹೋಗಿರುವ ಎನ್.ಹೆಚ್ ರಸ್ತೆ ಬಳಿ ಸ್ವಾಭಿಮಾನಿ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಸಾರ್ವಜನಿಕ ಅದಾಲತ್ ಕಾರ್ಯಕ್ರಮವನ್ನು ಸಂವಿಧಾನಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಇದುವರೆಗೂ ಅಧಿಕಾರ ನಡೆಸಿದ ಮತ್ತು ನಡೆಸುತ್ತಿರುವ ಜನಪ್ರತಿನಿಧಿಗಳು ರಾಜ್ಯ ಹೆದ್ದಾರಿ - 25ರ ಅಗಲೀಕರಣ ಹಾಗೂ ಅಭಿವೃದ್ಧಿ ಬಗ್ಗೆ ಸಚಿವರಿಗೆ ಮನವಿ ಮಾಡಿ, ಪ್ರಚಾರ ಪಡೆದುಕೊಂಡಿದ್ದಾರೆಯೇ ಹೊರತು ಕೆಲಸ ಮಾಡಿಸಿಲ್ಲ. ಇನ್ನಷ್ಟು ಜೀವಗಳನ್ನು ಬಲಿ ಪಡೆದುಕೊಂಡ ನಂತರ ರಸ್ತೆ ಅಗಲೀಕರಣವಾಗಲಿದೆ ಎಂದು ವಿನಯ್‌ಕುಮಾರ್ ಪ್ರಶ್ನಿಸಿದರು.

ನಿತ್ಯ ಸಾವಿರಾರು ವಾಹನಗಳು ಸಂಚರಿಸುವ ರಾಜ್ಯದ ಪ್ರಮುಖ ಹೆದ್ದಾರಿ ಆಗಿರುವ ಶಿವಮೊಗ್ಗ ರಸ್ತೆ ಅತಿ ಶೀಘ್ರದಲ್ಲೇ ಅಗಲೀಕರಣ ಹಾಗೂ ಅಭಿವೃದ್ಧಿಗೊಳಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಗಮನ ಹರಿಸಬೇಕೆಂದು ಆಗ್ರಹಿಸಿದ ವಿನಯ್ ಅವರು, ಹರಿಹರ ತಾಲ್ಲೂಕಿನಲ್ಲಿ ನೆನೆಗುದಿಗೆ ಬಿದ್ದಿರುವ ಬಹು ನಿರೀಕ್ಷಿತ ಭೈರನಪಾದ ಏತ ನೀರಾವರಿ ಯೋಜನೆ ಎಲ್ಲರಿಗೂ ಪ್ರಚಾರದ ಅಸ್ತ್ರವಾಗಿದೆಯೇ ಹೊರತು ಯೋಜನೆ ಮಾತ್ರ ಜಾರಿಗೊಂಡಿಲ್ಲ.

ಚಈ ಬಗ್ಗೆ ಮುಖ್ಯಮಂತ್ರಿಗಳು ಇತ್ತೀಚೆಗೆ ಡಿಪಿಆರ್ ಮಾಡಲು ಸೂಚನೆ ನೀಡಿದ್ದಾರೆ. ಅದರಂತೆ ಬರುವ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕೆಂಬುದು ನಮ್ಮ ಬಳಗದ ಒತ್ತಾಯವಾಗಲಿದೆ ಎಂದು ವಿನಯ್‌ಕುಮಾರ್ ಹೇಳಿದರು.

ಈ ಹೋರಾಟ ಹರಿಹರ ಅಥವಾ ದಾವಣಗೆರೆ ಜಿಲ್ಲೆಯಲ್ಲಿ ಮಾತ್ರ ನಡೆಯುತ್ತಿಲ್ಲ. ಈ ಹೋರಾಟ ರಾಜ್ಯ ವ್ಯಾಪ್ತಿ ನಡೆಯುತ್ತಿದೆ.

ಆದರೆ, ಜನಪರ ಹೋರಾಟಕ್ಕೆ ಹರಿಹರ ತಾಲ್ಲೂಕಿನಲ್ಲಿ ಅಡ್ಡಿಪಡಿಸುವ ಕೆಲಸವನ್ನು ಕೆಲವರು ಮಾಡಿದ್ದು, ಇದನ್ನು ಸವಾಲಾಗಿ ಸ್ವೀಕರಿಸಿ, ನಮ್ಮ ಹೋರಾಟವನ್ನು ಈ ತಾಲ್ಲೂಕಿನ ಪ್ರತಿ ಹಳ್ಳಿಯಲ್ಲೂ ಮಾಡುತ್ತೇವೆ ಎಂದು ವಿನಯ್‌ಕುಮಾರ್ ಹೇಳಿದರು.

ಸ್ವಾಭಿಮಾನಿ ಬಳಗದ ರಾಜ್‌ಮೌರ್ಯ, ಶಿವಕುಮಾರ್ ಡಿ.ಶೆಟ್ಟರ್, ದಿಡಗೂರು ಸುದೀಪ್, ಮಲ್ಲನಾಯ್ಕನಹಳ್ಳಿ ಚಂದ್ರಶೇಖರ್, ಪುರಂದರ್ ಲೋಕಿಕೆರೆ, ವಿರೂಪಾಕ್ಷಪ್ಪ ಪಂಡಿತ್, ರಾಜು ಕರೇಗಣ್ಣನವರ್ ಸೇರಿದಂತೆ ಮಲೇಬೆನ್ನೂರಿನ ಕೆಲವು ಕಾಂಗ್ರೆಸ್ ಕಾರ್ಯಕರ್ತರು, ಆಟೋ ಚಾಲಕರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

ಕಲಾವಿದರಾದ ಜಿಗಳಿ ರಂಗನಾಥ್, ಸಿರಿಗೆರೆ ಶಿವಕುಮಾರ್ ನೇತೃತ್ವದ ತಂಡ ಜಾಗೃತಿ ಗೀತೆಗಳನ್ನು ಹಾಡಿದರು.

**ಅಡ್ಡಿ :** ಸಾರ್ವಜನಿಕ ಅದಾಲತ್ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿ ಪಡೆಯದ ಕಾರಣ, ಪುರಸಭೆ ಹಾಗೂ ಪೊಲೀಸ್ ಠಾಣೆಯ ಅಧಿಕಾರಿಗಳು ಧ್ವನಿವರ್ಧಕ ಬಳಕೆಗೆ ಅಡ್ಡಿ ಪಡಿಸಿದರು.

# ಹೆಣ್ಣು ಮಕ್ಕಳ ಹಕ್ಕುಗಳನ್ನು ಕಾಪಾಡುವುದು ನಮ್ಮೆಲ್ಲರ ಹೊಣೆ



## ಹರಿಹರದಲ್ಲಿ ಡಾ।। ರವಿಕುಮಾರ್

ಹರಿಹರ, ಜ. 27- ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಪ್ರಯುಕ್ತ ಇಂದು ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಪ್ರೀತಿ ಆರೈಕೆ ಟ್ರಸ್ಟ್ ದಾವಣಗೆರೆ ಇವರ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಮೆಬಲ್ ಕಿಡ್ಸ್ ಪ್ರಿ - ಸ್ಕೂಲ್ ಮತ್ತು ಡೇ ಕೇರ್, ಹರಿಹರದಲ್ಲಿ ಇಂದು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಡಾ।। ಟಿ. ಜಿ. ರವಿಕುಮಾರ್ ಮಾತನಾಡಿ, ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ದಿನದಂದು ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿರುವುದು ಹೆಮ್ಮೆಯ ಸಂಗತಿ ಎಂದು ತಿಳಿಸಿದರು. ಇಂದು ಸಮಾಜದ ಎಲ್ಲ ರಂಗಗಳಲ್ಲಿ ಹೆಣ್ಣು ಮಕ್ಕಳು ಪೈಪೋಟಿಯನ್ನು ಎದುರಿಸಿ ಉನ್ನತ ಸ್ಥಾನಗಳಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರೂ ಸಮಾನವಾದ ಹಕ್ಕುಗಳು ಪಡೆಯುವಂತೆ ಮಾಡುವುದು ನಮ್ಮೆಲ್ಲರ ಹೊಣೆ ಎಂದು ತಿಳಿಸಿದರು.

ಎಲ್ಲರಿಗೂ ಸಮಾನವಾದ ಆರೋಗ್ಯ ಸೌಲಭ್ಯ ದೊರೆಯಬೇಕು ಎಂದು ತಿಳಿಸಿ, ಇದರ ಬಗ್ಗೆ ಪ್ರೀತಿ ಆರೈಕೆ ಟ್ರಸ್ಟ್‌ನ ವತಿಯಿಂದ ನಡೆಯುವ ಪ್ರತಿ ಆರೋಗ್ಯ ಶಿಬಿರದಲ್ಲಿ ಅರಿವು ಮೂಡಿಸುತ್ತಿದ್ದೇವೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಪ್ರಾಂಶುಪಾಲರಾದ ನಾಗಶ್ರೀ ಹಾಗೂ ತಿಮ್ಮಯ್ಯ ಶೆಟ್ರು, ಉದ್ಯಮಿಗಳಾದ ನಾಗರಾಜ್ ಸ್ವಾಮಿ ಉಪಸ್ಥಿತರಿದ್ದರು.

# ದೀಪ್‌ಸೀಕ್ ಪರಿಣಾಮ ಎಐ ಷೇರುಗಳ ಕುಸಿತ

ನವದೆಹಲಿ, ಜ. 27- ಚೀನಾದ ಕಡಿಮೆ ವೆಚ್ಚದ ಕೃತಕ ಬುದ್ಧಿವಂತಿಕೆ ಮಾದರಿಯಾದ ಡೀಪ್‌ಸೀಕ್ ಪರಿಣಾಮದಿಂದಾಗಿ ಎನ್‌ವಿಡಿಯ ಹಾಗೂ ಒರಾಕಲ್ ಸೇರಿದಂತೆ ಹಲವು ಕಂಪನಿಗಳ ಷೇರುಗಳ ಮೌಲ್ಯ ಕುಸಿತವಾಗಿದೆ. ಕೃತಕ ಬುದ್ಧಿವಂತಿಕೆ ವಲಯದಲ್ಲಿ ಅಮೆರಿಕದ ಕಂಪನಿಗಳ ಪ್ರಾಬಲ್ಯದ ಬಗ್ಗೆ ಅನುಮಾನಗಳು ವ್ಯಕ್ತವಾಗಿರುವುದು ಈ ಕುಸಿತಕ್ಕೆ ಕಾರಣವಾಗಿದೆ.

ಚೀನಾದ ನವೋದ್ಯಮ ಕಂಪನಿಯಾದ ಡೀಪ್‌ಸೀಕ್ ಕಳೆದ ವಾರ ತನ್ನ ಉಚಿತ ಸಹಾಯಕ ತಂತ್ರಾಂಶವನ್ನು ಬಳಕೆದಾರರಿಗೆ ಬಿಡುಗಡೆ ಮಾಡಿತ್ತು. ಪ್ರಸಕ್ತ ಮಾರುಕಟ್ಟೆಯಲ್ಲಿ ಇರುವ ಪ್ರಬಲ ಕಂಪನಿಗಳಿಗೆ ಹೋಲಿಸಿದರೆ ಇದು ಅತಿ ಕಡಿಮೆ ವೆಚ್ಚದಲ್ಲಿ ಸಹಾಯ ನೀಡುವುದಾಗಿ ತಿಳಿಸಲಾಗಿತ್ತು.

ಆನಂತರದಲ್ಲಿ ಎನ್‌ವಿಡಿಯಾ ಷೇರುಗಳ ಮೌಲ್ಯ ಶೇಕಡಾ 12.4, ಮೈಕ್ರೋಸಾಫ್ಟ್ ಷೇರು ಮೌಲ್ಯ ಶೇಕಡಾ 4.3, ಮೆಟಾ ಶೇಕಡ 3.1 ಹಾಗೂ ಅಲ್ಫಾಬೆಟ್ ಶೇಕಡ 3.4ರ ಕುಸಿತ ಕಂಡಿವೆ. ಒರಾಕಲ್ ಷೇರು ಮೌಲ್ಯ 7.5 ರಷ್ಟು ಕುಸಿದಿದೆ.

ಯುರೋಪ್ ಟೆಕ್ ಷೇರುಗಳ ಮೌಲ್ಯ ಶೇಕಡ ನಾಲ್ಕರಷ್ಟು ಕುಸಿದಿದೆ. ಸೀಮನ್ಸ್ ಷೇರು ಮೌಲ್ಯ ಶೇ. 20ರಷ್ಟು ಇಳಿಕೆಯಾಗಿದೆ.

# ಯುವಜನರು ಸರಿದಾರಿಯಲ್ಲಿ ಸಾಗಲು ಪ್ರೇರೇಪಿಸಲು ಸೂಕ್ತ ಮಾರ್ಗದರ್ಶನ ಅಗತ್ಯ

ದಾವಣಗೆರೆ, ಜ. 27- ವಿವೇಕಾನಂದರು ತಮ್ಮ ಆಲೋಚನೆಗಳು ಮತ್ತು ಚಿಂತನೆಗಳೊಂದಿಗೆ ಯುವಕರನ್ನು ಒಗ್ಗೂಡಿಸಲು ಬಯಸಿದರು. ಯುವಜನರು ಸರಿದಾರಿಯಲ್ಲಿ ಸಾಗಲು ಪ್ರೇರೇಪಿಸಲು ಸೂಕ್ತ ಮಾರ್ಗದರ್ಶನದ ಅಗತ್ಯವಿದೆ ಎಂದು ಮಾಗನೂರು ಬಸಪ್ಪ ಕಾಲೇಜಿನ ಪ್ರಾಚಾರ್ಯ ಪ್ರಸಾದ್ ಬಂಗೇರ ಹೇಳಿದರು.

ಸ್ವಾಮಿ ವಿವೇಕಾನಂದರ 162ನೇ ಜಯಂತ್ಯೋತ್ಸವದ ಅಂಗವಾಗಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನ ಜಿಲ್ಲಾ ಘಟಕದಿಂದ ಭಾನುವಾರ ಹಮ್ಮಿಕೊಂಡಿದ್ದ ಶೋಭಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದ ಅಭಿವೃದ್ಧಿ ಮತ್ತು ಪ್ರಗತಿಯು ಅಲ್ಲಿನ ಯುವಕರ ಕೊಡುಗೆಯನ್ನು ಅವಲಂಬಿಸಿದೆ. ದೇಶದ ಅಭಿವೃದ್ಧಿಯಲ್ಲಿ ಯುವ ಶಕ್ತಿ ಪ್ರಮುಖ ಪಾತ್ರವ ಹಿಸಲಿದೆ. ಇಂತಹ ಯುವ ಸಮೂಹದ ಸಾಮರ್ಥ್ಯದ ಬಗ್ಗೆ ವಿಶ್ವಕ್ಕೆ ಸಾರಿ ಹೇಳಿದವರಲ್ಲಿ ಸ್ವಾಮಿ ವಿವೇಕಾನಂದರು ಮೊದಲಿಗರು ಎಂದು ಸ್ಮರಿಸಿದರು.

ಜಯದೇವ ವೃತ್ತದಲ್ಲಿ ಆರಂಭವಾದ ಯಾತ್ರೆ ಗಾಂಧಿ ವೃತ್ತ, ಪಿ.ಬಿ. ರಸ್ತೆ, ಎ.ವಿ.ಕೆ. ಕಾಲೇಜು ಮೂಲಕ ಹೈಸ್ಕೂಲ್ ಮೈದಾನಕ್ಕೆ ಮರಳಿತು. ವಿವೇಕಾನಂದರ ಭಾವಚಿತ್ರ ಇರಿಸಿದ್ದ ವಾಹನದೊಂದಿಗೆ ಹೆಜ್ಜೆ ಹಾಕಿದ ಕಾಲೇಜು ವಿದ್ಯಾರ್ಥಿಗಳು ಜೈಕಾರ ಹಾಕಿದರು.

ಎಬಿವಿಪಿ ದಾವಣಗೆರೆ ಸಂಘಟನಾ ಕಾರ್ಯದರ್ಶಿ ವಿಜಯಕುಮಾರ್, ನಗರ ಕಾರ್ಯದರ್ಶಿ ಅಲೋಕ್, ಎನ್. ವೀರೇಶ್, ನಗರ ಸಹ ಕಾರ್ಯದರ್ಶಿ ತನೋಜ್, ರಾಜಶೇಖರ್ ಅಲ್ಲದೇ ಕಾರ್ಯಕರ್ತರು, ರಾಷ್ಟ್ರೋತ್ಥಾನ, ಸಿದ್ಧಗಂಗಾ, ವೈಷ್ಣವಿ ಚೇತನ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಬಾತಿ ಗುಡ್ಡ : 76ನೇ ಗಣರಾಜೋತ್ಸವ



ದಾವಣಗೆರೆ, 27.ಜ- ಹಿಮಾಲಯನ್ ಅಡ್ವೆಂಚರ್ ಅಂಡ್ ನೇಚರ್ ಅಕಾಡೆಮಿ ವತಿಯಿಂದ 76ನೇ ಗಣರಾಜ್ಯೋತ್ಸವದ ಅಂಗವಾಗಿ ಬಾತಿ ಗುಡ್ಡದಲ್ಲಿ ಚಾರಣ ಮಾಡುವುದರ ಮೂಲಕ ಬೆಟ್ಟದ್ದ ತುತ್ತ ತುದಿಯಲ್ಲಿ ತ್ರಿವರ್ಣ ಧ್ವಜ ಹಾರಿಸುವುದರೊಂದಿಗೆ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು.

ಪರಿಸರ ಮತ್ತು ಚಾರಣ ಪ್ರಿಯರ ಆಶಯ ದಂತೆ ಪರಿಸರದಲ್ಲಿ ಚಾರಣ ಮಾಡುವುದರೊಂದಿಗೆ ಬೆಟ್ಟ, ಗುಡ್ಡ ಹತ್ತಿ ರಾಷ್ಟ್ರ ಧ್ವಜಕ್ಕೆ ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹಿಮಾಲಯನ್ ಅಡ್ವೆಂಚರ್ ಅಂಡ್ ನೇಚರ್ ಅಕಾಡೆಮಿಯ ಪ್ರಧಾನ ಕಾರ್ಯದರ್ಶಿ ಎನ್.ಕೆ. ಕೊಟ್ರೇಶ, ಚಾರಣ ಪ್ರಿಯರಾದ ರಾಜನಹಳ್ಳಿ ಶಿವಕುಮಾರ್, ಸಂತೋಷ, ತೇಜಸ್ವಿನಿ, ಹನುಮಂತ್, ಚಂದ್ರು ಮೊಳ್ಳಿ, ಸುರೇಶ್ ಗೌಡ್ರು, ಶಿವಕುಮಾರ್ ದೇವರೆಡ್ಡಿ, ಶಂಕರ್ ಗೌಡ ಬಿರಾದಾರ್, ಸಾಗರ್, ಕು.ಚೇತನ್, ಸನ್ನಿಧಿ, ಸಮರ್ಥ ಇನ್ನು ಮುಂತಾದವರು ಚಾರಣದಲ್ಲಿ ಭಾಗವಹಿಸಿದ್ದರು.

# ಫೆ. 7ರ ಶಿಕ್ಷಣ- ಸಾಹಿತ್ಯ ಮೇಳ ಮುಂದಕ್ಕೆ

ದಾವಣಗೆರೆ ಜ, 27 - ಸುವರ್ಣ ದೇಶ ಪಬ್ಲಿಕೇಶನ್ ಹಾಗೂ ಎಲ್ ಆರ್ ಇವೆಂಟ್ಸ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ದಾವಣಗೆರೆ) ಇವರು ಜಂಟಿಯಾಗಿ ಫೆ. 7 ರಿಂದ ಆಯೋಜಿಸಿದ್ದ ಶಿಕ್ಷಣ-ಸಾಹಿತ್ಯ ಮೇಳವನ್ನು ಏಪ್ರಿಲ್ ತಿಂಗಳಿಗೆ ಮುಂದೂಡಲಾಗಿದೆ ಎಂದು ಸುವರ್ಣ ದೇಶ ಪಬ್ಲಿಕೇಶನ್‌ನ ಪ್ರಕಾಶಕ ಆನಂದ ಗೌಡ, ಎಲ್ ಆರ್ ಇವೆಂಟ್ಸ್ ನಿರ್ದೇಶಕ ಲೋಕೇಶ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ ಅವರು ತಿಳಿಸಿದ್ದಾರೆ.

# ನಗರದಲ್ಲಿ ವಸ್ತು ಪ್ರದರ್ಶನ, ಆಹಾರ ಮೇಳ

ದಾವಣಗೆರೆ, ಜ.27- ನಗರದ ಎಸ್. ನಿಜಲಿಂಗಪ್ಪ ಬಡಾವಣೆಯ ಶ್ರೀ ಶಂಕರ ಸಮುದಾಯ ಭವನದಲ್ಲಿ ಬರುವ ಫೆಬ್ರವರಿ 9ರಂದು ಸ್ಫೂರ್ತಿ 2025-ಸ್ವಾವಲಂಬನೆಯ ಪರಿಕಲ್ಪನೆ ವತಿಯಿಂದ ವಸ್ತು ಪ್ರದರ್ಶನ ಮತ್ತು ಮಾರಾಟ ಹಾಗೂ ಆಹಾರ ಮೇಳವನ್ನು ಆಯೋಜಿಸಲಾಗಿದೆ. ಸ್ಥಳೀಯ ಉದ್ಯಮಿಗಳು ಮತ್ತು ವ್ಯಾಪಾರಸ್ಥರನ್ನು ಪ್ರೋತ್ಸಾಹಿಸಲು ಗೃಹೋಪಯೋಗಿ ವಸ್ತು, ಆಭರಣ, ಸೀರೆ, ಕುರ್ತಾ ಹಾಗೂ ಇನ್ನಿತರೆ ವಸ್ತು ಪ್ರದರ್ಶನ ಮತ್ತು ಮಾರಾಟ ಹಾಗೂ ರುಚಿಕ ಆಹಾರ ಮೇಳವನ್ನು ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 94485 66549, 94480 13144, 94838 60040.

# ಫೆ. 1 ರಂದು ರಂಭಾಪುರಿ ಶ್ರೀಗಳ 34ನೇ ವರ್ಧಂತಿ ಮಹೋತ್ಸವ



ಶ್ರೀ ರಂಭಾಪುರಿ ಪೀಠ, ಜ. 27 - ರಂಭಾಪುರಿ ಪೀಠದ ವೀರ ಸಿಂಹಾಸನಾಧೀಶ್ವರ 1008 ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ 34ನೇ ವರ್ಷದ ಪೀಠಾರೋಹಣ ವರ್ಧಂತಿ ಮಹೋತ್ಸವ - ಜನ ಜಾಗೃತಿ ಧರ್ಮ ಸಮಾರಂಭವು ಹಗರಿಬೊಮ್ಮನಹಳ್ಳಿ ತಾಲ್ಲೂಕು ಹಂಪಸಾಗರದಲ್ಲಿ ಫೆಬ್ರವರಿ 1 ಶನಿವಾರ ಬೆಳಿಗ್ಗೆ 11.30 ಗಂಟೆಗೆ ಜರುಗಲಿದೆ.

**ಅಡ್ಡಪಲ್ಲಕ್ಕಿ :** ಪೀಠಾರೋಹಣ ವರ್ಧಂತಿ ಮಹೋತ್ಸವದ ನಿಮಿತ್ಯ ಬೆಳಿಗ್ಗೆ 10 ಗಂಟೆಗೆ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗುವುದು. ಸಮಾರಂಭದ ಅಂಗವಾಗಿ ಫೆಬ್ರವರಿ 1 ರಂದು ಕೃಷಿ ಮೇಳ ಏರ್ಪಡಿಸಲಾಗಿದೆ.






# ಎಸ್ಸೆಸ್, ಎಸ್ಸೆಸ್ಸೆಂ ನೇತೃತ್ವದಲ್ಲಿ ಮಹಾನಗರ ಪಾಲಿಕೆಯ ಆಡಳಿತ ಚುಕ್ಕಾಣಿ



## ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ದಿನೇಶ್ ಕೆ. ಶೆಟ್ಟಿ ವಿಶ್ವಾಸ

ದಾವಣಗೆರೆ, ಜ. 27 - ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮತ್ತು ಸಂಸದರಾದ ಪ್ರಭಾ ಮಲ್ಲಿಕಾರ್ಜುನ್ ಅವರ ನೇತೃತ್ವದಲ್ಲಿ ಬರಲಿರುವ ಮಹಾನಗರ ಪಾಲಿಕೆಯ ಎಲ್ಲಾ ಸ್ಥಾನಗಳನ್ನು ಕಾಂಗ್ರೆಸ್ ಪಕ್ಷ ಗೆಲ್ಲುವ ಮೂಲಕ ಆಡಳಿತದ ಚುಕ್ಕಾಣಿ ಹಿಡಿಯಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ನಿನ್ನೆ ನಡೆದ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಹಾನಗರ ಪಾಲಿಕೆ ಕಾಂಗ್ರೆಸ್ ಸದಸ್ಯರು, 2018ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು, ವಾರ್ಡ್ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಅವಧಿ ಮುಂದಿನ ತಿಂಗಳು ಅಂತ್ಯಗೊಳ್ಳಲಿದ್ದು, ರಾಜ್ಯ ಸರ್ಕಾರ ಯಾವುದೇ ಸಮಯದಲ್ಲಾದರೂ ಚುನಾವಣೆ ನಡೆಸುವ ಸಾಧ್ಯತೆ ಇರುವುದರಿಂದ ಚುನಾವಣೆ ಎದುರಿಸಲು ಸಿದ್ಧರಾಗಬೇಕು. ಕಾರ್ಯಕರ್ತರು ತಮ್ಮ ತಮ್ಮ ವಾರ್ಡ್‌ಗಳಲ್ಲಿ ಪಕ್ಷದ ಮುಖಂಡರೊಂದಿಗೆ ಸೇರಿ ಪಕ್ಷ ಸಂಘಟನೆ ಮಾಡಬೇಕೆಂದು ಕರೆ ನೀಡಿದರು.

ಕಾಂಗ್ರೆಸ್ ಪಕ್ಷ ಬಡವರ ಪಕ್ಷ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಬಡವರ ಅನುಕೂಲಕ್ಕಾಗಿ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದು, ಯೋಜನೆಗಳು ಪ್ರತಿ ಕುಟುಂಬಕ್ಕೂ ತಲುಪಿದ್ದು, ಕಾರ್ಯಕರ್ತರು ಮನೆ ಮನೆಗೆ ತೆರಳಿ ಸರ್ಕಾರದ ಸಾಧನೆಗಳನ್ನು ತಿಳಿಸಬೇಕೆಂದರು.

ಉತ್ತರ ವಿಧಾನಸಭಾ ಕ್ಷೇತ್ರದ ನಗರ ಘಟಕದ ಅಧ್ಯಕ್ಷ ಕೆ.ಜಿ. ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು.

ಮಹಾಪೌರರಾದ ಕೆ. ಚಮನ್‌ಸಾಬ್, ಉಪ ಮಹಾಪೌರರಾದ ಸೋಗಿ ಶಾಂತಕುಮಾರ್, ಮಾಜಿ ನಗರಸಭೆ ಅಧ್ಯಕ್ಷ ಆರ್.ಹೆಚ್. ನಾಗಭೂಷಣ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್, ಬ್ಲಾಕ್ ಅಧ್ಯಕ್ಷರಾದ ಶ್ರೀಮತಿ ಮಂಗಳಮ್ಮ ಮತ್ತಿತರರು ಮಾತನಾಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಶ್ರೀಮತಿ ಸವಿತ ಗಣೇಶ್ ಹುಲ್ಮನಿ, ಶ್ರೀಮತಿ ಆಶಾ ಉಮೇಶ್, ಸದಸ್ಯರುಗಳಾದ ಅಬ್ದುಲ್ ಲತೀಫ್, ಜಿ.ಎಸ್. ಮಂಜುನಾಥ್ ಮತ್ತು ಇತರರು ಭಾಗವಹಿಸಿದ್ದರು.

# ನಟ ಶಿವರಾಜ್‌ಕುಮಾರ್ ಆರೋಗ್ಯ ವಿಚಾರಿಸಿದ ಸಿಎಂ ಸಿದ್ದರಾಮಯ್ಯ




ಬೆಂಗಳೂರು,ಜ.27- ಅಮೆರಿಕ ದಲ್ಲಿ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆದು ಗುಣಮುಖರಾಗಿ ಹಿಂದಿರುಗಿದ ನಟ ಶಿವ ರಾಜ್ ಕುಮಾರ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ನಟ ಶಿವರಾಜ್ ಕುಮಾರ್ ಯಶಸ್ವಿ ಶಸ್ತ್ರಚಿಕಿತ್ಸೆಯಿಂದ ಹಿಂತಿರುಗಿದ್ದು, ಅವರ ಆರೋಗ್ಯ ವಿಚಾರಿಸಲು ನಿವಾಸಕ್ಕೆ ಭೇಟಿ ನೀಡಿದ್ದೇನೆ, ಶಸ್ತ್ರಚಿಕಿತ್ಸೆಗೆ ಒಳಗಾದ ಮರುದಿನವೇ ದೂರವಾಣಿ ಕರೆ ಮಾಡಿದ್ದೆ ಎಂದರು. ಶಿವರಾಜ್ ಕುಮಾರ್ ಚೇತರಿಸಿ ಕೊಂಡಿದ್ದು, ಮುಂದಿನ ತಿಂಗಳಿನಿಂದ ಚಿತ್ರೀ ಕರಣದಲ್ಲಿ ಪಾಲ್ಗೊಳ್ಳುವುದಾಗಿ ತಿಳಿಸಿದ್ದಾರೆ ಎಂದರು.

# ಪ್ರಯಾಗ್‌ರಾಜ್ ವಿಮಾನಯಾನ ದರಗಳ ಬಗ್ಗೆ ಕ್ರಮ : ಕೇಂದ್ರ ಸೂಚನೆ

ನವದೆಹಲಿ, ಜ. 27 - ಪ್ರಯಾಗ್‌ರಾಜ್ ವಿಮಾನ ಯಾನ ದರಗಳ ಕುರಿತು ಕ್ರಮ ತೆಗೆದುಕೊಳ್ಳುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಹಲವು ವಿಮಾನಯಾನ ಸಂಸ್ಥೆಗಳು ಕುಂಭಮೇಳಕ್ಕೆ ತೆರಳುವ ಪ್ರಯಾಗ್‌ರಾಜ್ ವಿಮಾನಯಾನದ ದರಗಳನ್ನು ತೀವ್ರವಾಗಿ ಹೆಚ್ಚಿಸಿರುವ ಬಗ್ಗೆ ಆಕ್ಷೇಪಗಳು ವ್ಯಕ್ತವಾಗಿ ದ್ದವು. ವೈಮಾನಿಕ ನಿಯಂತ್ರಕ ಡಿಜಿಸಿಎ ಅಧಿಕಾರಿಗಳು ವಿಮಾನಯಾನ ಸಂಸ್ಥೆಗಳ ಜೊತೆ ಕಳೆದ ವಾರ ಚರ್ಚೆ ನಡೆಸಿದ್ದರು. ಪ್ರಯಾಗ್‌ರಾಜಕ್ಕೆ ಹೆಚ್ಚಿನ ವಿಮಾ ನಗಳ ವ್ಯವಸ್ಥೆ ಮಾಡಬೇಕು ಟಿಕೆಟ್ ದರ ಪರಿಷ್ಕರಣೆ ಮಾಡಬೇಕು ಎಂದು ತಿಳಿಸಲಾಗಿತ್ತು. ಪ್ರಸಕ್ತ 132 ವಿಮಾನಗಳು ಈ ಮಾರ್ಗದಲ್ಲಿ ಕಾರ್ಯನಿರ್ವಹಿಸುತ್ತಿವೆ.


# ಕಕ್ಕರಗೊಳ್ಳ ಪ್ರಾ.ಕೃ.ಪ.ಸ. ಸಂಘಕ್ಕೆ ಆಯ್ಕೆ


**ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೂತನ ನಿರ್ದೇಶಕರುಗಳಾಗಿ ದಿನಾಂಕ 25-01-2025ರಂದು ನಡೆದ ಚುನಾವಣೆಯಲ್ಲಿ ಆಯ್ಕೆ ಮಾಡಲಾಗಿದೆ.**


ಮರುಳಸಿದ್ದಪ್ಪ ಕಕ್ಕರಗೊಳ್ಳ 'ಸಾಮಾನ್ಯ'


ನಾಗರಾಜ್ ಎಂ.ಬಿ. ಕೋಡಿಹಳ್ಳಿ 'ಸಾಮಾನ್ಯ'


ನಾಗರಾಜ್ ಕೆ.ಬಿ. ಕಕ್ಕರಗೊಳ್ಳ 'ಸಾಮಾನ್ಯ'


ನಾಗರಾಜ್ ಎಂ. ಕಕ್ಕರಗೊಳ್ಳ 'ಸಾಮಾನ್ಯ'


ಹನುಮಂತಪ್ಪ ಆರ್. ಕಕ್ಕರಗೊಳ್ಳ 'ಸಾಮಾನ್ಯ'


ಗಂಗಮ್ಮ ಕೋಂ ರಾಮಪ್ಪ ಕಕ್ಕರಗೊಳ್ಳ 'ಪರಿಶಿಷ್ಟ ಜಾತಿ' ಮೀಸಲು ಅವಿರೋಧ ಆಯ್ಕೆ


ಜಯಪ್ಪ ಬಿನ್ ದುರುಗಪ್ಪ ಕಕ್ಕರಗೊಳ್ಳ 'ಪರಿಶಿಷ್ಟ ಪಂಗಡ' ಮೀಸಲು ಅವಿರೋಧ ಆಯ್ಕೆ


ಸುಭಾಷ್‌ಚಂದ್ರಪ್ಪ ಎಚ್.ಡಿ. ಕಕ್ಕರಗೊಳ್ಳ 'ಹಿಂದುಳಿದ ವರ್ಗ-ಎ'


ಕಲ್ಲಿಂಗಪ್ಪ ಕೆ.ಪಿ. ಕಕ್ಕರಗೊಳ್ಳ 'ಹಿಂದುಳಿದ ವರ್ಗ-ಬಿ'


ಮಂಜುಳಾ ಎ.ಎಸ್. ಕಕ್ಕರಗೊಳ್ಳ 'ಮಹಿಳಾ ಮೀಸಲು'


ಮಮತಾ ಕಕ್ಕರಗೊಳ್ಳ 'ಮಹಿಳಾ ಮೀಸಲು'


ಗುರುಶಾಂತಪ್ಪ ಎಚ್.ಪಿ. ಕಕ್ಕರಗೊಳ್ಳ 'ಸಾಲಗಾರರಲ್ಲದ ಕ್ಷೇತ್ರ'


## ಸಾರ್ವಜನಿಕ ಪತ್ರಿಕಾ ಪ್ರಕಟಣೆ

ನನ್ನ ಕಕ್ಷಿದಾರರಾದ ಜಿ.ಹೆಚ್. ನಾಗರಾಜ ಬಿನ್ ಲೇಟ್ ಹನುಮಯ್ಯ ಹಾಗೂ ಶ್ರೀಮತಿ ಉಮಾ ಕೋಂ. ಜಿ.ಹೆಚ್. ನಾಗರಾಜ್ ವಾಸ : ಡೋ.ನಂ. 4149, 6ನೇ ಕ್ರಾಸ್, ಚೇತನಾ ನಿಲಯ, ದಾವಣಗೆರೆ ಇವರು ನೀಡಿದ ದಾಖಲೆ ಮತ್ತು ಮಾಹಿತಿಯ ಮೇರೆಗೆ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ, ಈ ಕೆಳ ಕಾಣಿಸಿರುವ ಷೆಡ್ಯೂಲ್ ಸ್ವತ್ತಿನ ಕುರಿತು ದಾವಣಗೆರೆಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಆರ್.ಎ. 14/2024 ಎಂಬ ಅಪೀಲು ದಾವೆಯು ಚಾಲ್ತಿಯಲ್ಲಿದ್ದು ಈಗ ಈ ಅಪೀಲಿನ ಎದುರುದಾರರಾದ ಮಹೇಶ್ವರಪ್ಪ ಬಿನ್ ಕ್ಯಾತಪ್ಪ ಹಾಗೂ ಹಟ್ಟಪ್ಪ ಬಿನ್ ಕ್ಯಾತಪ್ಪ ಹಾಗೂ ಇವರ ಕುಟುಂಬದವರು ಹಾಗೂ ಇವರಿಂದ ಅಧಿಕಾರ ಪಡೆದಂತಹ ವ್ಯಕ್ತಿಗಳು ಈ ಕೆಳ ಕಾಣಿಸಿರುವ ಷೆಡ್ಯೂಲ್ ಸ್ವತ್ತುಗಳನ್ನು ಪರಭಾರೆ ಮಾಡುತ್ತಿದ್ದಾರೆ ಎಂಬ ವಿಷಯವು, ನಮ್ಮ ಕಕ್ಷಿದಾರರಾದ ಗಮನಕ್ಕೆ ಬಂದಿರುತ್ತದೆ. ಆದರೆ ಈಗಾಗಲೇ ಮೇಲ್ಕಾಣಿಸಿದ ವ್ಯಕ್ತಿಗಳು ಹಾಗೂ ಅವರ ಕುಟುಂಬದವರು ನಮ್ಮ ಕಕ್ಷಿದಾರರಿಗೆ ಈ ಕೆಳ ಕಾಣಿಸಿದ ಷೆಡ್ಯೂಲ್ ಸ್ವತ್ತಿನ ಕುರಿತು ಖರೀದಿದಾರರು, ಒಪ್ಪಿಗೆ ಪತ್ರಗಳು ಹಾಗೂ ಕ್ರಯ ಪತ್ರಗಳನ್ನು ಬರೆದುಕೊಟ್ಟಿದ್ದು, ಈ ಕುರಿತು ಈ ಮೇಲ್ಕಾಣಿಸಿದ ಅಪೀಲು ಚಾಲ್ತಿಯಲ್ಲಿರುತ್ತದೆ. ಆದ್ದರಿಂದ ಈ ಕೆಳಕಾಣಿಸಿದ ಷೆಡ್ಯೂಲ್ ಸ್ವತ್ತಿನ ಕುರಿತು ವ್ಯವಹಾರ ಮಾಡಿಕೊಂಡು ವಿನಾಃಕಾರಣ ಯಾವುದೇ ವ್ಯಕ್ತಿಗಳು ಮೋಸಕ್ಕೆ ಒಳಗಾಗಬಾರದೆಂದು ಹಾಗೂ ನ್ಯಾಯಾಲಯದ ಮುಂದಿನ ಆದೇಶಗಳಿಗೆ ಬಾಧಿತರಾಗಬಾರದೆಂಬ ಉದ್ದೇಶದಿಂದ ತುರ್ತಾಗಿ ಈ ಸಾರ್ವಜನಿಕ ಪ್ರಕಟಣೆ ನೀಡುತ್ತಿದ್ದು. ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ನಮ್ಮ ಕಕ್ಷಿದಾರರು ತಿಳಿಯ ಪಡಿಸುವುದೇನೆಂದರೆ, ಈ ಕೆಳ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ಸಾರ್ವಜನಿಕರು, ಸ್ವತ್ತು ಅಭಿವೃದ್ಧಿಗಾರರು ಹಾಗೂ ಇನ್ನಿತರೆ ಯಾವುದೇ ವ್ಯಕ್ತಿಗಳು ಯಾವುದೇ ರೀತಿಯ ಕರಾರು, ಉಪಕರಾರು, ಅಡಮಾನ, ಭೋಗ್ಯ ಪರಭಾರೆ ಹಾಗೂ ಇನ್ನಿತರೆ ಯಾವುದೇ ರೀತಿಯ ವ್ಯವಹಾರಗಳನ್ನು ಮಾಡಬಾರದೆಂದು ಹಾಗೂ ಒಂದು ಪಕ್ಷ ಈ ಪ್ರಕಟಣೆಗೂ ಮೀರಿ ಯಾವುದೇ ವ್ಯಕ್ತಿಗಳು ಈ ಕೆಳ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯವಹಾರ ಮಾಡಿಕೊಂಡು ನಮ್ಮ ಕಕ್ಷಿದಾರರಿಗೆ ಅಂತಹ ವ್ಯವಹಾರ ಹಾಗೂ ದಸ್ತಾವೇಜುಗಳು ಕಾನೂನಿನ ಅಡಿಯಲ್ಲಿ ಬಾಧಕವಲ್ಲ ಮತ್ತು ನನ್ನ ಕಕ್ಷಿದಾರರಿಗೆ ಗೊತ್ತಿಲ್ಲದ ವಿಚಾರಗಳಾಗಿತ್ತವೆ ಮತ್ತು ಅಂತವರು ಕಾನೂನಿನ ಪರಿಣಾಮ ಎದುರಿಸಬೇಕಾಗುತ್ತದೆ ತಿಳಿಯಿರಿ.

**ಷೆಡ್ಯೂಲ್ :** ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ಮಲ್ಲಶೆಟ್ಟಿ ಹಳ್ಳಿ ಗ್ರಾಮದ ರಿಸನಂ 24/ ಪಿ2 ರಲ್ಲಿನ ಒಟ್ಟು 2 ಎಕರೆ, 17 ಗುಂಟೆ ಜಮೀನಿನ ಪೈಕಿ ಪೂರ್ವ ಭಾಗದ 32 ಗುಂಟೆ ಜಮೀನು. ಇದಕ್ಕೆ ಚೆಕ್ಕುಬಂದಿ, ಪೂರ್ವಕ್ಕೆ : ಉಡುಸಲಪ್ಪನವರ ಜಮೀನು, ಪಶ್ಚಿಮಕ್ಕೆ : ಪ್ರಭು ಮತ್ತು ಕರಿಯಮ್ಮನವರ ಜಮೀನು, ಉತ್ತರ : ರಾಷ್ಟ್ರೀಯ ಹೆದ್ದಾರಿ, ದಕ್ಷಿಣ : ಸರ್ಕಾರಿ ಜಾಕ್‌ವೆಲ್

**ಎನ್ . ರಾಮದಾಸ್**, ಬಿಎಸ್ಸಿ, ಎಲ್‌ಎಲ್‌ಬಿ, ಲಾಯರ್,
# 367/2 ಶ್ರೀ ಶ್ರೀನಿವಾಸ ಫಾರ್ಮಸಿ ಬಿಲ್ಡಿಂಗ್ಸ್,
ಡಾ. ನಾರಾಯಣ ರಾವ್ ಹಾಸ್ಪಿಟಲ್, ಚಾಮರಾಜ ಪೇಟೆ,
ದಾವಣಗೆರೆ 577001, ಮೊ : **98441 42797**
E-mail : ramadas28@gamil.com

ಸ್ಥಳ : ದಾವಣಗೆರೆ
ದಿನಾಂಕ : 27.01.2025

# ರಂಗಭೂಮಿ, ಜನರ ಮನ ಪರಿವರ್ತನೆ ನೀಡಿ ಬದುಕಿಗೆ ಮೌಲ್ಯ, ಜವಾಬ್ದಾರಿ ತರುತ್ತದೆ



**ಹಿರಿಯ ಪತ್ರಕರ್ತ - ರಂಗಕರ್ಮಿ ಬಸವರಾಜ ಐರಣಿ**

ದಾವಣಗೆರೆ, ಜ. 27- ಜನಮಾನಸದಲ್ಲಿ ಮೌಲ್ಯಗಳನ್ನು ಬಿತ್ತಿ ವಿಕಾಸದ ಬೆಳಕನ್ನು ತೋರುವ ರಂಗಭೂಮಿ, ಜನರ ಮನ ಪರಿವರ್ತನೆ ಹಾಗೂ ಸಮಾಜ ಸುಧಾರಣೆಗೆ ಪ್ರೇರಣೆ ನೀಡಿ ಬದುಕನ್ನು ಹಸನಾಗಿಸುತ್ತದೆ. ಶಿಸ್ತು, ಶ್ರದ್ಧೆ, ಕ್ರಿಯಾಶೀಲತೆ ಹಾಗೂ ಜವಾಬ್ದಾರಿಯ ಕಾರ್ಯ ನಿರ್ವಹಣೆಯನ್ನು ಕಲಿಸುತ್ತದೆ ಎಂದು ಹಿರಿಯ ಪತ್ರಕರ್ತ - ರಂಗಕರ್ಮಿ ಬಸವರಾಜ ಐರಣಿ ತಿಳಿಸಿದರು.

ಹುಬ್ಬಳ್ಳಿ ನಗರದ ರಂಗರೇಖಾ ಕಲಾ ಬಳಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಬೆಂಗಳೂರು) ಇವರ ಸಹಯೋಗದಲ್ಲಿ ಹುಬ್ಬಳ್ಳಿಯ ಸವಾಯಿ ಗಂಧರ್ವ ಕಲಾ ಮಂದಿರದಲ್ಲಿ 'ಅಲ್ಲಮ ಜಗದ ಜಂಗಮ' ಅರ್ಥಾತ್ 'ಮಾಯೆಯ ಸೋಲು' ನಾಟಕ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ರಂಗಾಯಣ ಮಾಜಿ ನಿರ್ದೇಶಕ ಸುಭಾಷ್ ನರೇಂದ್ರ, ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು, ಕವಿಗಳಾದ ಸಾಧು ಎಸ್. ಕಠಾರೆ, ವೀಣಾ ಅಠಾವಲೆ, ಮನೀಷ ಶಿಂಧೆ, ಸಿದ್ದರಾಮಪ್ಪ ಶಿವಳ್ಳಿ, ರೂಪಾ ಜೋಶಿ, ಮಂಜುನಾಥ ಕಲಾಲ್, ಗುರುಸಿದ್ದಪ್ಪ ಎಂ. ಬಡಿಗೇರ, ಅನ್ನಪೂರ್ಣ ಉಂಡಿ, ವಿ.ಜಿ. ಪಾಟೀಲ, ರಾಮು ಮೂಲಗಿ, ವಾಗೀಶ್ ಭಿಕ್ಷಾವರ್ತಿ ಮಠ ಉಪಸ್ಥಿತರಿದ್ದರು,

ನಾಟಕ ರಚನೆ ಸಾಧು ಎಸ್. ಕಠಾರೆ, ಕವಿಗಳು, ಬಸವರಾಜ ಚಕ್ರಸಾಲಿ ಅವರು ನಾಟಕ ನಿರ್ದೇಶಿಸಿ ಅಲ್ಲಮನ ಪಾತ್ರ ವಹಿಸಿದ್ದರು. ಸಂಗೀತ ನಿರ್ದೇಶನ ತುಕಾರಾಮ ಕಠಾರೆ, ನೃತ್ಯ ನಿರ್ದೇಶನ ಮನೀಷ ಶಿಂದೆ, ವಾದ್ಯ ವೃಂದ ಮಂಜುನಾಥ ಇಂಗಳಳ್ಳಿ, ಹಿನ್ನೆಲೆ ಗಾಯಕರಾಗಿ ದೀಪಾ ಪತ್ತಾರ, ಬೆಳಕು ಪ್ರಕಾಶ ಉಳ್ಳಾಗಡ್ಡಿ, ವೀರಪ್ಪ ಕಂದಕೂರ, ಹಾಗೂ ಪ್ರಸಾದನ : ಸಂಜಯ ಭುಜಂಗ ಸಂಗಡಿಗರು, ಎಲ್ಲ ಪಾತ್ರಧಾರಿಗಳು ಸಮರ್ಪಕವಾಗಿ ಅಭಿನಯಿಸಿ ನಾಟಕಕ್ಕೆ ಕಳೆ ಕಟ್ಟಿದರು. ಅಲ್ಲದೇ, ನಾಟಕವು ನೋಡುಗರನ್ನು ಭಕ್ತಿ ಭಾವದತ್ತ ಕೊಂಡೊಯ್ದು ಯಶಸ್ವೀ ಪ್ರದರ್ಶನ ಕಂಡಿತು.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಅವರಾತ್ರಿ ಅಮಾವಾಸ್ಯೆ ಪೂಜೆ



ದಾವಣಗೆರೆ, ಜ. 27 - ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 29ರ ಬುಧವಾರ ಅವರಾತ್ರಿ ಅಮಾವಾಸ್ಯೆ ಪ್ರಯುಕ್ತ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ಗೌರಮ್ಮ ಮತ್ತು ಬಸವರಾಜಪ್ಪ ಹಾಗೂ ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ಸಂಸ್ಕಾರ, ಸಂಸ್ಕೃತಿ, ಧಾರ್ಮಿಕ ಆಚಾರ- ವಿಚಾರಗಳ ಶಕ್ತಿಯೇ ಆರ್ಥಿಕ ಸದೃಢತೆ ಕಾರಣ



**ಹರಿಹರದ ಗಣರಾಜ್ಯೋತ್ಸವದಲ್ಲಿ ಶಾಸಕ ಬಿ.ಪಿ. ಹರೀಶ್**

ಹರಿಹರ, ಜ.27- ವಿದೇಶಿಗರು ಭಾರತ ದೇಶದ ಜನರ ಸಂಪತ್ತು, ವಜ್ರ, ವೈಢೂರ್ಯ ಸೇರಿದಂತೆ ಎಲ್ಲವನ್ನೂ ಕೊಳ್ಳೆ ಹೊಡೆದು ಕೊಂಡು ಹೋದರೂ ಸಹ, ಭಾರತ ದೇಶವು ಆರ್ಥಿಕ ವ್ಯವಸ್ಥೆಯಲ್ಲಿ ಮೂರನೇ ಸ್ಥಾನಮಾನ ಹೊಂದಿರುವುದಕ್ಕೆ ಇಲ್ಲಿನ ಭೂಮಿಯಲ್ಲಿರುವ ಸಂಸ್ಕೃತಿ, ಸಂಸ್ಕಾರ, ಧರ್ಮದ ಆಚಾರ- ವಿಚಾರಗಳಲ್ಲಿ ಇರುವಂತಹ ಶಕ್ತಿ ಕಾರಣವಾಗಿದೆ ಎಂದು ಶಾಸಕ ಬಿ.ಪಿ. ಹರೀಶ್ ಅಭಿಪ್ರಾಯಪಟ್ಟರು.

ನಗರದ ಗಾಂಧಿ ಮೈದಾನದಲ್ಲಿ, ತಾಲ್ಲೂಕು ಆಡಳಿತದ ವತಿಯಿಂದ ನಡೆದ 76ನೇ ಗಣರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಾತಿ, ಧರ್ಮ, ಭಾಷೆಗಳ ಭೇದವಿಲ್ಲದೆ ಭಾರತೀಯರು ನಾವೆಲ್ಲರೂ ಒಂದೇ ಎನ್ನುವ ಭಾವನೆಯ ಅಡಿಯಲ್ಲಿ ಸಾಗಿ ಭಾರತವನ್ನು ವಿಶ್ವಮಟ್ಟದಲ್ಲಿ ಪ್ರಜ್ವಲಿಸುವಂತೆ ಮಾಡೋಣ ಎಂದರು.

ಭಾರತವನ್ನು ಸಾರ್ವಭೌಮ, ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ರಾಷ್ಟ್ರವನ್ನಾಗಿ ಘೋಷಿಸಿದ ಸುದಿನವಾಗಿದ್ದು, ಸ್ವಾತಂತ್ರ್ಯ ಹೋರಾಟದಲ್ಲಿ ತ್ಯಾಗ, ಬಲಿದಾನ ಮಾಡಿದವರ ಸ್ಮರಣೆ ಮಾಡುವುದು ಅತ್ಯವಶ್ಯಕವಾಗಿದೆ. ಅವರ ತ್ಯಾಗ, ಬಲಿದಾನದಿಂದಾಗಿ, ವಿಶ್ವವು ನಮ್ಮ ದೇಶದ ಕಡೆಗೆ ಗಮನ ಹರಿಸುವ ರೀತಿಯಲ್ಲಿ ಸಾಧನೆ ಮಾಡುವತ್ತ ಸಾಗಿದೆ.

ಮಾಹಿತಿ ತಂತ್ರಜ್ಞಾನ ಮತ್ತು ಚಂದ್ರಯಾನ 2, ಮಂಗಳಯಾನ ದಂತವುಗಳು ಯಶಸ್ವಿಯಾಗಿವೆ. ಹಾಗಾಗಿ ವಿಶ್ವ ಮಟ್ಟದಲ್ಲಿ ಭಾರತ ಆರ್ಥಿಕ ವ್ಯವಸ್ಥೆಯಲ್ಲಿ ಮೂರನೇ ಸ್ಥಾನಮಾನವನ್ನು ಗಳಿಸಿ ಬಲಾಢ್ಯ ರಾಷ್ಟ್ರವಾಗಿದೆ ಎಂದು ಹೇಳಿದರು.

ತಹಶೀಲ್ದಾರ್ ಗುರು ಬಸವರಾಜ್ ಧ್ವಜಾರೋಹಣ ಮಾಡಿ ಮಾತನಾಡಿ, ಭಾರತದಲ್ಲಿ ಏಕಾಗ್ರತೆಯಿಂದ, ಏಕತೆಯಿಂದ, ಸಮಗ್ರತೆಯಿಂದ ಒಂದು ದೇಶ ಕಟ್ಟಬೇಕಾದರೆ ನಮ್ಮದೇ ಆದ ಸ್ವಂತ ಸಂವಿಧಾನ ಇರಲಿಲ್ಲ. ಆಗಾಗಿ ಲಿಖಿತ ಹೊಂದಿರುವಂತಹ ಸಂವಿಧಾನವು ಜ. 26 ರಂದು ಆಚರಣೆಗೆ ಬಂತು, 399 ಸದಸ್ಯರನ್ನು ಹೊಂದಿ ಸಂವಿಧಾನದ ಕರಡು ಸಿದ್ದತೆ ಮಾಡಲಿಕ್ಕೆ ಸಾಹೇಬ್ ಅಂಬೇಡ್ಕರ್ ನೇತೃತ್ವದಲ್ಲಿ 2 ವರ್ಷ 11 ತಿಂಗಳು 15 ದಿನಗಳನ್ನು ತೆಗೆದುಕೊಂಡಿದ್ದರ ಪರಿಣಾಮ 1950 ರಲ್ಲಿ ಸಂವಿಧಾನ ಅಂಗೀಕರಿಸಿ, ಗಣರಾಜ್ಯೋತ್ಸವ ಆಚರಣೆಗೆ ಬಂತು ಎಂದು ಹೇಳಿದರು.

ಭಾರತದ ಸಂವಿಧಾನವು ಸಮಾನತೆಯ ತತ್ವದ ಮೇಲೆ ನಿಂತಿದೆ. ಪ್ರಜೆಗಳೇ ಪ್ರಭುಗಳು ಎಂಬ ಸಂದೇಶ ಸಾರಿದ, ಸಂವಿಧಾನ ಜಾರಿಗೆ ಆದ ದಿನವಾಗಿದೆ ಎಂದು ಹೇಳಿದರು.

ಈ ವೇಳೆ ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ ಮಾತನಾಡಿದರು. ಶಾಸಕ ಬಿ.ಪಿ. ಹರೀಶ್ ವಿದ್ಯಾರ್ಥಿಗಳ ಗೌರವ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ತಾಪಂ ಇಓ ಸುಮಲತಾ, ಪ್ರಭಾರಿ ಬಿಇಓ ಕೃಷ್ಣಪ್ಪ, ಆರಕ್ಷಕ ವೃತ್ತ ನಿರೀಕ್ಷಕ ಸುರೇಶ್ ಸಗರಿ, ಎಸ್. ದೇವಾನಂದ್, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ಪಿಎಸ್ಐ ವಿಜಯಕುಮಾರ್, ಶ್ರೀಪತಿ ಗನ್ನಿ, ನಗರಸಭೆ ಎಇಇ ವಿನಯ್ ಕುಮಾರ್, ಸಿಡಿಪಿಓ ಪೂರ್ಣಿಮಾ, ಕಾರ್ಮಿಕ ಇಲಾಖೆ ಕವಿತಾ, ತೋಟಗಾರಿಕೆ ಇಲಾಖೆ ಶಶಿಧರಯ್ಯ ಹಾಗೂ ಇತರರು ಹಾಜರಿದ್ದರು.

# ದೇಶದ ಸಂಪತ್ತು ಸಾಧಕರೇ ಹೊರತು ಹಣವಂತರಲ್ಲ

**ಶ್ರೀ ಗುರು ವಾದ್ಯ ವೃಂದ ಮತ್ತು ಶ್ರೀ ಸಂಚಾರಿ ಕೆಬಿಆರ್ ಡ್ರಾಮಾ ಕಂಪನಿಯ ಕಾರ್ಯಕ್ರಮದಲ್ಲಿ ಬಸವಪ್ರಭು ಶ್ರೀ**



**ರಂಗಭೂಮಿ ಕ್ಷೇತ್ರದಲ್ಲಿ ಕಳೆದ 53 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ತನ್ನ ಸೇವೆಯನ್ನು ಸರ್ಕಾರ ಪರಿಗಣಿಸದಿರುವುದು ಬೇಸರ ತಂದಿದೆ.**
**- ಚಿಂದೋಡಿ ಶಂಭುಲಿಂಗಪ್ಪ, ಹಿರಿಯ ರಂಗಭೂಮಿ ಕಲಾವಿದರು**



ದಾವಣಗೆರೆ, ಜ. 27- ದೇಶದ ಸಂಪತ್ತು ಸಾಧಕರೇ ಹೊರತು ಹಣವಂತರಲ್ಲ ಎಂದು ಮಾರ್ಮಿಕವಾಗಿ ವಿಶ್ಲೇಷಿಸಿದ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಯಾವುದೇ ಕ್ಷೇತ್ರದ ಸಾಧಕರಿಂದ ದೇಶಕ್ಕೆ ಉಜ್ವಲ ಭವಿಷ್ಯವಿದೆ ಎಂದು ಪ್ರತಿಪಾದಿಸಿದರು.

ಸ್ಥಳೀಯ ಶ್ರೀ ಗುರು ವಾದ್ಯ ವೃಂದ ಮತ್ತು ಶ್ರೀ ಸಂಚಾರಿ ಕೆ.ಬಿ.ಆರ್. ಡ್ರಾಮಾ ಕಂಪನಿ ಇವರ ಜಂಟಿ ಆಶ್ರಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಏರ್ಪಾಡಾಗಿದ್ದ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಜೀವನಕ್ಕೆ ಹಣವೊಂದೇ ಮುಖ್ಯವಲ್ಲ. ಮೌಲ್ಯಗಳನ್ನು ಅಳವಡಿಸಿಕೊಂಡಾಗ ಹಣ ಹುಡುಕಿಕೊಂಡು ಬರುತ್ತದೆ. ಹಣವನ್ನು ಎಲ್ಲರೂ ಗಳಿಸಬಹುದು. ಆದರೆ, ಮೌಲ್ಯಯುತ ಜೀವನ ರೂಪಿಸಿಕೊಳ್ಳುವುದು ಕೆಲವರಿಂದ ಸಾಧ್ಯ. ಕೆಲವರು ಹಲವರಾಗಬೇಕು ಎಂದು ಆಶಯ ವ್ಯಕ್ತಪಡಿಸಿದ ಶ್ರೀಗಳು, ಮೌಲ್ಯಗಳನ್ನು ಮೈಗೂಡಿಸಿಕೊಂಡವರು ದೇಶದ ಸಂಪತ್ತಾಗುತ್ತಾರೆ ಎಂದು ತಿಳಿಸಿದರು.

ಸುಮಾರು 20-25 ಭಾಷೆಗಳಲ್ಲಿ ಹತ್ತಾರು ಸಾವಿರ ಹಾಡುಗಳನ್ನಾಡಿದ ಎಸ್.ಪಿ. ಬಾಲಸುಬ್ರಹ್ಮಣ್ಯಂ, ವಿದ್ಯೆಯನ್ನೇ ಕಲಿಯದ - ಕನ್ನಡ ಭಾಷೆಯನ್ನು ನಿರರ್ಗಳವಾಗಿ ಮಾತನಾಡುವುದರ ಜೊತೆಗೆ ಭಕ್ತಿಪ್ರಧಾನ - ಪೌರಾಣಿಕ ಪಾತ್ರಗಳನ್ನು ನಿರ್ವಹಿಸಿ, ಚಲನಚಿತ್ರಗಳಲ್ಲಿ ಅಭಿನಯಿಸುತ್ತಿದ್ದ ಡಾ. ರಾಜ್‌ಕುಮಾರ್, ವಿಶ್ವ ಚಾಂಪಿಯನ್ ಗುಕೇಶ್ ಅವರಂತಹ ವಿವಿಧ ಕ್ಷೇತ್ರಗಳ ಸಾಧಕರು ಸದಾ ಸ್ಮರಣೀಯರು ಎಂದು ಶ್ರೀಗಳು ಮುಕ್ತ ಕಂಠದಿಂದ ಪ್ರಶಂಸಿಸಿದರು.

ಇತ್ತೀಚಿನ ವರ್ಷಗಳಲ್ಲಿ ಟಿವಿ, ಮೊಬೈಲ್‌ಗಳ ಹಾವಳಿಯಿಂದ ವೇದಿಕೆ ಸಿಗುತ್ತಿಲ್ಲ ಎಂಬ ಕೊರಗು ಬೇಡ ಎಂದು ಕಲಾವಿದರಿಗೆ ಕಿವಿಮಾತು ಹೇಳಿದ ಶ್ರೀಗಳು, ಕಾಲಕ್ಕನುಗುಣವಾಗಿ ನಾವು ಬದಲಾಗುವ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಕಲಾ ಪ್ರದರ್ಶನ ಮಾಡಬೇಕು ಎಂದು ಕರೆ ನೀಡಿದರು.

ದೂರದರ್ಶನದ ಧಾರಾವಾಹಿಗಳನ್ನು ಪ್ರಸ್ತಾಪಿಸಿದ ಶ್ರೀಗಳು, ಸಂಬಂಧಗಳ ನಡುವಿನ ಜಗಳವನ್ನೇ ಹೆಚ್ಚಾಗಿ ಬಿತ್ತರಿಸುವುದರ ಬಗ್ಗೆ ವ್ಯಾಕುಲತೆ ವ್ಯಕ್ತಪಡಿಸಿದರು. ಜೀವನದ ನೆಮ್ಮದಿಗಾಗಿ ರಂಗಭೂಮಿ, ಸಾಂಸ್ಕೃತಿಕ ಕಾರ್ಯಕ್ರಮಗಳು, ಅಧ್ಯಾತ್ಮಿಕ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹಿತನುಡಿದರು.

ಜ್ಯೋತಿಯನ್ನು ಪ್ರಜ್ವಲಿಸುವುದರೊಂದಿಗೆ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ, ನಾಲ್ಕೈದು ದಶಕಗಳಿಂದ ರಂಗಭೂಮಿ ಕಲೆಯನ್ನೇ ತಮ್ಮ ಉಸಿರಾಗಿಸಿಕೊಂಡಿರುವ ಚಿಂದೋಡಿ ಶಂಭುಲಿಂಗಪ್ಪ ಅವರಂತಹ ಸಾಧಕರನ್ನು ಪರಿಗಣಿಸಿ, ಸ್ಥಾನ-ಮಾನಗಳನ್ನು ನೀಡುವಂತೆ ಸರ್ಕಾರವನ್ನು ಕೇಳಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ರಂಗಭೂಮಿ ಕ್ಷೇತ್ರದ ಮೂಲಕ ದಾವಣಗೆರೆಗೆ ಕೀರ್ತಿ ತಂದಿರುವ ಚಿಂದೋಡಿ ಮನೆತನದ ಎಲ್ಲಾ ಕಲಾವಿದರನ್ನು ಅಭಿನಂದಿಸಿದರು.

ಸ್ವಾಗತ ಕೋರಿದ ಶ್ರೀ ಗುರು ವಾದ್ಯ ವೃಂದದ ಅಧ್ಯಕ್ಷರೂ, ಹಿರಿಯ ರಂಗಭೂಮಿ ಕಲಾವಿದರೂ ಆದ ಚಿಂದೋಡಿ ಶಂಭುಲಿಂಗಪ್ಪ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ರಂಗಭೂಮಿ ಕ್ಷೇತ್ರದಲ್ಲಿ ಕಳೆದ 53 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ತನ್ನ ಸೇವೆಯನ್ನು ಸರ್ಕಾರ ಪರಿಗಣಿಸದಿರುವುದು ಬೇಸರ ತಂದಿದೆ ಎಂದು ಹೇಳಿದರು.

ಕಾರ್ಯಕ್ರಮದ ಸಂಚಾಲಕ ಬಿ.ಕೆ. ಗಣೇಶ್ ಬಿಸಲೇರಿ ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬಿ. ಶಿವಕುಮಾರ್ ವಂದಿಸಿದರು.

ದರ್ಶನ್ ಮತ್ತು ತಂಡದವರಿಂದ ಸುಗಮ ಸಂಗೀತ ನಡೆಯಿತು. ಕಾರ್ಯಕ್ರಮದ ನಂತರ ಕಿವುಡ ಮಾಡಿದ ಕಿತಾಪತಿ ನಾಟಕ ಪ್ರದರ್ಶನ ಪ್ರೇಕ್ಷಕರ ಗಮನ ಸೆಳೆಯಿತು.

## ಐಜಿಪಿಗೆ ಸಚಿವರ ಶುಭ ಕೋರಿಕೆ



ದಾವಣಗೆರೆ, ಜ. 27 - ನಗರದ ತಮ್ಮ ಗೃಹ ಕಚೇರಿಗೆ ಆಗಮಿಸಿದ್ದ ಪೂರ್ವ ವಲಯದ ನೂತನ ಐಜಿಪಿ ರವಿಕಾಂತೇಗೌಡ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಶುಭ ಕೋರಿದರು. ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಇದ್ದರು.

## ಕೊಕ್ಕನೂರಿನಲ್ಲಿ ಮಾಂಗಲ್ಯ ಸರ ಅಪಹರಣ : ದೂರು ದಾಖಲು

ಮಲೇಬೆನ್ನೂರು, ಜ. 27- ಬೆಳಿಗ್ಗೆ ಮನೆ ಅಂಗಳದಲ್ಲಿ ಕಸ ಗುಡಿಸುತ್ತಿದ್ದ ಮಹಿಳೆಯ ಕಣ್ಣಿಗೆ ಖಾರದ ಪುಡಿ ಎರಚಿ, ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾದ ಘಟನೆ ಕೊಕ್ಕನೂರಿನಲ್ಲಿ ಭಾನುವಾರ ಬೆಳಿಗ್ಗೆ ನಡೆದಿದೆ.

ಈ ಘಟನೆಯಿಂದಾಗಿ ಬೆಳಿಗ್ಗೆ ವಾಕಿಂಗ್ ಮಾಡುವ ಮಹಿಳೆಯರು ಭಯಭೀತರಾಗಿದ್ದಾರೆ. ಗ್ರಾಮದ ವೆಂಕಟಗೌಡ ಅವರ ಪತ್ನಿ ಶ್ರೀಮತಿ ಮಲ್ಲಮ್ಮ ಅವರ ಕೊರಳಿನಲ್ಲಿದ್ದ 37 ಗ್ರಾಂ ತೂಕದ ಮಾಂಗಲ್ಯ ಸರವನ್ನು ಮುಖಕ್ಕೆ ಬಟ್ಟೆ ಕಟ್ಟಿಕೊಂಡು ಬಂದ ಅಪರಿಚಿತ ವ್ಯಕ್ತಿ ಕಿತ್ತುಕೊಂಡು ಪರಾರಿಯಾಗಿರುವ ಬಗ್ಗೆ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಪಿಎಸ್ಐ ಪ್ರಭು ಕೆಳಗಿನಮನಿ ಭೇಟಿ ನೀಡಿ ಪರಿಶೀಲಿಸಿ, ಕಳ್ಳನ ಪತ್ತೆಗಾಗಿ ಬಲೆ ಬೀಸಿದ್ದಾರೆ.


## ಆರನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಹರಪನಹಳ್ಳಿ ರೇವಣಸಿದ್ದಪ್ಪ

ನಿಧನ : 27.01.2019

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನ ನಮಗೆ ದಾರಿ ದೀಪ...
ಸದಾ ನಿಮ್ಮ ಸ್ಮರಣೆಯಲ್ಲಿರುವ.

ಪತ್ನಿ: ನಂಬಕ್ಕ ಮತ್ತು ಮಕ್ಕಳು
ಬಂಧು-ಮಿತ್ರರು ಹಾಗೂ ಹರಪನಹಳ್ಳಿ ವಂಶಸ್ಥರು


# ದಾವಣಗೆರೆಗೆ ವಲಸೆ ಪಟ್ಟೆಹೆಬ್ಬಾತುಗಳು



ದಾವಣಗೆರೆ ಹಲವಾರು ವಿದೇಶಿ-ವಲಸೆ ಹಕ್ಕಿಗಳ ಗಮ್ಯಸ್ಥಾನವಾಗಿರುವುದು ಸಂತೋಷದ ಸಂಗತಿ. ಹೊಸ ವರ್ಷದ ಜನವರಿ ಮೊದಲನೆ ವಾರದಲ್ಲಿ ದಾವಣಗೆರೆಯ ಜಿಲ್ಲೆಯ ಹರಿಹರ ತಾಲ್ಲೂಕಿನ ಕೊಂಡಜ್ಜಿ ಕೆರೆಯಲ್ಲಿ ಇನ್ನೂರಕ್ಕಿಂತ ಹೆಚ್ಚು ಪಟ್ಟೆ ಹೆಬ್ಬಾತುಗಳು ಬಂದಿವೆ. ಇವು ಚಳಿಗಾಲದ ವಲಸೆ ಹಕ್ಕಿಗಳು. ಸರಿ ಸುಮಾರು 5000 ಕಿ.ಮೀ. ದೂರದ ಮಂಗೋಲಿಯಾ ದೇಶದಿಂದ ಬಂದಿರುವ ಹಕ್ಕಿಗಳಿವು.

ಅಲ್ಲಿ ಈಗ ಕೊರೆಯುವ ಚಳಿ. ಕೆರೆಯ ಉಷ್ಣತೆ -20 ಡಿಗ್ರಿ ಸೆಂಟಿಗ್ರೇಡ್‌ಗೆ ಇಳಿದು ಕೆರೆಯ ನೀರೆಲ್ಲಾ ಮಂಜುಗಡ್ಡೆಯಾಗುತ್ತದೆ. ಈ ಸಮಯದಲ್ಲಿ ದಾವಣಗೆರೆಯಲ್ಲಿ ತಾಪಮಾನ +25 ಡಿಗ್ರಿ ಸೆಂಟಿಗ್ರೇಡ್ ಇದ್ದು ಇವುಗಳಿಗೆ ಸೂಕ್ತವಾದ ವಾತಾವರಣವಿರುತ್ತದೆ. ಈ ಹಕ್ಕಿಗಳು ಹಿಮಾಲಯ ಪರ್ವತ ಶ್ರೇಣಿಗಳನ್ನು ದಾಟಿ ಬರುವುದರಿಂದ ಪರ್ವತ ಹಕ್ಕಿ ಎಂದು ಸಹ ಕರೆಯುತ್ತಾರೆ. ವೈಜ್ಞಾನಿಕವಾಗಿ ಅನ್ಸರ್ ಇಂಡಿಕಸ್ ಎನ್ನುವರು. ಪ್ರತಿವರ್ಷವೂ ಭಾರತಕ್ಕೆ ಅದರಲ್ಲೂ ಕರ್ನಾಟಕದ ಕೆಲವು ಪ್ರದೇಶಗಳಿಗೆ ಈ ಹಕ್ಕಿಗಳು ಚಳಿಗಾಲದಲ್ಲಿ ವಲಸೆ ಬರುತ್ತವೆ.

ಈಗಾಗಲೇ ಗದಗದ ಮಾಗಡಿ ಕೆರೆಗೆ ಇವು ನವೆಂಬರ್ ಮೊದಲ ವಾರದಲ್ಲಿ ಬಂದಿವೆ. ಅಪ್ಪಟ ಸಸ್ಯಹಾರಿಯಾಗಿರುವ ಇವು ಹುಲ್ಲಿನ ಚಿಗುರು, ಕಡ್ಲೆ ಕಾಳು ಮುಂತಾದವುಗಳನ್ನು ಆಹಾರವಾಗಿ ತಿನ್ನುತ್ತವೆ. ಸಂಜೆಯಾದೊಡನೆ ಆಹಾರಕ್ಕಾಗಿ ಕೆರೆಯಿಂದ ದೂರದ ಪ್ರದೇಶಗಳಿಗೆ ಪ್ರತ್ಯೇಕ ಗುಂಪುಗಳಲ್ಲಿ ಹೊರಡುತ್ತವೆ. ಬೆಳಿಗ್ಗೆ ಕೆರೆಗೆ ಹಿಂದಿರುಗಿ ಹಗಲಿನಲ್ಲಿ ವಿಶ್ರಾಂತಿ ಪಡೆಯುತ್ತವೆ. ಬೆಳಿಗ್ಗಿನಿಂದ ಸಂಜೆಯವರೆಗೆ ಕೆರೆಯಲ್ಲಿ ಈ ಹಕ್ಕಿಗಳನ್ನು ನೋಡಬಹುದು.

ಕಳೆದ ಹತ್ತು ವರ್ಷಗಳಿಂದ ದಾವಣಗೆರೆಯನ್ನು ಮರೆಯದೇ ಈ ಹಕ್ಕಿಗಳು ಬರುತ್ತಿರುವುದು ಸಂತೋಷದ ಸಂಗತಿ. ಈ ರೀತಿಯ ಅಪೂರ್ವ ಹಕ್ಕಿಗಳಿಂದ ದಾವಣಗೆರೆಗೆ ಪ್ರಪಂಚದ ಪಕ್ಷಿ ಭೂಪಟದಲ್ಲಿ ಹೆಸರು ಬಂದಿರುವುದು ಹೆಮ್ಮೆಯ ವಿಚಾರ. ಎಲ್ಲವೂ ಸರಿಯಿದ್ದರೆ ಈ ಹಕ್ಕಿಗಳು ಮಾರ್ಚ್ ತಿಂಗಳವರೆಗೆ ಇಲ್ಲಿರುತ್ತವೆ. ನಂತರ ಟಿಬೆಟ್‌ಗೆ ತೆರಳಿ ಮರಿ ಮಾಡಿ ಮಂಗೋಲಿಯಾಗೆ ಹಿಂದಿರುಗುತ್ತವೆ.

ಆದರೆ ಕೊಂಡಜ್ಜಿ ಕೆರೆ ಹಾದಿ ತಪ್ಪಿದ ಯುವಕರ ತಂಗುದಾಣವಾಗಿದೆ. ಅರಣ್ಯ ಇಲಾಖೆ, ಪೊಲೀಸ್ ಇಲಾಖೆ ಮತ್ತು ಜಿಲ್ಲಾಡಳಿತ ಜೊತೆಗೂಡಿ ಇಲ್ಲಿನ ಪರಿಸರವನ್ನು ಹಾಳುಗೆಡಹುತ್ತಿರುವ ಯುವಕರನ್ನು ಮತ್ತು ಪರಿಸರ ಮಾಲಿನ್ಯವನ್ನು ತಡೆಗಟ್ಟಬೇಕಿದೆ. ವಿದೇಶದ ಈ ಅಪೂರ್ವ ಅತಿಥಿಗಳನ್ನು ಜತನದಿಂದ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ಹಲವಾರು ವರ್ಷಗಳಿಂದ ದಾವಣಗೆರೆಗೆ ವಲಸೆ ಹಕ್ಕಿಗಳ ದಂಡು ಬರುತ್ತಿರುವುದು ನಮ್ಮೆಲ್ಲರ ಹೆಮ್ಮೆ. ನಮ್ಮ ಪರಿಸರವನ್ನು ಯೋಗ್ಯವಾಗಿರಿಸಿ ಜೀವವೈವಿಧ್ಯಕ್ಕೆ ಕೊಡುಗೆ ನೀಡೋಣ.

- ಚಿತ್ರಲೇಖನ

**- ಡಾ. ಎಸ್. ಶಿಶುಪಾಲ,**
ಸೂಕ್ಷ್ಮ ಜೀವಿಶಾಸ್ತ್ರ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ. (8792674905)

## ಸದ್ಧರ್ಮ ನ್ಯಾಯಪೀಠದ ಕಲಾಪ ಇಲ್ಲ

ಸಿರಿಗೆರೆ, ಜ. 27- ಬರುವ ಫೆಬ್ರವರಿ ದಿನಾಂಕ 3, 10 ಮತ್ತು 17 ಈ ಮೂರು ಸೋಮವಾರಗಳಂದು ಸದ್ಧರ್ಮ ನ್ಯಾಯಪೀಠದ ಕಾರ್ಯ ಕಲಾಪಗಳು ನಡೆಯುವುದಿಲ್ಲ ಎಂದು ಪೀಠದ ಕಾರ್ಯದರ್ಶಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 08194-268829, 268848.


**ಬೇಕಾಗಿದ್ದಾರೆ**

ಆಫೀಸಿನಲ್ಲಿ ಕೆಲಸಕ್ಕೆ ಅಟೆಂಡರ್ಸ್ (ಹುಡುಗರು) ಬೇಕಾಗಿದ್ದಾರೆ.

ಊಟ, ವಸತಿ, ಸಂಬಳ ಕೊಡುತ್ತೇವೆ.
ಸ್ಥಳ : ಮೈಸೂರು (ವಿದ್ಯಾಸಂಸ್ಥೆಗೆ)
ವಯಸ್ಸು : 35 ವರ್ಷದ ಒಳಗಿನವರು ಮಾತ್ರ

ಕರೆ ಮಾಡಿ :
9964801496



## ಐಗೂರು ಅನ್ನಪೂರ್ಣಮ್ಮ ಕೆ.ಜಿ. ನಿಧನ



ದಾವಣಗೆರೆ ತಾಲ್ಲೂಕು ಐಗೂರು ಗ್ರಾಮದ
ದಿ|| ಎಂ.ಕೆ. ನಾಗರಾಜ್ ಅವರ ಧರ್ಮಪತ್ನಿ
ಶ್ರೀಮತಿ ಕೆ.ಜಿ. ಅನ್ನಪೂರ್ಣಮ್ಮ ಅವರು
ದಿನಾಂಕ 25-1-2025ರ ಶನಿವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 78 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28-1-2025ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಐಗೂರು ಗ್ರಾಮದಲ್ಲಿರುವ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಪುತ್ರ-ಸೊಸೆ : ಶ್ರೀಮತಿ ಸುಷ್ಮಾ ಆರ್. ಮತ್ತು ಹೇಮಂತ್‌ಕುಮಾರ್ ಎಂ.ಎನ್.
ಮೊಮ್ಮಕ್ಕಳು ಹಾಗೂ ಮುದಿರಾಮಪ್ಪ ವಂಶಸ್ಥರು, ಐಗೂರು
ಕೊಟ್ರಪ್ಪ ವಂಶಸ್ಥರು, ಕಂದಗಲ್



## ಹುಟ್ಟುಹಬ್ಬದ ಶುಭಾಶಯಗಳು



ಆತ್ಮೀಯ ಸ್ನೇಹಿತರು ಹಾಗು ಸಹೋದರರೂ ಆದ ಕರ್ನಾಟಕ ರಾಜ್ಯ ಸಮಗ್ರ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ
ಶ್ರೀ ಅವಿನಾಶ್
ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

ಶುಭ ಕೋರುವವರು :

✦ ಕಣ್ಣಾಳ ಅಂಜಿನಪ್ಪ, ಆಶ್ರಯ ಸಮಿತಿ ಸದಸ್ಯರು, ಮಹಾನಗರ ಪಾಲಿಕೆ ✦ ಎನ್. ಭಾಸ್ಕರ್‌ರಾವ್, ರಿಯಲ್ ಎಸ್ಟೇಟ್ ಉದ್ಯಮಿ
✦ ಕ.ಸ.ರ.ವೇ ಯ ಬಾಗಲಕೋಟೆ ಜಿಲ್ಲಾ ಅಧ್ಯಕ್ಷರಾದ ವೀರೇಶ್ ✦ ಅಡ್ವೊಕೇಟ್ ಶರತ್ ತಂಡೇಶ್ವರ
✦ ವಾಲಿವುಲ್ಲ ✦ ಜೆರಾಕ್ಸ್ ಅಂಗಡಿ ಪ್ರಕಾಶ್ ✦ ಡಿ.ಜೆ. ರಾಘವೇಂದ್ರ ✦ ಅಳಗೋಡಿ ನಿಂಗಪ್ಪ
✦ ಬೆಳಕೇರಿ ಅಂಜು ✦ ಟಿಪ್ಪು ಮಸ್ತನ್ ✦ ಇನ್ನಯಿತ ✦ ಬಿ. ರಾಘವೇಂದ್ರ ✦ ಬಿ. ಮಂಜು
✦ ಮಲ್ಲೇಶ್ ✦ ಆರ್. ರಮೇಶ್ ✦ ಹರೀಶ್ ✦ ಮಹೇಶ್ ✦ ಹೆಚ್.ಡಿ. ಹನುಮಂತ
✦ ಕಣ್ಣಾಳ ನಾಗರಾಜ್ ✦ ಬಾಬು ✦ ಕಣ್ಣಾಳ ರಾಷ್ಟ್ರಪತಿ ✦ ನಾಗನೂರು ಮಲ್ಲಿ ✦ ರಾಜು ✦ ಯಡಿಹಳ್ಳಿ ಗಣೇಶ್

ಎಸ್.ಎಸ್. ಮಲ್ಲಿಕಾರ್ಜುನ ಯುವಶಕ್ತಿ ಬಳಗ (ರಿ.) ಪದಾಧಿಕಾರಿಗಳು, ಕಣ್ಣಾಳ ಅಂಜಿನಪ್ಪ ಸ್ನೇಹ ಬಳಗ ಮತ್ತು ಅವಿನಾಶ್ ಸ್ನೇಹ ಬಳಗ, ಜಯದೇವ ಸರ್ಕಲ್, ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas